# ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940

(ಅಧಿನಿಯಮ ಸಂಖ್ಯೆ 1940ರ 23)

**[30-3-2003 ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 23 ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 74 ರಿಂದ 111 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ-I

### ಪ್ರಸ್ತಾವಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಇತರ ಕಾನೂನುಗಳ ಅನ್ವಯವನ್ನು ಪ್ರತಿಷೇಧಿಸಿಲ್ಲ.
3. ಪರಿಭಾಷೆಗಳು.

3ಎ. ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕಾನೂನಿಗೆ ಅಥವಾ ಅಸ್ತಿತ್ವದಲ್ಲಿಲ್ಲದೇ ಇರುವ ಯಾವನೇ ಕಾರ್ಯನಿರ್ವಾಹಕನಿಗೆ ಮಾಡಿದ ಉಲ್ಲೇಖಗಳನ್ನು ಅರ್ಥೈಸುವುದು.

4. ವಿಷಪೂರಿತ ವಸ್ತುಗಳ ಬಗ್ಗೆ ಪೂರ್ವ ಭಾವನೆ.

### ಅಧ್ಯಾಯ-II

### ಔಷಧಗಳ ತಾಂತ್ರಿಕ ಸಲಹಾ ಮಂಡಲಿ, ಕೇಂದ್ರ ಔಷಧಗಳ ಪ್ರಯೋಗಶಾಲೆ ಮತ್ತು ಔಷಧಗಳ ಸಮಾಲೋಚನಾ ಸಮಿತಿ

5. ಔಷಧಗಳ ತಾಂತ್ರಿಕ ಸಲಹಾ ಮಂಡಲಿ.
6. ಕೇಂದ್ರ ಔಷಧಗಳ ಪ್ರಯೋಗ ಶಾಲೆ.
7. ಔಷಧಗಳ ಸಮಾಲೋಚನಾ ಸಮಿತಿ.

7ಎ. ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳಿಗೆ 5 ಮತ್ತು 7ನೇ ಪ್ರಕರಣಗಳು ಅನ್ವಯವಾಗತಕ್ಕುದಲ್ಲ.

### ಅಧ್ಯಾಯ-III

### ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಆಮದು

8. ಗುಣಮಟ್ಟಗಳು.
9. ತಪ್ಪಾಗಿ ಗುರುತು ಹಾಕಿದ ಔಷಧಗಳು.

9ಎ. ಕಲಬೆರಕೆ ಮಾಡಿದ ಔಷಧಗಳು.

9ಬಿ. ನೈಜವಲ್ಲದ ಔಷಧಗಳು.
9ಸಿ. ತಪ್ಪಾಗಿ ಗುರುತು ಹಾಕಿದ ಪ್ರಸಾಧನ ಸಾಮಗ್ರಿಗಳು.
9ಡಿ. ನೈಜವಲ್ಲದ ಪ್ರಸಾಧನ ಸಾಮಗ್ರಿಗಳು.
10. ಕೆಲವು ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ಆಮದಿನ ಬಗ್ಗೆ ನಿಷೇಧ.
10ಎ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಆಮದನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರ.
11. ಸಮುದ್ರ ಸೀಮಾ ಸುಂಕಕ್ಕೆ ಸಂಬಂಧಪಟ್ಟ ಕಾನೂನಿನ ಅನ್ವಯ ಮತ್ತು ಸೀಮಾ ಸುಂಕ ಅಧಿಕಾರಿಗಳ ಅಧಿಕಾರಗಳು.
12. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.
13. ಅಪರಾಧಗಳು.
14. ಸರ್ಕಾರವು ವಶಪಡಿಸಿಕೊಳ್ಳುವುದು.
15. ಅಧಿಕಾರ ವ್ಯಾಪ್ತಿ.

## ಅಧ್ಯಾಯ-IV

### ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ, ಮಾರಾಟ ಮತ್ತು ವಿತರಣೆ

16. ಗುಣಮಟ್ಟಗಳು.
17. ತಪ್ಪಾಗಿ ಗುರುತು ಹಾಕಿದ ಔಷಧಗಳು.
17ಎ. ಕಲಬೆರಕೆ ಮಾಡಿದ ಔಷಧಗಳು.
17ಬಿ. ನೈಜವಲ್ಲದ ಔಷಧಗಳು.
17ಸಿ. ತಪ್ಪಾಗಿ ಗುರುತು ಹಾಕಿದ ಪ್ರಸಾಧನ ಸಾಮಗ್ರಿಗಳು.
17ಡಿ. ನೈಜವಲ್ಲದ ಪ್ರಸಾಧನ ಸಾಮಗ್ರಿಗಳು.
18. ಕೆಲವು ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ ಮತ್ತು ಮಾರಾಟದ ಬಗ್ಗೆ ನಿಷೇಧ.
18ಎ. ತಯಾರಕ, ಮುಂತಾದವರ ಹೆಸರನ್ನು ಬಹಿರಂಗಪಡಿಸುವುದು.
18ಬಿ. ದಾಖಲೆಗಳನ್ನು ಇಟ್ಟುಕೊಂಡು ಬರುವುದು ಮತ್ತು ಮಾಹಿತಿಯನ್ನು ಒದಗಿಸುವುದು.
19. ವಾದಗಳು.
20. ಸರ್ಕಾರಿ ವಿಶ್ಲೇಷಣಾಧಿಕಾರಿ.
21. ಪರಿಶೀಲಕರು.
22. ಪರಿಶೀಲಕರ ಅಧಿಕಾರಗಳು.
23. ಪರಿಶೀಲಕರ ಪ್ರಕ್ರಿಯೆ.
24. ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು ತಯಾರಿಸುವ ಮತ್ತು ಇಟ್ಟಿರುವ ಸ್ಥಳವನ್ನು ಬಹಿರಂಗಪಡಿಸಲು ಬದ್ಧರಾದ ವ್ಯಕ್ತಿಗಳು.

25. ಸರ್ಕಾರಿ ವಿಶ್ಲೇಷಣಾಧಿಕಾರಿಗಳ ವರದಿಗಳು.

26. ಉಪ-ಪರೀಕ್ಷೆ ಅಥವಾ ವಿಶ್ಲೇಷಣೆಯನ್ನು ಪಡೆದುಕೊಳ್ಳಲು ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಖರೀದಿದಾರರನ್ನು ಶಕ್ತಗೊಳಿಸುವುದು.

26ಎ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಔಷಧ ಮತ್ತು ಪ್ರಸಾಧನ ಸಾಮಗ್ರಿಯ ತಯಾರಿಕೆ ಮುಂತಾದವುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರಗಳು.

27. ಈ ಅಧ್ಯಾಯವನ್ನು ಉಲ್ಲಂಘಿಸಿ, ಔಷಧಗಳ ತಯಾರಿಕೆ, ಮಾರಾಟ ಮುಂತಾದವುಗಳಿಗಾಗಿ ದಂಡನೆ.

27ಎ. ಈ ಅಧ್ಯಾಯವನ್ನು ಉಲ್ಲಂಘಿಸಿ, ಪ್ರಸಾಧನ ಸಾಮಗ್ರಿಗಳ ತಯಾರಿಕೆ, ಮಾರಾಟ ಮುಂತಾದವುಗಳಿಗಾಗಿ ದಂಡನೆ.

28. ತಯಾರಕ ಮುಂತಾದವರ ಹೆಸರನ್ನು ಬಹಿರಂಗಪಡಿಸದಿರುವುದಕ್ಕಾಗಿ ದಂಡನೆ.

28ಎ. ದಸ್ತಾವೇಜುಗಳು ಮುಂತಾದವುಗಳನ್ನು ಇಡದೇ ಇರುವುದಕ್ಕಾಗಿ ಮತ್ತು ಮಾಹಿತಿಯನ್ನು ಬಹಿರಂಗಪಡಿಸದಿರುವುದಕ್ಕಾಗಿ ದಂಡನೆ.

28ಬಿ. 26ಎ ಪ್ರಕರಣವನ್ನು ಉಲ್ಲಂಘಿಸಿ, ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ತಯಾರಿಕೆ ಮುಂತಾದವುಗಳಿಗಾಗಿ ದಂಡನೆ.

29. ಜಾಹೀರಾತುಗೊಳಿಸುವುದಕ್ಕಾಗಿ ಸರ್ಕಾರಿ ವಿಶ್ಲೇಷಣಾಧಿಕಾರಿಯ ವರದಿಯನ್ನು ಉಪಯೋಗಿಸಿದ್ದಕ್ಕಾಗಿ ದಂಡನೆ.

30. ತರುವಾಯದ ಅಪರಾಧಗಳಿಗಾಗಿ ದಂಡನೆ.

31. ಸರ್ಕಾರಕ್ಕೆ ಸೇರಿಸಿಕೊಳ್ಳುವುದು.

31ಎ. ಸರ್ಕಾರಿ ಇಲಾಖೆಗಳಿಗೆ ಉಪಬಂಧಗಳ ಅನ್ವಯ.

32. ಅಪರಾಧಗಳ ಸಂಜ್ಞೇಯತೆ.

32ಎ. ತಯಾರಕ ಮುಂತಾದವರನ್ನು ಪಕ್ಷಕಾರನನ್ನಾಗಿ ಮಾಡಲು ನ್ಯಾಯಾಲಯದ ಅಧಿಕಾರ.

33. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.

33ಎ. ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳಿಗೆ ಈ ಅಧ್ಯಾಯವು ಅನ್ವಯವಾಗತಕ್ಕುದಲ್ಲ.

## ಅಧ್ಯಾಯ-IVಎ

### ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳಿಗೆ ಸಂಬಂಧಪಟ್ಟ ಉಪಬಂಧಗಳು

33ಬಿ. ಅಧ್ಯಾಯ-IVಎ ದ ಅನ್ವಯ.

33ಸಿ. ಆಯುರ್ವೇದ ಮತ್ತು ಯುನಾನಿ ಔಷಧಗಳ ತಾಂತ್ರಿಕ ಸಲಹಾ ಮಂಡಲಿ.

33ಡಿ. ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಸಮಾಲೋಚನಾ ಸಮಿತಿ.

33ಇ. ತಪ್ಪಾಗಿ ಗುರುತು ಹಾಕಿದ ಔಷಧಗಳು.

33ಇಇ. ಕಲಬೆರಕೆ ಮಾಡಿದ ಔಷಧಗಳು.

33ಇಇಎ. ನೈಜವಲ್ಲದ ಔಷಧಗಳು.

33ಇಇಬಿ. ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಮಾರಾಟಕ್ಕಾಗಿನ ತಯಾರಿಕೆಯ ನಿಯಂತ್ರಣ.

33ಇಇಸಿ. ಕೆಲವು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ತಯಾರಿಕೆ ಮತ್ತು ಮಾರಾಟದ ನಿಷೇಧ.

33ಇಇಡಿ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳ ತಯಾರಿಕೆ ಮುಂತಾದವುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರ.

33ಎಫ್. ಸರ್ಕಾರಿ ವಿಶ್ಲೇಷಣಾಧಿಕಾರಿಗಳು.

33ಜಿ. ಪರಿಶೀಲಕರು.

33ಹೆಚ್. 22, 23, 24 ಮತ್ತು 25ನೇ ಪ್ರಕರಣಗಳ ಉಪಬಂಧಗಳ ಅನ್ವಯ.

33ಐ. ಈ ಅಧ್ಯಾಯವನ್ನು ಉಲ್ಲಂಘಿಸಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧದ ತಯಾರಿಕೆ, ಮಾರಾಟ ಮುಂತಾದವುಗಳಿಗಾಗಿನ ದಂಡನೆ.

33ಜೆ. ತರುವಾಯದ ಅಪರಾಧಗಳಿಗಾಗಿ ದಂಡನೆ.

33ಕೆ. ಸರ್ಕಾರಕ್ಕೆ ಸೇರಿಸಿಕೊಳ್ಳುವುದು.

33ಎಲ್. ಸರ್ಕಾರಿ ಇಲಾಖೆಗಳಿಗೆ ಉಪಬಂಧಗಳ ಅನ್ವಯ.

33ಎಂ. ಅಪರಾಧದ ಸಂಜ್ಞೇಯತೆ.

33ಎನ್. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.

33ಓ. ಒಂದನೇ ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.

## ಅಧ್ಯಾಯ-V

### ಸಂಕೀರ್ಣ

33ಪಿ. ನಿರ್ದೇಶನಗಳನ್ನು ಕೊಡುವ ಅಧಿಕಾರ.

34. ಕಂಪನಿಗಳಿಂದ ಅಪರಾಧಗಳು.

34ಎ. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು.

34ಎಎ. ಕಿರುಕುಳಕಾರಿ ಶೋಧನೆ ಅಥವಾ ಅಭಿಗ್ರಹಣಕ್ಕಾಗಿ ದಂಡನೆ.

35. ಈ ಅಧಿನಿಯಮದ ಮೇರೆಗೆ ಕೊಟ್ಟ ಶಿಕ್ಷೆಗಳ ಆದೇಶವನ್ನು ಪ್ರಕಟಿಸುವುದು.

36. ಹೆಚ್ಚಿಸಲಾದ ದಂಡನೆಗಳನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.

36ಎ. ಕೆಲವು ಅಪರಾಧಗಳನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡತಕ್ಕುದು.

37. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ.

38. ಸಂಸತ್ತಿನ ಮುಂದೆ ನಿಯಮಗಳನ್ನು ಇಡತಕ್ಕುದು.

ಒಂದನೇ ಅನುಸೂಚಿ.

ಎರಡನೇ ಅನುಸೂಚಿ.

# ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940

(ಅಧಿನಿಯಮ ಸಂಖ್ಯೆ 1940ರ 23)

[10ನೇ ಏಪ್ರಿಲ್, 1940]

ಔಷಧಗಳ ಮತ್ತು ಪ್ರಸಾಧನ ಸಾಮಗ್ರಿಗಳ ಆಮದು, ತಯಾರಿಕೆ, ವಿತರಣೆ ಮತ್ತು ಮಾರಾಟವನ್ನು ನಿಯಂತ್ರಿಸುವ ಅಧಿನಿಯಮ.

ಔಷಧಗಳ ಮತ್ತು ಪ್ರಸಾಧನ ಸಾಮಗ್ರಿಗಳ ಆಮದು, ತಯಾರಿಕೆ, ವಿತರಣೆ ಮತ್ತು ಮಾರಾಟವನ್ನು ನಿಯಂತ್ರಿಸುವುದು ವಿಹಿತವಾಗಿರುವುದರಿಂದ;

ಮತ್ತು, ಭಾರತ ಸರ್ಕಾರದ ಅಧಿನಿಯಮ, 1935ರ 103ನೇ ಪ್ರಕರಣದ ನಿಬಂಧನೆಗಳಿಗನುಸಾರವಾಗಿ, ಮೇಲೆ ನಮೂದಿಸಲಾಗಿರುವಂಥ ವಿಷಯಗಳಿಗೆ ಮತ್ತು ಸದರಿ ಅಧಿನಿಯಮದ ಏಳನೇ ಅನುಸೂಚಿಯ IIನೇ ಪಟ್ಟಿಯಲ್ಲಿ ನಮೂದಿಸಲಾದಂತೆ, ಅದಕ್ಕೆ ಅನುಗತವಾದ ವಿಷಯಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಪ್ರಾಂತ್ಯಗಳ ವಿಧಾನಮಂಡಲಗಳು ನಿರ್ಣಯಗಳನ್ನು ಅಂಗೀಕರಿಸಿರುವುದರಿಂದ;

ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ :-

## ಅಧ್ಯಾಯ- I
## ಪ್ರಸ್ತಾವಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೂಡಲೇ ಜಾರಿಗೆ ಬರತಕ್ಕುದು; ಆದರೆ IIIನೇ ಅಧ್ಯಾಯವು, ಕೇಂದ್ರ ಸರ್ಕಾರವು, ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕುದು ಮತ್ತು IVನೇ ಅಧ್ಯಾಯವು, ಯಾವುದೇ ನಿರ್ದಿಷ್ಟ ರಾಜ್ಯದಲ್ಲಿ ಈ ಬಗ್ಗೆ ಆ ರಾಜ್ಯ ಸರ್ಕಾರವು, ಅದೇ ರೀತಿಯ ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕುದು:

ಪರಂತು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ IIIನೇ ಅಧ್ಯಾಯವು, ಔಷಧ ಮತ್ತು ಪ್ರಸಾಧನ ಸಾಮಗ್ರಿ (ತಿದ್ದುಪಡಿ) ಅಧಿನಿಯಮ, 1972 (1972ರ 19) ರ ಪ್ರಾರಂಭದ ತರುವಾಯ, ಈ ಬಗ್ಗೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕುದು.

**2. ಇತರ ಕಾನೂನುಗಳ ಅನ್ವಯವನ್ನು ಪ್ರತಿಷೇಧಿಸಿಲ್ಲ.-** ಈ ಅಧಿನಿಯಮದ ಉಪಬಂಧಗಳು, ಅಪಾಯಕಾರಿ ಔಷಧ ಅಧಿನಿಯಮ, 1930 (1930ರ 2) ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಜೊತೆಗೆ ಇರತಕ್ಕುದು, ಆದರೆ ಅದನ್ನು ಅಲ್ಪೀಕರಿಸತಕ್ಕುದಲ್ಲ.

**3. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ವಿಷಯ ಮತ್ತು ಸಂದರ್ಭದಲ್ಲಿ ತದ್ವಿರುದ್ಧವಾದುದು ಏನೇ ಇದ್ದ ಹೊರತು,-

(ಎ) "ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧ" ಎಂಬುದು, ಮನುಷ್ಯರು ಅಥವಾ ಪ್ರಾಣಿಗಳಲ್ಲಿ ರೋಗ ಅಥವಾ ಅಸ್ವಸ್ಥತೆಯ ರೋಗನಿದಾನ, ಚಿಕಿತ್ಸೆ, ಉಪಶಮನ ಅಥವಾ ನಿವಾರಣೆಗಾಗಿ ಅಥವಾ ಅದರಲ್ಲಿ ಆಂತರಿಕ ಅಥವಾ ಬಾಹ್ಯ ಉಪಯೋಗಕ್ಕಾಗಿ ಉದ್ದೇಶಿಸಿರುವ ಮತ್ತು ಒಂದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆಯುರ್ವೇದ (ಸಿದ್ಧ) ಮತ್ತು ಯುನಾನಿ (ತಿಬೆ) ಪದ್ಧತಿಯ ಆಧಾರಪೂರ್ವಕ ಪುಸ್ತಕಗಳಲ್ಲಿ ವಿವರಿಸಿರುವ ಸೂತ್ರಗಳಿಗನುಸಾರವಾಗಿ ಅನನ್ಯವಾಗಿ ತಯಾರಿಸಿದ ಮದ್ದುಗಳನ್ನು ಒಳಗೊಳ್ಳುತ್ತದೆ.

(ಎಎ) "ಮಂಡಲಿ" ಎಂದರೆ,-

(i) ಆಯುರ್ವೇದ (ಸಿದ್ಧ) ಅಥವಾ ಯುನಾನಿ ಔಷಧಕ್ಕೆ ಸಂಬಂಧಪಟ್ಟಂತೆ 33ಸಿ ಪ್ರಕರಣದ ಮೇರೆಗೆ ರಚಿಸಲಾದ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳ ತಾಂತ್ರಿಕ ಸಲಹಾ ಮಂಡಲಿ; ಮತ್ತು

(ii) ಯಾವುದೇ ಇತರ ಔಷಧ ಅಥವಾ ಪ್ರಸಾಧನ ಸಾಮಗ್ರಿಗೆ ಸಂಬಂಧಪಟ್ಟಂತೆ 5ನೇ ಪ್ರಕರಣದ ಮೇರೆಗೆ ರಚಿಸಲಾದ ಔಷಧಗಳ ತಾಂತ್ರಿಕ ಸಲಹಾ ಮಂಡಲಿ;

(ಎಎಎ) "ಪ್ರಸಾಧನ ಸಾಮಗ್ರಿ" ಎಂದರೆ - ಸ್ವಚ್ಛಪಡಿಸುವುದು, ಸುಂದರಗೊಳಿಸುವುದು, ಆಕರ್ಷಣೀಯತೆಯನ್ನು ಸಂವರ್ಧಿಸುವುದು ಅಥವಾ ಚಹರೆಯನ್ನು ಬದಲಾಯಿಸುವುದು- ಇವುಗಳಿಗಾಗಿ ಮಾನವ ದೇಹದ ಮೇಲೆ ಅಥವಾ ಅದರ ಯಾವುದೇ ಭಾಗದ ಮೇಲೆ ತಿಕ್ಕುವುದು, ಸುರಿಯುವುದು, ಪ್ರೋಕ್ಷಿಸುವುದು ಅಥವಾ ಸಿಂಪಡಿಸುವುದು ಅಥವಾ ದೇಹದೊಳಕ್ಕೆ ಸೇರಿಸುವುದು ಅಥವಾ ಅದಕ್ಕೆ ಅನ್ಯಥಾ ಹಚ್ಚುವುದಕ್ಕಾಗಿ ಉದ್ದೇಶಿಸಿದ ಯಾವುದೇ ವಸ್ತು ಮತ್ತು ಪ್ರಸಾಧನ ಸಾಮಗ್ರಿಯ ಘಟಕವೆಂದು ಉಪಯೋಗಿಸುವುದಕ್ಕಾಗಿ ಉದ್ದೇಶಿಸಿದ ಯಾವುದೇ ವಸ್ತುವನ್ನು ಅದು ಒಳಗೊಳ್ಳುತ್ತದೆ.

(ಬಿ) "ಔಷಧ" ಎಂಬುದು, -

(i) ಸೊಳ್ಳೆಗಳಂಥ ಕೀಟಗಳನ್ನು ಹತ್ತಿರ ಬರಗೊಡದಿರುವ ಉದ್ದೇಶಕ್ಕಾಗಿ ಮನುಷ್ಯನ ಶರೀರದ ಮೇಲೆ ಹಚ್ಚುವ ತಯಾರಿಕೆಗಳನ್ನು ಒಳಗೊಂಡು ಮನುಷ್ಯರು ಅಥವಾ ಪ್ರಾಣಿಗಳ ಬಾಹ್ಯ ಅಥವಾ ಆಂತರಿಕ ಉಪಯೋಗಕ್ಕಾಗಿನ ಎಲ್ಲಾ ಮದ್ದುಗಳು ಮತ್ತು ಮನುಷ್ಯರು ಅಥವಾ ಪ್ರಾಣಿಗಳಲ್ಲಿನ ಯಾವುದೇ ರೋಗ ಅಥವಾ ಅಸ್ವಸ್ಥತೆಯ ರೋಗನಿದಾನ, ಚಿಕಿತ್ಸೆ, ಉಪಶಮನ ಅಥವಾ ನಿವಾರಣೆಗಾಗಿ ಅಥವಾ ಅದರಲ್ಲಿ ಉಪಯೋಗಿಸಲು ಉದ್ದೇಶಿಸಿದ ಎಲ್ಲಾ ಪದಾರ್ಥಗಳು;

(ii) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲ-ಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ಮಾನವ ದೇಹದ ರಚನೆ ಅಥವಾ ಅದರ ಯಾವುದೇ ಕ್ರಿಯೆಗೆ ಬಾಧಕವನ್ನುಂಟುಮಾಡಲು ಉದ್ದೇಶಿಸಿದಂಥ ಅಥವಾ ಮನುಷ್ಯರು ಅಥವಾ ಪ್ರಾಣಿಗಳಲ್ಲಿ ರೋಗವನ್ನು ಉಂಟುಮಾಡುವಂಥ ಕ್ರಿಮಿಗಳು

ಅಥವಾ ಕೀಟಗಳ ನಾಶಕ್ಕಾಗಿ ಉಪಯೋಗಿಸಲು ಉದ್ದೇಶಿಸಿದಂಥ ವಸ್ತುಗಳು (ಆಹಾರವನ್ನು ಹೊರತುಪಡಿಸಿ);

(iii) ಖಾಲಿ ಜಿಲಿಟಿನ್ ಕ್ಯಾಪ್ಸೂಲುಗಳನ್ನೂ ಒಳಗೊಂಡು ಔಷಧದ ಘಟಕಗಳೆಂದು ಉಪಯೋಗಿಸುವುದಕ್ಕಾಗಿ ಉದ್ದೇಶಿಸಿದ ಎಲ್ಲಾ ಪದಾರ್ಥಗಳು; ಮತ್ತು

(iv) ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ, ಮನುಷ್ಯರು ಅಥವಾ ಪ್ರಾಣಿಗಳಲ್ಲಿ ರೋಗ ಅಥವಾ ಅಸ್ವಸ್ಥತೆಯ ರೋಗನಿದಾನ ಚಿಕಿತ್ಸೆ, ಉಪಶಮನ ಅಥವಾ ನಿವಾರಣೆಯಲ್ಲಿ ಆಂತರಿಕ ಅಥವಾ ಬಾಹ್ಯ ಉಪಯೋಗಕ್ಕಾಗಿ ಉದ್ದೇಶಿಸಿದಂಥ ಸಾಧನಗಳು

– ಇವುಗಳನ್ನು ಒಳಗೊಳ್ಳುತ್ತದೆ.

(ಸಿ) "ಸರ್ಕಾರಿ ವಿಶ್ಲೇಷಣಾಧಿಕಾರಿ" ಎಂದರೆ, –

(i) ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಕ್ಕೆ ಸಂಬಂಧಪಟ್ಟಂತೆ, 33ಎಫ್ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೇಮಕ ಮಾಡಿದ ಸರ್ಕಾರಿ ವಿಶ್ಲೇಷಣಾಧಿಕಾರಿ;

(ii) ಇತರ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಗೆ ಸಂಬಂಧಪಟ್ಟಂತೆ, 20ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೇಮಕ ಮಾಡಿದ ಸರ್ಕಾರದ ವಿಶ್ಲೇಷಣಾಧಿಕಾರಿ;

(ಡಿ) [ * * * ]

(ಇ) "ಪರಿಶೀಲಕ" ಎಂದರೆ, –

(i) ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಕ್ಕೆ ಸಂಬಂಧಪಟ್ಟಂತೆ, 33ಜಿ ಪ್ರಕರಣದ ಮೇರೆಗೆ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೇಮಕ ಮಾಡಿದ ಪರಿಶೀಲಕ; ಮತ್ತು

(ii) ಇತರ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಗೆ ಸಂಬಂಧಪಟ್ಟಂತೆ, 21ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರವು ನೇಮಕ ಮಾಡಿದ ಪರಿಶೀಲಕ;

(ಎಫ್) ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಗೆ ಸಂಬಂಧಪಟ್ಟಂತೆ "ತಯಾರಿಕೆ" ಎಂಬುದು, ಮಾರಾಟ ಅಥವಾ ವಿತರಣೆಯ ದೃಷ್ಟಿಯಿಂದ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಮಾಡುವುದು, ಬದಲಾಯಿಸುವುದು, ಅಲಂಕಾರ ಮಾಡುವುದು, ಒಪ್ಪವಿಡುವುದು, ಪ್ಯಾಕ್ ಮಾಡುವುದು, ಲೇಬಲ್ಲುಗಳನ್ನು ಅಂಟಿಸುವುದು, ಒಡೆಯುವುದು ಅಥವಾ ಅನ್ಯಥಾ ಸಂಸ್ಕರಿಸುವುದು ಅಥವಾ ಅಳವಡಿಸುವುದು – ಇವುಗಳಿಗೆ

ಸಂಬಂಧಪಟ್ಟ ಯಾವುದೇ ಕಾರ್ಯವಿಧಾನ ಅಥವಾ ಕಾರ್ಯವಿಧಾನದ ಭಾಗವನ್ನು ಒಳಗೊಳ್ಳುತ್ತದೆ. ಆದರೆ, ಅದು ಚಿಲ್ಲರೆ ವ್ಯಾಪಾರದ ಸಾಮಾನ್ಯ ಕ್ರಮದಲ್ಲಿ ಯಾವುದೇ ಔಷಧವನ್ನು ಮಿಶ್ರಣ ಮಾಡಿಕೊಡುವುದನ್ನು ಅಥವಾ ತಯಾರಿಸಿ ಕೊಡುವುದನ್ನು ಅಥವಾ ಯಾವುದೇ ಔಷಧವನ್ನು ಅಥವಾ ಪ್ರಸಾಧನ ಸಾಮಗ್ರಿಯನ್ನು ಪ್ಯಾಕು ಮಾಡುವುದನ್ನು ಒಳಗೊಳ್ಳುವುದಿಲ್ಲ ಮತ್ತು "ತಯಾರಿಸುವುದು" ಎಂಬುದನ್ನು ತದನುಸಾರವಾಗಿ ಅರ್ಥೈಸತಕ್ಕುದು.

(ಜಿ) "ಆಮದು ಮಾಡಿಕೊಳ್ಳುವುದು" ಎಂಬುದಕ್ಕೆ ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ಭಾರತದೊಳಕ್ಕೆ ತರುವುದು ಎಂದು ಅರ್ಥ;

(ಹೆಚ್) "ಪೇಟೆಂಟ್ ಅಥವಾ ಮಾಲೀಕತ್ವದ ಮದ್ದು" ಎಂದರೆ, –

(i) ಆಯುರ್ವೇದ, ಸಿದ್ಧ ಅಥವಾ ಯುನಾನಿ ತಿಬ್ ಪದ್ಧತಿಗಳ ಮದ್ದಿಗೆ ಸಂಬಂಧಪಟ್ಟಂತೆ ಒಂದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆಯುರ್ವೇದ, ಸಿದ್ಧ ಅಥವಾ ಯುನಾನಿ ತಿಬ್ ಪದ್ಧತಿಯ ಮದ್ದಿನ ಆಧಾರಪೂರ್ವಕ ಪುಸ್ತಕಗಳಲ್ಲಿ ವಿವರಿಸಿರುವ ಸೂತ್ರಗಳಲ್ಲಿ ನಮೂದಿಸಿದಂಥ ಅಂಶಗಳನ್ನು ಮಾತ್ರ ಒಳಗೊಂಡಿರುವ ಎಲ್ಲಾ ಸೂತ್ರೀಕರಣಗಳು; ಆದರೆ, ಅನ್ನನಾಳದ ಮೂಲಕವಲ್ಲದ ಬೇರೆ ಮಾರ್ಗದ ಮೂಲಕ ಕೊಡುವಂಥ ಮದ್ದನ್ನು ಮತ್ತು (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಆಧಾರಪೂರ್ವಕ ಪುಸ್ತಕಗಳಲ್ಲಿ ಒಳಗೊಂಡ ಸೂತ್ರೀಕರಣವನ್ನು ಸಹ ಅದು ಒಳಗೊಳ್ಳುವುದಿಲ್ಲ;

(ii) ಯಾವುದೇ ಇತರ ವೈದ್ಯ ಪದ್ಧತಿಗೆ ಸಂಬಂಧಪಟ್ಟಂತೆ, ಮನುಷ್ಯರು ಅಥವಾ ಪ್ರಾಣಿಗಳ ಸಂಬಂಧದಲ್ಲಿ, ಆಂತರಿಕ ಅಥವಾ ಬಾಹ್ಯ ಉಪಯೋಗಕ್ಕೆ ಕೊಡುವುದಕ್ಕಾಗಿ ಸಿದ್ಧ ರೂಪದಲ್ಲಿ ಕೊಟ್ಟ ಮತ್ತು ತತ್ಕಾಲದ ಭಾರತೀಯ ವೈದ್ಯ ಗ್ರಂಥದ ಆವೃತ್ತಿಯಲ್ಲಿ ಅಥವಾ 5ನೇ ಪ್ರಕರಣದ ಮೇರೆಗೆ ರಚಿಸಿದ ಔಷಧಗಳ ತಾಂತ್ರಿಕ ಸಲಹಾ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವುದೇ ಇತರ ವೈದ್ಯಗ್ರಂಥದಲ್ಲಿ ಒಳಗೊಂಡಿರದಂಥ ರೋಗ ಪರಿಹಾರಕ ಅಥವಾ ಔಷಧ ಸೂಚಿಯಾಗಿರುವಂಥ ಔಷಧಿ;

(ಐ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

**3ಎ. ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕಾನೂನಿಗೆ ಅಥವಾ ಅಸ್ತಿತ್ವದಲ್ಲಿಲ್ಲದೇ ಇರುವ ಯಾವನೇ ಕಾರ್ಯನಿರ್ವಾಹಕನಿಗೆ ಮಾಡಿದ ಉಲ್ಲೇಖಗಳನ್ನು ಅರ್ಥೈಸುವುದು.–** ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕಾನೂನಿಗೆ ಅಥವಾ ಅಸ್ತಿತ್ವದಲ್ಲಿಲ್ಲದೇ ಇರುವಂಥ ಯಾವನೇ ಕಾರ್ಯನಿರ್ವಾಹಕನಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು, ಆ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯದಲ್ಲಿ

ಜಾರಿಯಲ್ಲಿರುವ ಸಂವಾದಿ ಕಾನೂನಿಗೆ ಅಥವಾ ಅಲ್ಲಿ ಅಸ್ತಿತ್ವದಲ್ಲಿರುವ ಸಂವಾದಿ ಕಾರ್ಯನಿರ್ವಾಹಕನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

**4. ವಿಷಪೂರಿತ ವಸ್ತುಗಳ ಬಗ್ಗೆ ಪೂರ್ವ ಭಾವನೆ.**- ಅಧ್ಯಾಯ II ಅಥವಾ ಅಧ್ಯಾಯ IV ಅಥವಾ ಅಧ್ಯಾಯ IVಎ ಮೇರೆಗೆ ರಚಿಸಿದ ನಿಯಮದ ಮೂಲಕ ವಿಷಪೂರಿತವೆಂದು ನಿರ್ದಿಷ್ಟಪಡಿಸಿದ ಯಾವುದೇ ವಸ್ತುವನ್ನು ಸಂದರ್ಭಾನುಸಾರ ಅಧ್ಯಾಯ III ಅಥವಾ ಅಧ್ಯಾಯ IV ಅಥವಾ ಅಧ್ಯಾಯ IVಎ ದ ಉದ್ದೇಶಗಳಿಗಾಗಿ ವಿಷಪೂರಿತ ವಸ್ತುವೆಂಬುದಾಗಿ ಭಾವಿಸತಕ್ಕುದು.

## ಅಧ್ಯಾಯ - II

## ಔಷಧಗಳ ತಾಂತ್ರಿಕ ಸಲಹಾ ಮಂಡಲಿ, ಕೇಂದ್ರ ಔಷಧಗಳ ಪ್ರಯೋಗ ಶಾಲೆ ಮತ್ತು ಔಷಧಗಳ ಸಮಾಲೋಚನಾ ಸಮಿತಿ

**5. ಔಷಧಗಳ ತಾಂತ್ರಿಕ ಸಲಹಾ ಮಂಡಲಿ.**- (1) ಕೇಂದ್ರ ಸರ್ಕಾರವು, ಆದಷ್ಟು ಬೇಗನೇ ಈ ಅಧಿನಿಯಮದ ಜಾರಿಯಿಂದ ಉದ್ಭವಿಸುವ ತಾಂತ್ರಿಕ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲು ಮತ್ತು ಈ ಅಧಿನಿಯಮದ ಮೂಲಕ ಮಂಡಲಿಗೆ ವಹಿಸಿಕೊಟ್ಟಿರುವ ಇತರ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು (ಔಷಧಗಳ ತಾಂತ್ರಿಕ ಸಲಹಾ ಮಂಡಲಿ ಎಂದು ಕರೆಯಲಾಗುವ) ಒಂದು ಮಂಡಲಿಯನ್ನು ರಚಿಸತಕ್ಕುದು.

(2) ಮಂಡಲಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ,-

(i) ಆರೋಗ್ಯ ಸೇವೆಗಳ ಮಹಾ ನಿರ್ದೇಶಕ - ಇದರ ಅಧ್ಯಕ್ಷ, ಪದನಿಮಿತ್ತ;

(ii) ಭಾರತದ ಔಷಧಗಳ ನಿಯಂತ್ರಣಾಧಿಕಾರಿ, ಪದನಿಮಿತ್ತ;

(iii) ಕೇಂದ್ರ ಔಷಧಗಳ ಪ್ರಯೋಗಶಾಲೆ, ಕಲ್ಕತ್ತಾ - ಇದರ ನಿರ್ದೇಶಕ, ಪದನಿಮಿತ್ತ;

(iv) ಕೇಂದ್ರ ಸಂಶೋಧನಾ ಸಂಸ್ಥೆ, ಕಸೌಲಿ - ಇದರ ನಿರ್ದೇಶಕ, ಪದನಿಮಿತ್ತ;

(v) ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ, ಇಜಾತ್‌ನಗರ - ಇದರ ನಿರ್ದೇಶಕ, ಪದನಿಮಿತ್ತ;

(vi) ಭಾರತದ ವೈದ್ಯಕೀಯ ಪರಿಷತ್ತಿನ ಅಧ್ಯಕ್ಷ, ಪದನಿಮಿತ್ತ;

(vii) ಭಾರತ ಔಷಧಗಾರಿಕೆ ಪರಿಷತ್ತಿನ ಅಧ್ಯಕ್ಷ, ಪದನಿಮಿತ್ತ;

(viii) ಕೇಂದ್ರ ಔಷಧ ಸಂಶೋಧನಾ ಸಂಸ್ಥೆ, ಲಕ್ನೋ - ಇದರ ನಿರ್ದೇಶಕ, ಪದನಿಮಿತ್ತ;

(ix) ರಾಜ್ಯಗಳಲ್ಲಿ ಔಷಧಗಳ ನಿಯಂತ್ರಣದ ಪ್ರಭಾರದಲ್ಲಿರುವ ವ್ಯಕ್ತಿಗಳ ಪೈಕಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಇಬ್ಬರು ವ್ಯಕ್ತಿಗಳು ;

(x) ಭಾರತೀಯ ವಿಶ್ವವಿದ್ಯಾನಿಲಯ ಅಥವಾ ಅದಕ್ಕೆ ಸಂಲಗ್ನಗೊಂಡಿರುವ ಒಂದು ಕಾಲೇಜಿನ ಸಿಬ್ಬಂದಿವರ್ಗದಲ್ಲಿ ಔಷಧಗಾರಿಕೆ ಅಥವಾ ಔಷಧ ತಯಾರಿಕಾ ರಸಾಯನಶಾಸ್ತ್ರ ಅಥವಾ ಔಷಧಮೂಲಿಕೆ ಶಾಸ್ತ್ರದ ಶಿಕ್ಷಕರಿಂದ, ಭಾರತದ ಔಷಧಗಾರಿಕೆ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯು ಚುನಾಯಿಸಬೇಕಾದ ಒಬ್ಬ ವ್ಯಕ್ತಿ;

(xi) ಭಾರತೀಯ ವಿಶ್ವವಿದ್ಯಾನಿಲಯ ಅಥವಾ ಅದಕ್ಕೆ ಸಂಲಗ್ನಗೊಂಡ ಕಾಲೇಜಿನ ಸಿಬ್ಬಂದಿಯಲ್ಲಿ, ಔಷಧ ಅಥವಾ ಚಿಕಿತ್ಸಾ ಶಾಸ್ತ್ರದ ಶಿಕ್ಷಕರಿಂದ, ಭಾರತದ ವೈದ್ಯಕೀಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯು ಚುನಾಯಿಸಬೇಕಾದ ಒಬ್ಬ ವ್ಯಕ್ತಿ;

(xii) ಔಷಧ ತಯಾರಿಕಾ ಕೈಗಾರಿಕೆಯಿಂದ, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ ;

(xiii) ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ಆಡಳಿತ ಮಂಡಲಿಯು ಚುನಾಯಿಸಬೇಕಾದ ಒಬ್ಬ ಔಷಧ ಶಾಸ್ತ್ರಜ್ಞ;

(xiv) ಭಾರತೀಯ ವೈದ್ಯಕೀಯ ಸಂಸ್ಥೆಯ ಕೇಂದ್ರ ಪರಿಷತ್ತು ಚುನಾಯಿಸಬೇಕಾದ ಒಬ್ಬ ವ್ಯಕ್ತಿ ;

(xv) ಭಾರತೀಯ ಔಷಧ ತಯಾರಿಕಾ ಪರಿಷತ್ತು ಚುನಾಯಿಸಬೇಕಾದ ಒಬ್ಬ ವ್ಯಕ್ತಿ;

(xvi) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ಈ ಅಧಿನಿಯಮದ ಮೇರೆಗೆ ಸರ್ಕಾರಿ ವಿಶ್ಲೇಷಣಾಧಿಕಾರಿಯಾಗಿ ನೇಮಕಗೊಂಡಿರುವ ಇಬ್ಬರು ವ್ಯಕ್ತಿಗಳು.

(3) ಮಂಡಲಿಯ ನಾಮನಿರ್ದೇಶಿತ ಮತ್ತು ಚುನಾಯಿತ ಸದಸ್ಯರು, ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದು. ಆದರೆ, ಅವರು ಮರು-ನಾಮನಿರ್ದೇಶನ ಮತ್ತು ಮರು ಚುನಾವಣೆಗಾಗಿ ಅರ್ಹರಾಗಿರತಕ್ಕದು:

ಪರಂತು, (2)ನೇ ಉಪ-ಪ್ರಕರಣದ (ix)ನೇ ಖಂಡದ ಅಥವಾ (x) ನೇ ಖಂಡ ಅಥವಾ (xi)ನೇ ಖಂಡ ಅಥವಾ (xvi)ನೇ ಖಂಡದ ಮೇರೆಗೆ ಸಂದರ್ಭಾನುಸಾರ ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ವ್ಯಕ್ತಿಯು, ಯಾವ ಪದವನ್ನು ಹೊಂದಿರುವ ಕಾರಣದಿಂದ ಅವನು ಮಂಡಲಿಗೆ ನಾಮನಿರ್ದೇಶಿತನಾದನೋ ಅಥವಾ ಚುನಾಯಿತನಾದನೋ ಆ ಪದದ ನೇಮಕಾತಿಯನ್ನು ಅವನು ಧಾರಣ ಮಾಡಿರುವವರೆಗೆ, ಪದಧಾರಣ ಮಾಡತಕ್ಕದು.

(4) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು ಕೋರಂ ಅನ್ನು ನಿಗದಿಪಡಿಸುವ ಮತ್ತು ತನ್ನದೇ ಆದ ಪ್ರಕ್ರಿಯೆಯನ್ನು ಮತ್ತು ಅದು ನಿರ್ವಹಿಸಬೇಕಾದ ಎಲ್ಲಾ ವ್ಯವಹಾರಗಳ ನಡವಳಿಕೆಯನ್ನು ನಿಯಂತ್ರಿಸುವ ಉಪವಿಧಿಗಳನ್ನು ರಚಿಸಬಹುದು.

(5) ಮಂಡಲಿಯು, ಉಪ ಸಮಿತಿಗಳನ್ನು ರಚಿಸಬಹುದು ಮತ್ತು ಅಂಥ ಉಪಸಮಿತಿಗಳಿಗೆ ಮೂರು ವರ್ಷಗಳಿಗೆ ಮೀರದಂತೆ ಅದು ತೀರ್ಮಾನಿಸಬಹುದಾದಂಥ ಅವಧಿಗಳವರೆಗೆ ಅಥವಾ ನಿರ್ದಿಷ್ಟ ವಿಷಯಗಳ ಪರ್ಯಾಲೋಚನೆಗಾಗಿ ತಾತ್ಕಾಲಿಕವಾಗಿ ಮಂಡಲಿಯ ಸದಸ್ಯರಾಗಿಲ್ಲದಿರುವ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(6) ಮಂಡಲಿಯ ಪ್ರಕಾರ್ಯಗಳನ್ನು, ಅದರಲ್ಲಿ ಯಾವುದೇ ಖಾಲಿ ಸ್ಥಾನವು ಇದ್ದಾಗ್ಯೂ ಚಲಾಯಿಸಬಹುದು.

(7) ಕೇಂದ್ರ ಸರ್ಕಾರವು, ಮಂಡಲಿಯ ಕಾರ್ಯದರ್ಶಿಯಾಗಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕುದು ಮತ್ತು ಕೇಂದ್ರ ಸರ್ಕಾರವು ಅವಶ್ಯವೆಂದು ಪರ್ಯಾಲೋಚಿಸುವಂಥ ಲಿಪಿಕ ಮತ್ತು ಇತರ ಸಿಬ್ಬಂದಿಯನ್ನು ಅದು ಮಂಡಲಿಗೆ ಒದಗಿಸತಕ್ಕುದು.

**6. ಕೇಂದ್ರ ಔಷಧಗಳ ಪ್ರಯೋಗಶಾಲೆ.–** (1) ಕೇಂದ್ರ ಸರ್ಕಾರವು, ಆದಷ್ಟೂ ಬೇಗ ಕೇಂದ್ರ ಔಷಧಗಳ ಪ್ರಯೋಗ ಶಾಲೆಯನ್ನು, ಈ ಅಧಿನಿಯಮ ಅಥವಾ ಈ ಅಧ್ಯಾಯದ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಮೂಲಕ ಆ ಪ್ರಯೋಗ ಶಾಲೆಗೆ ಕೊಟ್ಟ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವುದಕ್ಕೆ, ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ನಿರ್ದೇಶಕನ ನಿಯಂತ್ರಣದಲ್ಲಿ ಸ್ಥಾಪಿಸತಕ್ಕುದು:

ಪರಂತು, ಕೇಂದ್ರ ಸರ್ಕಾರವು ಹಾಗೆ ನಿಯಮಿಸಿದರೆ, ಯಾವುದೇ ಔಷಧ ಅಥವಾ ಔಷಧಗಳ ವರ್ಗ ಅಥವಾ ಪ್ರಸಾಧನ ಸಾಮಗ್ರಿ ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗಕ್ಕೆ ಸಂಬಂಧಿಸಿದಂತೆ ಕೇಂದ್ರ ಔಷಧಗಳ ಪ್ರಯೋಗಶಾಲೆಯ ಪ್ರಕಾರ್ಯಗಳನ್ನು, ಕಸೌಲಿಯ ಕೇಂದ್ರ ಸಂಶೋಧನಾ ಸಂಸ್ಥೆಯಲ್ಲಿ  ಅಥವಾ ಯಾವುದೇ ಇತರ ನಿಯಮಿಸಿದ ಪ್ರಯೋಗ ಶಾಲೆಯಲ್ಲಿ ನಡೆಸತಕ್ಕುದು ಮತ್ತು ಅಂಥ ಔಷಧ ಅಥವಾ ಔಷಧಗಳ ವರ್ಗ ಅಥವಾ ಅಂಥ ಪ್ರಸಾಧನ ಸಾಮಗ್ರಿ ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗಕ್ಕೆ ಸಂಬಂಧಿಸಿದಂತೆ ಕೇಂದ್ರ ಔಷಧಗಳ ಪ್ರಯೋಗಶಾಲೆಯ ನಿರ್ದೇಶಕನ ಪ್ರಕಾರ್ಯಗಳನ್ನು ಸಂದರ್ಭಾನುಸಾರ, ಆ ಸಂಸ್ಥೆ ಅಥವಾ ಆ ಸಂಸ್ಥೆಯ ಇತರ ಪ್ರಯೋಗಶಾಲೆಯ ನಿರ್ದೇಶಕನು ಚಲಾಯಿಸತಕ್ಕುದು.

(2) ಕೇಂದ್ರ ಸರ್ಕಾರವು, ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, –

(ಎ) ಕೇಂದ್ರ ಔಷಧಗಳ ಪ್ರಯೋಗಶಾಲೆಯ ಪ್ರಕಾರ್ಯಗಳು;

*          *          *          *          *

(ಡಿ) ವಿಶ್ಲೇಷಣೆ ಅಥವಾ ಪರೀಕ್ಷೆಗಾಗಿ, ಔಷಧಗಳ ಅಥವಾ ಪ್ರಸಾಧನ ಸಾಮಗ್ರಿಗಳ ಮಾದರಿಗಳನ್ನು, ಅಧ್ಯಾಯ IV  ಮತ್ತು ಅಧ್ಯಾಯ IVಎ ಮೇರೆಗೆ ಸದರಿ ಪ್ರಯೋಗಶಾಲೆಗೆ ಒಪ್ಪಿಸುವ ಪ್ರಕ್ರಿಯೆ, ಆ ಬಗ್ಗೆ ಪ್ರಯೋಗಶಾಲೆಯ ವರದಿಗಳ ನಮೂನೆಗಳು ಮತ್ತು ಅಂಥ ವರದಿಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜುಗಳು;

(ಇ) ಪ್ರಕಾರ್ಯಗಳನ್ನು ನಿರ್ವಹಿಸಲು ಸದರಿ ಪ್ರಯೋಗಶಾಲೆಯನ್ನು ಸಮರ್ಥಗೊಳಿಸಲು ಅವಶ್ಯ ಅಥವಾ ವಿಹಿತವಾಗಬಹುದಾದಂಥ ಇತರ ವಿಷಯಗಳು;

(ಎಫ್) (1)ನೇ ಉಪ ಪ್ರಕರಣದ ಪರಂತುಕದ ಉದ್ದೇಶಗಳಿಗಾಗಿ ನಿಯಮಿಸಬೇಕಾದ ಅವಶ್ಯ ವಿಷಯಗಳು

– ಇವುಗಳನ್ನು ನಿಯಮಿಸಿ, ನಿಯಮಗಳನ್ನು ರಚಿಸಬಹುದು.

**7. ಔಷಧಗಳ ಸಮಾಲೋಚನಾ ಸಮಿತಿ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ, ಭಾರತದಾದ್ಯಂಥ ಏಕರೂಪತೆಯನ್ನು ಸಾಧಿಸಲು ಅನುಕೂಲವಾಗುವ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಔಷಧಗಳ ತಾಂತ್ರಿಕ ಸಲಹಾ ಮಂಡಲಿಗೆ ಸಲಹೆ ನೀಡುವುದಕ್ಕಾಗಿ "ಔಷಧಗಳ ಸಮಾಲೋಚನಾ ಸಮಿತಿ" ಎಂದು ಕರೆಯಲಾಗುವ ಒಂದು ಸಲಹಾ ಸಮಿತಿಯನ್ನು ರಚಿಸಬಹುದು.

(2) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ತನ್ನ ಇಬ್ಬರು ಪ್ರತಿನಿಧಿಗಳು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಪ್ರತಿಯೊಂದು ರಾಜ್ಯ ಸರ್ಕಾರದ ಒಬ್ಬ ಪ್ರತಿನಿಧಿಯನ್ನು, ಔಷಧಗಳ ಸಮಾಲೋಚನಾ ಸಮಿತಿಯು ಒಳಗೊಂಡಿರತಕ್ಕುದು.

(3) ಔಷಧಗಳ ಸಮಾಲೋಚನಾ ಸಮಿತಿಯು, ಕೇಂದ್ರ ಸರ್ಕಾರವು ಸಭೆ ಸೇರಲು ಅಗತ್ಯಪಡಿಸಿದಾಗ, ಹಾಗೆ ಸೇರತಕ್ಕುದು ಮತ್ತು ತನ್ನದೇ ಆದ ಪ್ರಕ್ರಿಯೆಯನ್ನು ನಿಯಂತ್ರಿಸಲು ಅದು ಅಧಿಕಾರವನ್ನು ಹೊಂದಿರತಕ್ಕುದು.

**7ಎ. ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳಿಗೆ 5 ಮತ್ತು 7ನೇ ಪ್ರಕರಣಗಳು ಅನ್ವಯವಾಗತಕ್ಕುದಲ್ಲ.–** 5 ಮತ್ತು 7ನೇ ಪ್ರಕರಣಗಳಲ್ಲಿ ಒಳಗೊಂಡಿರುವುದು ಯಾವುದೂ, ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಿಗಳಿಗೆ ಅನ್ವಯವಾಗತಕ್ಕುದಲ್ಲ.

## ಅಧ್ಯಾಯ – III

## ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಆಮದು

**8. ಗುಣಮಟ್ಟಗಳು.–** (1) ಈ ಅಧ್ಯಾಯದ ಉದ್ದೇಶಕ್ಕಾಗಿ, "ಗುಣಮಟ್ಟ" ಎಂಬ ಪದಾವಳಿಗೆ, –

(ಎ) ಔಷಧಕ್ಕೆ ಸಂಬಂಧಪಟ್ಟಂತೆ ಎರಡನೇ ಅನುಸೂಚಿಯಲ್ಲಿ ಹೇಳಿರುವ ಗುಣಮಟ್ಟಕ್ಕನುಸಾರ ಆ ಔಷಧಿಯು ಇರುವುದು; ಮತ್ತು

(ಬಿ) ಪ್ರಸಾಧನ ಸಾಮಗ್ರಿಗೆ ಸಂಬಂಧಪಟ್ಟಂತೆ, ನಿಯಮಿಸಬಹುದಾದಂಥ ಮಟ್ಟಕ್ಕನುಸಾರವಾಗಿ ಆ ಪ್ರಸಾಧನ ಸಾಮಗ್ರಿಯು ಇರುವುದು

– ಎಂದು ಅರ್ಥ.

(2) ಕೇಂದ್ರ ಸರ್ಕಾರವು, ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ, ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ, ಅಂಥದೇ ಅಧಿಸೂಚನೆಯ ಮೂಲಕ ಈ ಅಧ್ಯಾಯದ ಉದ್ದೇಶಗಳಿಗಾಗಿ ಎರಡನೆಯ ಅನುಸೂಚಿಗೆ ಸೇರಿಸಬಹುದು ಅಥವಾ ಅದನ್ನು ಅನ್ಯಥಾ ತಿದ್ದುಪಡಿ ಮಾಡಬಹುದು ಮತ್ತು ಆ ತರುವಾಯ ಎರಡನೇ ಅನುಸೂಚಿಯು, ತದನುಸಾರವಾಗಿ ತಿದ್ದುಪಡಿಯಾಗಿರುವುದಾಗಿ ಭಾವಿಸತಕ್ಕುದು.

**9. ತಪ್ಪಾಗಿ ಗುರುತು ಹಾಕಿದ ಔಷಧಗಳು.**- ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಔಷಧವನ್ನು, -

(ಎ) ಹಾನಿಯನ್ನು ಮರೆಮಾಡುವ ಹಾಗೆ ಅದಕ್ಕೆ ಬಣ್ಣವನ್ನು ಕೊಡಲಾಗಿದ್ದರೆ, ಲೇಪನ ಮಾಡಿದ್ದರೆ, ಅದನ್ನು ಪುಡಿ ಮಾಡಿದ್ದರೆ ಅಥವಾ ಅದಕ್ಕೆ ಮೆರಗು ಕೊಟ್ಟಿದ್ದರೆ ಅಥವಾ ಅದು ವಾಸ್ತವವಾಗಿರುವುದಕ್ಕಿಂತ ಉತ್ತಮ ಅಥವಾ ಹೆಚ್ಚಿನ ಚಿಕಿತ್ಸಾ ಮೌಲ್ಯವುಳ್ಳದ್ದೆಂದು ಕಂಡುಬರುವಂತೆ ಅದನ್ನು ಮಾಡಲಾಗಿದ್ದರೆ ; ಅಥವಾ

(ಬಿ) ಅದಕ್ಕೆ ನಿಯಮಿಸಿದ ರೀತಿಯಲ್ಲಿ ಲೇಬಲ್ಲುಗಳನ್ನು ಹಾಕಿಲ್ಲದಿದ್ದರೆ; ಅಥವಾ

(ಸಿ) ಅದರ ಲೇಬಲ್ಲು ಅಥವಾ ಸಂಪುಟವು ಅಥವಾ ಆ ಔಷಧದೊಂದಿಗೆ ಇರುವ ಯಾವುದೇ ವಸ್ತುವು ಆ ಔಷಧದ ಬಗ್ಗೆ ಯಾವುದೇ ಸುಳ್ಳು ಕ್ಲೇಮನ್ನು ಮಾಡುವಂಥ ಅಥವಾ ಯಾವುದೇ ವಿವರದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವಂಥ ಯಾವುದೇ ನಿರೂಪಣೆ, ವಿನ್ಯಾಸ ಅಥವಾ ಸಾಧನವನ್ನು ಹೊಂದಿದ್ದರೆ

- ತಪ್ಪಾಗಿ ಗುರುತು ಮಾಡಿರುವುದಾಗಿ ಭಾವಿಸತಕ್ಕುದು.

**9ಎ. ಕಲಬೆರಕೆ ಮಾಡಿದ ಔಷಧಗಳು.**- ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಔಷಧವನ್ನು,-

(ಎ) ಅದು ಸಂಪೂರ್ಣವಾಗಿ ಅಥವಾ ಭಾಗಶಃ ಯಾವುದೇ ಹೊಲಸಾದ, ಕೊಳೆತು ನಾರುವ ಅಥವಾ ಕೊಳೆತ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಬಿ) ಯಾವುದರ ಮೂಲಕ ಹೊಲಸಿನೊಂದಿಗೆ ಅದು ಮಲಿನಗೊಂಡಿರಬಹುದೋ ಅಥವಾ ಯಾವುದರ ಮೂಲಕ ಅದು ಆರೋಗ್ಯಕ್ಕೆ ಹಾನಿಕರವಾಗಿರಬಹುದೋ, ಆ ಅನೈರ್ಮಲ್ಯ ಪರಿಸ್ಥಿತಿಗಳಲ್ಲಿ ಅದನ್ನು ತಯಾರಿಸಲಾಗಿದ್ದರೆ, ಪ್ಯಾಕು ಮಾಡಲಾಗಿದ್ದರೆ ಅಥವಾ ದಾಸ್ತಾನು ಮಾಡಲಾಗಿದ್ದರೆ; ಅಥವಾ

(ಸಿ) ಅದರ ಸಂಪುಟವು ಸಂಪೂರ್ಣವಾಗಿ ಅಥವಾ ಭಾಗಶಃ ಒಳಾಂಶಗಳು ಆರೋಗ್ಯಕ್ಕೆ ಹಾನಿಕಾರಕವಾಗಿಸುವಂಥ ಯಾವುದೇ ವಿಷಪೂರಿತ ಅಥವಾ ಅಪಾಯಕರ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಡಿ) ಬಣ್ಣ ಭರಿಸುವ ಉದ್ದೇಶಕ್ಕಾಗಿ ಮಾತ್ರವೇ ನಿಯಮಿಸಲಾದುದನ್ನು ಹೊರತುಪಡಿಸಿ ಅದು ಬೇರೆ ಬಣ್ಣವನ್ನು ಹೊಂದಿದ್ದರೆ ಅಥವಾ ಒಳಗೊಂಡಿದ್ದರೆ; ಅಥವಾ

(ಇ) ಅದು, ಆರೋಗ್ಯಕ್ಕೆ ಹಾನಿಕಾರಕವಾಗಿಸುವಂಥ ಯಾವುದೇ ಹಾನಿಕರ ಅಥವಾ ವಿಷವುಳ್ಳ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಎಫ್) ಅದರ ಗುಣಮಟ್ಟ ಅಥವಾ ಶಕ್ತಿಯನ್ನು ಕಡಿಮೆ ಮಾಡುವಂತೆ ಅದರೊಂದಿಗೆ ಯಾವುದೇ ಪದಾರ್ಥವನ್ನು ಬೆರೆಸಲಾಗಿದ್ದರೆ

- ಕಲಬೆರಕೆ ಮಾಡಿರುವುದಾಗಿ ಭಾವಿಸತಕ್ಕುದು.

**9ಬಿ. ನೈಜವಲ್ಲದ ಔಷಧಗಳು.**- ಈ ಅಧ್ಯಾಯದ ಉದ್ದೇಶಗಳಿಗಾಗಿ, ಒಂದು ಔಷಧವನ್ನು,-

(ಎ) ಇನ್ನೊಂದು ಔಷಧಕ್ಕೆ ಸೇರಿಸುವಂಥ ಹೆಸರಿನ ಅಡಿಯಲ್ಲಿ ಅದನ್ನು ಆಮದು ಮಾಡಿಕೊಂಡರೆ; ಅಥವಾ

(ಬಿ) ಅದರ ನಿಜವಾದ ಸ್ವರೂಪವನ್ನು ಮತ್ತು ಅಂಥ ಇತರ ಔಷಧದೊಂದಿಗೆ ಅದರ ಗುರುತಿನ ಅಭಾವವನ್ನು ಬಹಿರಂಗಪಡಿಸುವ ಹಾಗೆ ಅದಕ್ಕೆ ಸ್ಪಷ್ಟವಾಗಿ ಮತ್ತು ಎದ್ದು ಕಾಣುವಂತೆ ಗುರುತು ಹಾಕಿದ್ದ ಹೊರತು, ಅದು ಇನ್ನೊಂದು ಔಷಧದ ಅನುಕರಣೆಯಾಗಿದ್ದರೆ ಅಥವಾ ಅದಕ್ಕಾಗಿ ಬದಲಿಯದು ಆಗಿದ್ದರೆ ಅಥವಾ ವಂಚಿಸುವ ಸಂಭವವಿರುವ ರೀತಿಯಲ್ಲಿ ಇನ್ನೊಂದು ಔಷಧಿಯನ್ನು ಹೋಲುವಂತಿದ್ದರೆ ಅಥವಾ ಅದರ ಮೇಲೆ ಅಥವಾ ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಇನ್ನೊಂದು ಔಷಧದ ಹೆಸರನ್ನು ಹೊಂದಿದ್ದರೆ; ಅಥವಾ

(ಸಿ) ಆ ಲೇಬಲ್ಲು ಅಥವಾ ಸಂಪುಟವು ಆ ಔಷಧದ ತಯಾರಕನಾಗಿರುವುದಾಗಿ ತಾತ್ಪರ್ಯವಾಗುವ ಯಾವ ವ್ಯಕ್ತಿ ಅಥವಾ ಕಂಪನಿಯು ಕಾಲ್ಪನಿಕವಾಗಿರುವುದೋ ಅಥವಾ ಅಸ್ತಿತ್ವದಲ್ಲಿಲ್ಲವೋ ಆ ವ್ಯಕ್ತಿ ಅಥವಾ ಕಂಪನಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಡಿ) ಅದಕ್ಕೆ ಬದಲಾಗಿ, ಸಂಪೂರ್ಣವಾಗಿ ಅಥವಾ ಭಾಗಶಃ ಇನ್ನೊಂದು ಔಷಧ ಅಥವಾ ವಸ್ತುವನ್ನು ಸೇರಿಸಲಾಗಿದ್ದರೆ; ಅಥವಾ

(ಇ) ಅದು ನಿಜಕ್ಕೂ ಯಾರ ತಯಾರಿಕೆ ಅಲ್ಲವೋ ಆ ತಯಾರಕನ ಉತ್ಪಾದನೆಯಾಗಿರುವುದಾಗಿ ತಾತ್ಪರ್ಯವಾಗುವ ಹಾಗಿದ್ದರೆ

– ನೈಜವಲ್ಲವೆಂಬುದಾಗಿ ಭಾವಿಸತಕ್ಕುದು.

**9ಸಿ. ತಪ್ಪಾಗಿ ಗುರುತು ಹಾಕಿದ ಪ್ರಸಾಧನ ಸಾಮಗ್ರಿಗಳು.**– ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಪ್ರಸಾಧನ ಸಾಮಗ್ರಿಯು, –

(ಎ) ಅದು, ನಿಯಮಿಸಿಲ್ಲದೇ ಇರುವ ಬಣ್ಣವನ್ನು ಒಳಗೊಂಡಿದ್ದರೆ; ಅಥವಾ

(ಬಿ) ಅದಕ್ಕೆ ನಿಯಮಿಸಿದ ರೀತಿಯಲ್ಲಿ ಲೇಬಲ್ಲನ್ನು ಹಾಕಿಲ್ಲದಿದ್ದರೆ; ಅಥವಾ

(ಸಿ) ಆ ಲೇಬಲ್ಲು ಅಥವಾ ಸಂಪುಟ ಅಥವಾ ಪ್ರಸಾಧನ ಸಾಮಗ್ರಿಯೊಂದಿಗಿರುವ ಯಾವುದೇ ವಸ್ತುವು, ಯಾವುದೇ ವಿವರದಲ್ಲಿ, ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವಂಥ ಯಾವುದೇ ನಿರೂಪಣೆಯನ್ನು ಹೊಂದಿದ್ದರೆ

– ತಪ್ಪಾಗಿ ಗುರುತು ಹಾಕಿರುವುದಾಗಿ ಭಾವಿಸತಕ್ಕುದು.

**9ಡಿ. ನೈಜವಲ್ಲದ ಪ್ರಸಾಧನ ಸಾಮಗ್ರಿಗಳು.**– ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಪ್ರಸಾಧನ ಸಾಮಗ್ರಿಯು,–

(ಎ) ಇನ್ನೊಂದು ಪ್ರಸಾಧನ ಸಾಮಗ್ರಿಗೆ ಸೇರಿರುವಂಥ ಹೆಸರಿನಡಿಯಲ್ಲಿ ಅದನ್ನು ಆಮದು ಮಾಡಿಕೊಂಡರೆ;

(ಬಿ) ಅದರ ನಿಜವಾದ ಸ್ವರೂಪವನ್ನು ಮತ್ತು ಅಂಥ ಇತರ ಪ್ರಸಾಧನ ಸಾಮಗ್ರಿಯೊಂದಿಗೆ ಅದರ ಗುರುತಿನ ಅಭಾವವನ್ನು ಬಹಿರಂಗಪಡಿಸುವ ಹಾಗೆ ಅದಕ್ಕೆ ಸ್ಪಷ್ಟವಾಗಿ ಮತ್ತು ಎದ್ದು ಕಾಣುವಂತೆ ಗುರುತು ಹಾಕಿದ್ದ ಹೊರತು ಅದು ಇನ್ನೊಂದು ಪ್ರಸಾಧನ ಸಾಮಗ್ರಿಯ ಅನುಕರಣೆಯಾಗಿದ್ದರೆ ಅಥವಾ ಅದಕ್ಕಾಗಿ ಬದಲಿಯದಾಗಿದ್ದರೆ ಅಥವಾ ವಂಚಿಸುವ ಸಂಭವವಿರುವ ರೀತಿಯಲ್ಲಿ ಇನ್ನೊಂದು ಪ್ರಸಾಧನ ಸಾಮಗ್ರಿಯನ್ನು ಹೋಲುವಂತಿದ್ದರೆ ಅಥವಾ ಅದರ ಮೇಲೆ ಅಥವಾ ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಇನ್ನೊಂದು ಪ್ರಸಾಧನ ಸಾಮಗ್ರಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಸಿ) ಆ ಲೇಬಲ್ಲು ಅಥವಾ ಸಂಪುಟವು ಆ ಪ್ರಸಾಧನ ಸಾಮಗ್ರಿಯ ತಯಾರಕನಾಗಿರುವುದಾಗಿ ತಾತ್ಪರ್ಯವಾಗುವ ಯಾವ ವ್ಯಕ್ತಿ ಅಥವಾ ಕಂಪನಿಯು ಕಾಲ್ಪನಿಕವಾಗಿರುವುದೋ ಅಥವಾ ಅಸ್ತಿತ್ವದಲ್ಲಿಲ್ಲವೋ ಆ ವ್ಯಕ್ತಿ ಅಥವಾ ಕಂಪನಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಡಿ) ಅದು ನಿಜಕ್ಕೂ ಯಾರ ತಯಾರಿಕೆ ಅಲ್ಲವೋ ಆ ತಯಾರಕನ ಉತ್ಪಾದನೆಯಾಗಿರುವುದಾಗಿ ತಾತ್ಪರ್ಯವಾಗುವ ಹಾಗಿದ್ದರೆ

-ನೈಜವಲ್ಲವೆಂಬುದಾಗಿ ಭಾವಿಸತಕ್ಕುದು.

**10. ಕೆಲವು ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ಆಮದಿನ ಬಗ್ಗೆ ನಿಷೇಧ.**- ಕೇಂದ್ರ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಿಂದ, ಯಾವನೇ ವ್ಯಕ್ತಿಯು, -

(ಎ) ಗುಣಮಟ್ಟವಿಲ್ಲದಿರುವಂಥ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು;

(ಬಿ) ಯಾವುದೇ ತಪ್ಪಾಗಿ ಗುರುತು ಹಾಕಿದ ಔಷಧವನ್ನು ಅಥವಾ ತಪ್ಪಾಗಿ ಗುರುತು ಹಾಕಿದ ಅಥವಾ ನೈಜವಲ್ಲದ ಪ್ರಸಾಧನ ಸಾಮಗ್ರಿಗಳನ್ನು;

(ಬಿಬಿ) ಯಾವುದೇ ಕಲಬೆರಕೆ ಮಾಡಿದ ಅಥವಾ ನೈಜವಲ್ಲದ ಔಷಧವನ್ನು;

(ಸಿ) ಯಾವುದರ ಆಮದಿಗಾಗಿ ಲೈಸೆನ್ಸ್‌ನ್ನು ನಿಯಮಿಸಲಾಗಿದೆಯೋ ಅಂಥ ಲೈಸೆನ್ಸಿನ ಮೇರೆಗೆ ಅಲ್ಲದೆ ಮತ್ತು ಅದಕ್ಕನುಸಾರವಾಗಿಯಲ್ಲದೆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು;

(ಡಿ) ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಅದರ ನೈಜ ಸೂತ್ರ ಅಥವಾ ಪರಿಮಾಣಗಳೊಂದಿಗೆ ಅದರಲ್ಲಿ ಒಳಗೊಂಡಿರುವ ಕ್ರಿಯಾಶೀಲ ಘಟಕಗಳ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸಿದ್ದ ಹೊರತು, ಯಾವುದೇ ಪೇಟೆಂಟ್ ಅಥವಾ ಮಾಲೀಕತ್ವದ ಮದ್ದನ್ನು;

(ಇ) ಯಾವ ಔಷಧವು, ಅದರೊಂದಿಗೆ ಇರುವ ಯಾವುದೇ ನಿರೂಪಣೆ, ವಿನ್ಯಾಸ ಅಥವಾ ಸಾಧನದ ಮೂಲಕ ಅಥವಾ ಯಾವುದೇ ಇತರ ರೀತಿಯ ಮೂಲಕ ನಿಯಮಿಸಬಹುದಾದಂಥ ಯಾವುದೇ ರೋಗ ಅಥವಾ ಕಾಯಿಲೆಯನ್ನು ಗುಣಪಡಿಸುವುದೆಂದು ಅಥವಾ ಉಪಶಮನಗೊಳಿಸುವುದೆಂದು ಅಥವಾ ಯಾವುದೇ ಅಂಥ ಇತರ ಪರಿಣಾಮವನ್ನು ಹೊಂದಿದೆಯೆಂದು ತೋರಿಬರುವುದೋ ಅಥವಾ ಅದನ್ನು ಕ್ಲೇಮು ಮಾಡುವುದೋ ಆ ಯಾವುದೇ ಔಷಧವನ್ನು;

(ಇಇ) ಸೂಚಿಸಿರುವ ಅಥವಾ ಶಿಫಾರಸ್ಸು ಮಾಡಿರುವ ನಿರ್ದೇಶನಗಳ ಮೇರೆಗೆ ಉಪಯೋಗಿಸುವುದಕ್ಕಾಗಿ ಅದನ್ನು ಸುರಕ್ಷಿತವಲ್ಲದ ಹಾಗೆ ಮತ್ತು ಹಾನಿಕರವಾಗುವ ಹಾಗೆ ಮಾಡಬಹುದಾದಂಥ ಯಾವುದೇ ಘಟಕವನ್ನು ಒಳಗೊಂಡ ಯಾವುದೇ ಪ್ರಸಾಧನ ಸಾಮಗ್ರಿಯನ್ನು;

(ಎಫ್) ಈ ಅಧ್ಯಾಯದ ಮೇರೆಗೆ ರಚಿಸಿದ ನಿಯಮದ ಮೂಲಕ ಯಾವುದರ ಆಮದನ್ನು ನಿಷೇಧಿಸಲಾಗಿದೆಯೋ, ಆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು

- ಆಮದು ಮಾಡಿಕೊಳ್ಳತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ನಿಯಮಿಸಿದ ಷರತ್ತುಗಳಿಗೆ ಒಳಪಟ್ಟು, ಪರೀಕ್ಷೆ, ಉಪ-ಪರೀಕ್ಷೆ ಅಥವಾ ವಿಶ್ಲೇಷಣೆ ಅಥವಾ ವ್ಯಕ್ತಿಗತ ಉಪಯೋಗಕ್ಕಾಗಿ,

ಯಾವುದೇ ಔಷಧವನ್ನು ಸಣ್ಣ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದಕ್ಕೆ ಅನ್ವಯವಾಗತಕ್ಕುದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಷರತ್ತುಗಳಿಗೆ ಒಳಪಟ್ಟು ಗುಣಮಟ್ಟವಿಲ್ಲದ ಯಾವುದೇ ಔಷಧದ ಅಥವಾ ಯಾವುದೇ ವರ್ಗದ ಔಷಧಗಳ ಆಮದಿಗೆ ಅನುಮತಿಸಬಹುದು.

**10ಎ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಆಮದನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರ.–** ಈ ಅಧ್ಯಾಯದಲ್ಲಿ ಒಳಗೊಂಡಿರುವ ಯಾವುದೇ ಇತರ ಉಪಬಂಧಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರಕ್ಕೆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಉಪಯೋಗವು, ಮನುಷ್ಯರು ಅಥವಾ ಪ್ರಾಣಿಗಳಿಗೆ ಯಾವುದೇ ಅಪಾಯವನ್ನು ಉಂಟುಮಾಡುವ ಸಂಭವವಿದೆ ಎಂದು ಅಥವಾ ಯಾವುದೇ ಔಷಧವು ಆ ಬಗ್ಗೆ ಕ್ಲೇಮು ಮಾಡಿದ ಚಿಕಿತ್ಸಾ ಮೌಲ್ಯವನ್ನು ಹೊಂದಿಲ್ಲವೆಂದು ಅಥವಾ ಘಟಕಗಳನ್ನು ಮತ್ತು ಯಾವುದೇ ಚಿಕಿತ್ಸಾ ಶಾಸ್ತ್ರದ ಸಮರ್ಥನೆ ಇಲ್ಲದಂಥ ಪ್ರಮಾಣವನ್ನು ಒಳಗೊಂಡಿರುವುದೆಂದು ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯ ಅಥವಾ ವಿಹಿತವೆಂದು ಮನದಟ್ಟಾದರೆ ಆಗ ಆ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಔಷಧಿ ಅಥವಾ ಪ್ರಸಾಧನ ಸಾಮಗ್ರಿಯ ಆಮದನ್ನು ನಿಷೇಧಿಸಬಹುದು.

**11. ಸಮುದ್ರ ಸೀಮಾ ಸುಂಕಕ್ಕೆ ಸಂಬಂಧಪಟ್ಟ ಕಾನೂನಿನ ಅನ್ವಯ ಮತ್ತು ಸೀಮಾ ಸುಂಕ ಅಧಿಕಾರಿಗಳ ಅಧಿಕಾರಗಳು.–** (1) ಸಮುದ್ರ ಸೀಮಾ ಸುಂಕಗಳು ಮತ್ತು ಯಾವ ಸರಕುಗಳ ಆಮದನ್ನು ಸಮುದ್ರ ಸೀಮಾ ಸುಂಕ ಅಧಿನಿಯಮ, 1878 (1878ರ 18)ರ 18ನೇ ಪ್ರಕರಣದ ಮೂಲಕ ನಿಷೇಧಿಸಲಾಗಿದೆಯೋ ಆ ಸರಕುಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು, ಈ ಅಧಿನಿಯಮದ 13ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯಾವ ಔಷಧಗಳು ಹಾಗೂ ಪ್ರಸಾಧನ ಸಾಮಗ್ರಿಗಳ ಆಮದನ್ನು ಈ ಅಧಿನಿಯಮದ ಮೇರೆಗೆ ನಿಷೇಧಿಸಲಾಗಿದೆಯೋ ಆ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕುದು ಮತ್ತು ಸೀಮಾ ಸುಂಕದ ಅಧಿಕಾರಿಗಳು, ಸೀಮಾ ಸುಂಕದ ಕಮೀಷನರು ಮತ್ತು ಸೀಮಾ ಸುಂಕದ ಇತರ ಅಧಿಕಾರಿಗಳಿಗೆ ಈ ಅಧಿನಿಯಮದ ಮೂಲಕ ವಿಧಿಸಿದ ಕರ್ತವ್ಯಗಳನ್ನು ನೆರವೇರಿಸಲು ಆ ಅಧಿನಿಯಮದ ಮೇರೆಗೆ ಶಕ್ತಗೊಳಿಸಿದ ಅಧಿಕಾರಿಗಳು, ಹಿಂದೆ ಹೇಳಿದ ಅಂಥ ಸರಕುಗಳಿಗೆ ಸಂಬಂಧಿಸಿದಂತೆ, ಅವರು ತತ್ಕಾಲದಲ್ಲಿ ಹೊಂದಿರುವಂಥವೇ ಅಧಿಕಾರಗಳನ್ನು, ಅಂಥ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕುದು.

(2) (1)ನೇ ಉಪ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಸೀಮಾ ಸುಂಕದ ಕಮೀಷನರು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಸರ್ಕಾರದ ಯಾರೇ ಅಧಿಕಾರಿಯು, ಯಾವ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಆಮದನ್ನು ಈ ಅಧ್ಯಾಯದ ಮೇರೆಗೆ ನಿಷೇಧಿಸಲಾಗಿದೆಯೋ, ಆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಒಳಗೊಂಡಿದೆ ಎಂದು ಅವನು ಸಂಶಯಪಡಬಹುದೋ ಆ ಯಾವುದೇ ಆಮದು ಮಾಡಿದ ಪ್ಯಾಕೇಜನ್ನು ತಡೆಹಿಡಿಯಬಹುದು ಮತ್ತು ಅಂಥ ತಡೆಹಿಡಿಯುವಿಕೆಯನ್ನು ತಕ್ಷಣ ಭಾರತದ ಔಷಧಗಳ ನಿಯಂತ್ರಣಾಧಿಕಾರಿಗೆ ವರದಿ ಮಾಡತಕ್ಕುದು ಮತ್ತು ಅವಶ್ಯವಿದ್ದರೆ, ಅದರಲ್ಲಿ ಕಂಡುಬಂದ ಯಾವುದೇ ಸಂಶಯಕ್ಕೆ ಒಳಗಾದ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಪ್ಯಾಕೇಜನ್ನು ಅಥವಾ ಅದರ ಮಾದರಿಯನ್ನು ಕೇಂದ್ರ ಔಷಧಗಳ ಪ್ರಯೋಗಶಾಲೆಗೆ ಕಳುಹಿಸತಕ್ಕುದು.

**12. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಅಥವಾ ಅದರ ಶಿಫಾರಸ್ಸಿನ ಮೇಲೆ ಮತ್ತು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವಪ್ರಕಟಣೆ ತರುವಾಯ, ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು:

ಪರಂತು, ಕೇಂದ್ರ ಸರ್ಕಾರವು ಅಂಥ ಸಮಾಲೋಚನೆ ಇಲ್ಲದೆ ನಿಯಮಗಳನ್ನು ರಚಿಸಲು ಅವಶ್ಯವೆನಿಸುವಂಥ ಸಂದರ್ಭಗಳು ಉದ್ಭವಿಸಿದೆ ಎಂದು ಅಭಿಪ್ರಾಯಪಟ್ಟರೆ, ಮಂಡಲಿಯೊಂದಿಗೆ ಸಮಾಲೋಚಿಸದೆ ಇರಬಹುದು; ಆದರೆ, ಅಂಥ ಪ್ರಕರಣದಲ್ಲಿ, ಆ ನಿಯಮಗಳನ್ನು ರಚಿಸಿದ ಆರು ತಿಂಗಳುಗಳ ಒಳಗೆ ಮಂಡಲಿಯೊಂದಿಗೆ ಸಮಾಲೋಚಿಸತಕ್ಕುದು ಮತ್ತು ಕೇಂದ್ರ ಸರ್ಕಾರವು ಸದರಿ ನಿಯಮಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ ಮಂಡಲಿಯು ಕೊಡಬಹುದಾದಂಥ ಯಾವುದೇ ಸೂಚನೆಗಳನ್ನು ಪರ್ಯಾಲೋಚಿಸತಕ್ಕುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು: –

(ಎ) ಯಾವ ಔಷಧಗಳು ಅಥವಾ ಔಷಧಗಳ ವರ್ಗಗಳು ಅಥವಾ ಪ್ರಸಾಧನ ಸಾಮಗ್ರಿಗಳು ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗಗಳ ಆಮದಿಗೆ ಲೈಸೆನ್ಸು ಅಗತ್ಯವಾಗಿದೆಯೋ, ಅವುಗಳನ್ನು ನಿರ್ದಿಷ್ಟಪಡಿಸಬಹುದು ಮತ್ತು ಅಂಥ ಲೈಸೆನ್ಸಿನ ನಮೂನೆ ಮತ್ತು ಷರತ್ತುಗಳನ್ನು, ಅದನ್ನು ನೀಡಲು ಶಕ್ತಗೊಳಿಸಿದ ಪ್ರಾಧಿಕಾರಿಯನ್ನು, ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸಬಹುದು ಮತ್ತು ಈ ಅಧ್ಯಾಯದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಉಲ್ಲಂಘಿಸಿರುವ ಅಥವಾ ಯಾವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನು ಕೊಡಲಾಗಿದೆಯೋ, ಆ ಯಾವುದೇ ಷರತ್ತುಗಳನ್ನು ಪಾಲಿಸಿಲ್ಲದ ಯಾವುದೇ ಪ್ರಕರಣದಲ್ಲಿ, ಅಂಥ ಲೈಸೆನ್ಸಿನ ರದ್ದಿಯಾತಿ ಅಥವಾ ಅಮಾನತಿಗಾಗಿ ಉಪಬಂಧಿಸಬಹುದು;

(ಬಿ) ಒಂದು ಔಷಧ ಅಥವಾ ಪ್ರಸಾಧನ ಸಾಮಗ್ರಿಯು ಗುಣಮಟ್ಟವನ್ನು ಹೊಂದಿರುವುದೋ ಹೇಗೆ ಎಂಬುದನ್ನು ನಿರ್ಧರಿಸುವಲ್ಲಿ ಬಳಸಬೇಕಾದ ಉಪಪರೀಕ್ಷೆ ಅಥವಾ ವಿಶ್ಲೇಷಣೆಯ ವಿಧಾನಗಳನ್ನು ನಿಯಮಿಸಬಹುದು;

(ಸಿ) ಜೀವಶಾಸ್ತ್ರೀಯ ಮತ್ತು ಜೈವಿಕ ಲೋಹಕ ಮಿಶ್ರಣಗಳಿಗೆ ಸಂಬಂಧಿಸಿದಂತೆ, ಪ್ರಮಾಣ ನಿಷ್ಕರ್ಷೆಯ ಘಟಕಗಳು ಮತ್ತು ವಿಧಾನಗಳನ್ನು ನಿಯಮಿಸಬಹುದು;

(ಸಿಸಿ) ಬಣ್ಣಬರಿಸುವ ಉದ್ದೇಶಗಳಿಗಾಗಿ ಔಷಧಿಯು ಹೊಂದಿರಬಹುದಾದಂಥ ಅಥವಾ ಒಳಗೊಂಡಿರಬಹುದಾದಂಥ ಬಣ್ಣ ಅಥವಾ ಬಣ್ಣಗಳನ್ನು, 9ಎ ಪ್ರಕರಣದ (ಡಿ) ಖಂಡದ ಮೇರೆಗೆ ನಿಯಮಿಸಬಹುದು;

(ಡಿ) ಯಾವ ರೋಗಗಳು ಅಥವಾ ಕಾಯಿಲೆಗಳನ್ನು ಆಮದು ಮಾಡಿದ ಔಷಧಿಯು ತಡೆಗಟ್ಟಲು, ಗುಣಪಡಿಸಲು ಅಥವಾ ಉಪಶಮನಗೊಳಿಸಲು ತೋರಿಬರದಿರಬಹುದೋ ಅಥವಾ ಕ್ಲೇಮು ಮಾಡದಿರಬಹುದೋ ಆ ರೋಗಗಳು ಅಥವಾ ಕಾಯಿಲೆಗಳನ್ನು ಮತ್ತು ಅಂಥ ಔಷಧಿಯು ಹೊಂದಿರುವುದಾಗಿ ತೋರದೇ ಇರಬಹುದಾದ ಅಥವಾ ಕ್ಲೇಮು ಮಾಡದಿರಬಹುದಾದಂಥ ಇತರ ಪರಿಣಾಮಗಳನ್ನು ನಿರ್ದಿಷ್ಟಪಡಿಸಬಹುದು;

(ಇ) ಯಾವ ಔಷಧಿಗಳ ಆಮದನ್ನು ಈ ಅಧ್ಯಾಯದ ಮೇರೆಗೆ ಅನ್ಯಥಾ ನಿಷೇಧಿಸಲಾಗಿದೆಯೋ ಆ ಔಷಧಗಳ ಸಣ್ಣ ಪ್ರಮಾಣಗಳನ್ನು, ಪರೀಕ್ಷೆ, ಉಪ ಪರೀಕ್ಷೆ ಅಥವಾ ವಿಶ್ಲೇಷಣದ ಉದ್ದೇಶಕ್ಕಾಗಿ ಅಥವಾ ವ್ಯಕ್ತಿಗತ ಉಪಯೋಗಕ್ಕಾಗಿ ಯಾವ ಷರತ್ತಿಗೊಳಪಟ್ಟು ಆಮದು ಮಾಡಿಕೊಳ್ಳಬಹುದೋ ಆ ಷರತ್ತುಗಳನ್ನು ನಿಯಮಿಸಬಹುದು;

(ಎಫ್) ಯಾವ ಸ್ಥಳಗಳಲ್ಲಿ ಔಷಧಿಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬಹುದೋ ಆ ಸ್ಥಳಗಳನ್ನು ನಿಯಮಿಸಬಹುದು ಮತ್ತು ಯಾವುದೇ ಇತರ ಸ್ಥಳದಲ್ಲಿ ಅವುಗಳ ಆಮದನ್ನು ನಿಷೇಧಿಸಬಹುದು;

(ಜಿ) ಯಾವುದೇ ನಿರ್ದಿಷ್ಟಪಡಿಸಿದ ಔಷಧ ಅಥವಾ ಅಂಥ ಔಷಧಿಯ ವರ್ಗದ ಲೇಬಲ್ಲು ಅಥವಾ ಸಂಪುಟದ ಮೇಲೆ ತಯಾರಿಕೆಯ ದಿನಾಂಕ ಮತ್ತು ಅದರ ಬಲವು ಕೊನೆಗೊಳ್ಳುವ ದಿನಾಂಕವನ್ನು ಸ್ಪಷ್ಟವಾಗಿ ಮತ್ತು ಸರಿಯಾಗಿ ನಿರೂಪಿಸುವಂತೆ ಅಗತ್ಯಪಡಿಸಬಹುದು ಮತ್ತು ತಯಾರಿಕೆಯ ದಿನಾಂಕದಿಂದ ನಿರ್ದಿಷ್ಟ ಅವಧಿಯು ಮುಕ್ತಾಯವಾದ ತರುವಾಯ ಸದರಿ ಔಷಧ ಅಥವಾ ಔಷಧದ ವರ್ಗದ ಆಮದನ್ನು ನಿಷೇಧಿಸಬಹುದು;

(ಹೆಚ್) ಕೇಂದ್ರ ಔಷಧಗಳ ಪ್ರಯೋಗಶಾಲೆಯಿಂದ ಪರೀಕ್ಷೆ, ಉಪಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಔಷಧಿಗಳು ಅಥವಾ ಪ್ರಸಾಧನ ಸಾಮಗ್ರಿಗಳ ಮಾದರಿಗಳನ್ನು ಆಮದುದಾರರು ಒಪ್ಪಿಸುವುದನ್ನು ಮತ್ತು ಅವುಗಳನ್ನು ಪಡೆದುಕೊಳ್ಳುವುದನ್ನು ವಿನಿಯಮಿಸಬಹುದು ಮತ್ತು ಅಂಥ ಪರೀಕ್ಷೆ, ಉಪಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಸಂದಾಯ ಮಾಡಬೇಕಾದ ಫೀಜುಗಳು ಯಾವುವಾದರೂ ಇದ್ದರೆ, ಅವುಗಳನ್ನು ನಿಯಮಿಸಬಹುದು;

(ಐ) ಆಮದು ಮಾಡಬೇಕೆಂದು ಉದ್ದೇಶಿಸಿದ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ಗುಣಮಟ್ಟದ ಬಗ್ಗೆ ಅದರ ಜೊತೆಗಿರುವ ದಸ್ತಾವೇಜುಗಳ ಮೂಲಕವೇ ಆಗಲಿ ಅಥವಾ ಅನ್ಯಥಾ ಆಗಲಿ ಒದಗಿಸಬೇಕಾದ ಸಾಕ್ಷ್ಯ, ಅಂಥ ಸಾಕ್ಷ್ಯದೊಂದಿಗೆ ವ್ಯವಹರಿಸುವಲ್ಲಿ ಸೀಮಾ ಸುಂಕದ ಅಧಿಕಾರಿಗಳ ಪ್ರಕ್ರಿಯೆ ಮತ್ತು ಪ್ರವೇಶವು ಇತ್ಯರ್ಥದಲ್ಲಿರುವಾಗ ತಡೆಹಿಡಿದಿರುವ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು ಆಮದು ಮಾಡಿದ ಸ್ಥಳಗಳಲ್ಲಿ ದಾಸ್ತಾನಿನ ರೀತಿ, ಇವುಗಳನ್ನು ನಿಯಮಿಸಬಹುದು;

(ಜೆ) ಭಾರತದ ಮೂಲಕ ಸಾಗಣೆ ಮಾಡುವ ಮತ್ತು ಅಲ್ಲಿಂದ ರಫ್ತು ಮಾಡುವ ಉದ್ದೇಶಕ್ಕಾಗಿ ಮಾತ್ರ ಆಮದು ಮಾಡಿದ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು, ಈ ಅಧಿನಿಯಮದ ಉಪಬಂಧ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಷರತ್ತು ಪೂರ್ವಕವಾಗಿ ಅಥವಾ ಅನ್ಯಥಾ ವಿನಾಯಿತಿಗೊಳಿಸುವುದಕ್ಕಾಗಿ ಉಪಬಂಧಿಸಬಹುದು;

(ಕೆ) ಔಷಧಗಳೊಂದಿಗೆ ನೇರ ಸಂಪರ್ಕದಲ್ಲಿ ಬರುವ ಪ್ಯಾಕು ಮಾಡುವ ಸಾಮಗ್ರಿಯ ಉಪಯೋಗವನ್ನು ಒಳಗೊಂಡು, ಆಮದು ಮಾಡಿದ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು ಸೀಸೆಗಳು, ಪ್ಯಾಕೇಜುಗಳು ಅಥವಾ ಇತರ ಸಂಪುಟಗಳಲ್ಲಿ ಪ್ಯಾಕು ಮಾಡುವಲ್ಲಿ ಪಾಲಿಸಬೇಕಾದ ಷರತ್ತುಗಳನ್ನು ನಿಯಮಿಸಬಹುದು;

(ಎಲ್) ಪ್ಯಾಕೇಜುಗಳಲ್ಲಿ ಮಾರಾಟಕ್ಕಾಗಿ ಆಮದು ಮಾಡಿದ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳಿಗೆ ಲೇಬಲ್ಲು ಹಚ್ಚುವ ವಿಧಾನವನ್ನು ವಿನಿಯಮಿಸಬಹುದು ಮತ್ತು ಅಂಥ ಲೇಬಲ್ಲುಗಳಲ್ಲಿ ಸೇರಿಸತಕ್ಕ ಅಥವಾ ಸೇರಿಸದೇ ಇರತಕ್ಕ ವಿಷಯಗಳನ್ನು ವಿನಿಯಮಿಸಬಹುದು;

(ಎಂ) ಆಮದು ಮಾಡಿದ ಯಾವುದೇ ಔಷಧಿಗೆ ಸೇರಿಸಬಹುದಾದಂಥ ಅಥವಾ ಅದರಲ್ಲಿ ಒಳಗೊಂಡಿರಬಹುದಾದಂಥ ಯಾವುದೇ ವಿಷಪೂರಿತ ಪದಾರ್ಥದ ಗರಿಷ್ಠ ಪ್ರಮಾಣವನ್ನು ವಿನಿಯಮಿಸಬಹುದು, ಯಾವ ಔಷಧದಲ್ಲಿ ಆ ಪ್ರಮಾಣವು ಮೀರಿದೆಯೋ ಆ ಯಾವುದೇ ಔಷಧದ ಆಮದನ್ನು ನಿಷೇಧಿಸಬಹುದು ಮತ್ತು ಈ ಅಧ್ಯಾಯ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳಿಗಾಗಿ, ವಿಷಪೂರಿತವಾಗಿರುವುದಾಗಿ ಭಾವಿಸತಕ್ಕಂಥ ಪದಾರ್ಥಗಳನ್ನು ನಿರ್ದಿಷ್ಟಪಡಿಸಬಹುದು;

(ಎನ್) ಅಂಥ ಔಷಧವನ್ನು ಒಳಗೊಂಡಿರುವ ಆಮದು ಮಾಡಿದ ಯಾವುದೇ ಪೇಟೆಂಟ್ ಅಥವಾ ಮಾಲೀಕತ್ವದ ಮದ್ದಿನ ಲೇಬಲ್ಲು ಅಥವಾ ಹೊದಿಕೆಯ ಮೇಲೆ ಯಾವುದೇ ನಿರ್ದಿಷ್ಟಪಡಿಸಿದ ಔಷಧದ ಅಂಗೀಕೃತವಾದ ವೈಜ್ಞಾನಿಕ ಹೆಸರನ್ನು ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸತಕ್ಕುದೆಂದು ಅಗತ್ಯಪಡಿಸಬಹುದು;

(ಒ) ಯಾವುದೇ ನಿರ್ದಿಷ್ಟಪಡಿಸಿದ ಔಷಧ ಅಥವಾ ಔಷಧಗಳ ವರ್ಗ ಅಥವಾ ಪ್ರಸಾಧನ ಸಾಮಗ್ರಿ ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗವನ್ನು ಈ ಅಧ್ಯಾಯದ ಎಲ್ಲಾ ಅಥವಾ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಷರತ್ತುಪೂರ್ವಕವಾಗಿ ಅಥವಾ ಅನ್ಯಥಾ ವಿನಾಯಿತಿಗೊಳಿಸುವುದಕ್ಕಾಗಿ ಉಪಬಂಧಿಸಬಹುದು.

**13.ಅಪರಾಧಗಳು.-** (1) ಯಾವನೇ ವ್ಯಕ್ತಿಯು ತಾನಾಗಿಯೇ ಆಗಲೀ ಅಥವಾ ತನ್ನ ಇತರ ವ್ಯಕ್ತಿಯ ಮೂಲಕವಾಗಲಿ,-

(ಎ) 9ಎ ಪ್ರಕರಣದ ಮೇರೆಗೆ ಕಲಬೆರಕೆ ಮಾಡಲಾಗಿರುವುದಾಗಿ ಭಾವಿಸಿದ ಅಥವಾ 9ಬಿ ಪ್ರಕರಣದ ಮೇರೆಗೆ ನೈಜವಲ್ಲದ ಔಷಧವೆಂಬುದಾಗಿ ಭಾವಿಸಿದ ಯಾವುದೇ ಔಷಧವನ್ನು ಅಥವಾ 9ಡಿ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ನೈಜವಲ್ಲದ ಪ್ರಸಾಧನ ಸಾಮಗ್ರಿ ಅಥವಾ 10ನೇ ಪ್ರಕರಣದ (ಇಇ) ಖಂಡದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ಪ್ರಸಾಧನ ಸಾಮಗ್ರಿಯನ್ನು ಆಮದು ಮಾಡಿಕೊಂಡರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(ಬಿ) ಯಾವ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಆಮದನ್ನು 10ನೇ ಪ್ರಕರಣದ ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮದ ಮೂಲಕ ನಿಷೇಧಿಸಲಾಗಿದೆಯೋ, (ಎ) ಖಂಡದಲ್ಲಿ ಉಲ್ಲೇಖಿಸಿದ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಹೊರತುಪಡಿಸಿ, ಯಾವುದೇ ಇತರ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಆಮದು ಮಾಡಿಕೊಂಡರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು;

(ಸಿ) 10ಎ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಆಮದು ಮಾಡಿಕೊಂಡರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) (ಎ) (1)ನೇ ಉಪ ಪ್ರಕರಣದ (ಎ) ಖಂಡ ಅಥವಾ (ಸಿ) ಖಂಡದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿರುವ ಯಾರೇ ಆಗಲಿ, ಆ ಖಂಡದ ಮೇರೆಗಿನ ಅಪರಾಧದ ಬಗ್ಗೆ ಪುನಃ ಅಪರಾಧಿಯೆಂದು ನಿರ್ಣೀತನಾದರೆ, ಅವನು ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು;

(ಬಿ) (1)ನೇ ಉಪ ಪ್ರಕರಣದ (ಬಿ) ಖಂಡದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿರುವ ಯಾರೇ ಆಗಲಿ ಆ ಖಂಡದ ಮೇರೆಗಿನ ಅಪರಾಧದ ಬಗ್ಗೆ ಪುನಃ ಅಪರಾಧಿ ಎಂದು ನಿರ್ಣೀತನಾದರೆ ಅವನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(3) ಈ ಪ್ರಕರಣದ ಮೂಲಕ ಉಪಬಂಧಿಸಿದ ದಂಡನೆಯು 11ನೇ ಪ್ರಕರಣದ ಉಪಬಂಧಗಳ ಮೇರೆಗೆ ಅಪರಾಧಿಯು ಗುರಿಯಾಗಬಹುದಾದಂಥ ಯಾವುದೇ ದಂಡನೆಯ ಜೊತೆಗೆ ಇರತಕ್ಕುದು.

**14. ಸರ್ಕಾರವು ವಶಪಡಿಸಿಕೊಳ್ಳುವುದು.**- 13ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿರುವಲ್ಲಿ, ಯಾವುದಕ್ಕೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿದೆಯೋ, ರವಾನಿಸಿದ ಆ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳು ಸರ್ಕಾರವು ವಶಪಡಿಸಿಕೊಳ್ಳುವುದಕ್ಕೆ ಗುರಿಯಾಗತಕ್ಕುದು.

**15.ಅಧಿಕಾರ ವ್ಯಾಪ್ತಿ.**- ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಒಂದನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು, 13ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

## ಅಧ್ಯಾಯ - IV

### ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ, ಮಾರಾಟ ಮತ್ತು ವಿತರಣೆ

**16. ಗುಣಮಟ್ಟಗಳು.**- (1)ಈ ಅಧ್ಯಾಯದ ಉದ್ದೇಶಕ್ಕಾಗಿ "ಗುಣಮಟ್ಟ" ಎಂಬ ಪದಾವಳಿಗೆ, –

(ಎ) ಒಂದು ಔಷಧಕ್ಕೆ ಸಂಬಂಧಪಟ್ಟಂತೆ ಎರಡನೇ ಅನುಸೂಚಿಯಲ್ಲಿ ತಿಳಿಸಿರುವ ಗುಣಮಟ್ಟವನ್ನು ಆ ಔಷಧವು ಪಾಲಿಸಿದೆ ಎಂದು; ಮತ್ತು

(ಬಿ) ಒಂದು ಪ್ರಸಾಧನ ಸಾಮಗ್ರಿಗೆ ಸಂಬಂಧಪಟ್ಟಂತೆ, ನಿಯಮಿಸಬಹುದಾದಂಥ ಗುಣಮಟ್ಟವನ್ನು ಆ ಪ್ರಸಾಧನ ಸಾಮಗ್ರಿಯು ಪಾಲಿಸಿದೆ ಎಂದು

– ಅರ್ಥ.

(2) ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಹಾಗೆ ಮಾಡಲು ಅದರ ಉದ್ದೇಶದ ಬಗ್ಗೆ ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ, ಅಂಥದೇ ಅಧಿಸೂಚನೆಯ ಮೂಲಕ ಈ ಅಧ್ಯಾಯದ ಉದ್ದೇಶಗಳಿಗಾಗಿ ಎರಡನೇ ಅನುಸೂಚಿಗೆ ಸೇರಿಸಬಹುದು ಅಥವಾ ಅದನ್ನು ಅನ್ಯಥಾ ತಿದ್ದುಪಡಿ ಮಾಡಬಹುದು ಮತ್ತು ಆ ತರುವಾಯ, ಎರಡನೇ ಅನುಸೂಚಿಯು ತದನುಸಾರವಾಗಿ ತಿದ್ದುಪಡಿಯಾಗಿರುವುದಾಗಿ ಭಾವಿಸತಕ್ಕುದು.

**17. ತಪ್ಪಾಗಿ ಗುರುತು ಹಾಕಿದ ಔಷಧಗಳು.**– ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಔಷಧವನ್ನು,–

(ಎ) ಹಾನಿಯನ್ನು ಮರೆಮಾಡುವ ಹಾಗೆ ಅದಕ್ಕೆ ಬಣ್ಣವನ್ನು ಕೊಡಲಾಗಿದ್ದರೆ, ಲೇಪನ ಮಾಡಿದ್ದರೆ, ಅದನ್ನು ಪುಡಿ ಮಾಡಿದ್ದರೆ ಅಥವಾ ಅದಕ್ಕೆ ಮೆರುಗು ಕೊಟ್ಟಿದ್ದರೆ ಅಥವಾ ಅದು ವಾಸ್ತವವಾಗಿರುವುದಕ್ಕಿಂತ ಉತ್ತಮ ಮತ್ತು ಹೆಚ್ಚಿನ ಚಿಕಿತ್ಸಾಮೌಲ್ಯವುಳ್ಳದ್ದೆಂದು ಕಂಡುಬರುವಂತೆ ಅದನ್ನು ಮಾಡಲಾಗಿದ್ದರೆ; ಅಥವಾ

(ಬಿ) ಅದಕ್ಕೆ ನಿಯಮಿಸಿದ ರೀತಿಯಲ್ಲಿ ಲೇಬಲ್ಲುಗಳನ್ನು ಹಾಕಿಲ್ಲದಿದ್ದರೆ; ಅಥವಾ

(ಸಿ) ಅದರ ಲೇಬಲ್ಲು ಅಥವಾ ಸಂಪುಟವು ಅಥವಾ ಆ ಔಷಧದೊಂದಿಗಿರುವ ಯಾವುದೇ ವಸ್ತುವು ಆ ಔಷಧದ ಬಗ್ಗೆ ಯಾವುದೇ ಸುಳ್ಳು ಕ್ಲೇಮನ್ನು ಮಾಡುವಂಥ ಅಥವಾ ಯಾವುದೇ ವಿವರದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವಂಥ ಯಾವುದೇ ನಿರೂಪಣೆ, ವಿನ್ಯಾಸ ಅಥವಾ ಸಾಧನವನ್ನು ಹೊಂದಿದ್ದರೆ

– ತಪ್ಪಾಗಿ ಗುರುತು ಮಾಡಿರುವುದಾಗಿ ಭಾವಿಸತಕ್ಕುದು.

**17ಎ. ಕಲಬೆರಕೆ ಮಾಡಿದ ಔಷಧಗಳು.**– ಈ ಅಧ್ಯಾಯದ ಉದ್ದೇಶಗಳಿಗಾಗಿ, ಒಂದು ಔಷಧವನ್ನು, –

(ಎ) ಅದು ಸಂಪೂರ್ಣವಾಗಿ ಅಥವಾ ಭಾಗಶಃ ಯಾವುದೇ ಹೊಲಸಾದ, ಕೊಳೆತು ನಾರುವ ಅಥವಾ ಕೊಳೆತ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಬಿ) ಯಾವುದರ ಮೂಲಕ ಹೊಲಸಿನೊಂದಿಗೆ ಅದು ಮಲಿನಗೊಂಡಿರಬಹುದೋ ಅಥವಾ ಯಾವುದರ ಮೂಲಕ ಅದು ಆರೋಗ್ಯಕ್ಕೆ ಹಾನಿಕರವಾಗಿರಬಹುದೋ ಆ ಅನೈರ್ಮಲ್ಯ ಪರಿಸ್ಥಿತಿಗಳಲ್ಲಿ ಅದನ್ನು ತಯಾರಿಸಲಾಗಿದ್ದರೆ, ಪ್ಯಾಕು ಮಾಡಲಾಗಿದ್ದರೆ ಅಥವಾ ದಾಸ್ತಾನು ಮಾಡಲಾಗಿದ್ದರೆ; ಅಥವಾ

(ಸಿ) ಅದರ ಸಂಪುಟವು ಪೂರ್ಣವಾಗಿ ಅಥವಾ ಭಾಗಶಃ ಒಳಾಂಶಗಳು ಆರೋಗ್ಯಕ್ಕೆ ಹಾನಿಕಾರಕವಾಗಿಸುವಂಥ ಯಾವುದೇ ವಿಷಪೂರಿತ ಅಥವಾ ಅಪಾಯಕರ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಡಿ) ಅದು ಬಣ್ಣ ಭರಿಸುವ ಉದ್ದೇಶಕ್ಕಾಗಿ ಮಾತ್ರವೇ ನಿಯಮಿಸಲಾದುದನ್ನು ಹೊರತುಪಡಿಸಿ ಬೇರೆ ಬಣ್ಣವನ್ನು ಹೊಂದಿದ್ದರೆ ಅಥವಾ ಒಳಗೊಂಡಿದ್ದರೆ; ಅಥವಾ

(ಇ) ಅದು ಆರೋಗ್ಯಕ್ಕೆ ಹಾನಿಕರವಾಗಿಸುವಂಥ ಯಾವುದೇ ಹಾನಿಕರ ಅಥವಾ ವಿಷವುಳ್ಳ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಎಫ್) ಅದರ ಗುಣಮಟ್ಟ ಅಥವಾ ಶಕ್ತಿಯನ್ನು ಕಡಿಮೆ ಮಾಡುವಂತೆ ಅದರೊಂದಿಗೆ ಯಾವುದೇ ಪದಾರ್ಥವನ್ನು ಬೆರೆಸಲಾಗಿದ್ದರೆ

– ಕಲಬೆರಕೆ ಮಾಡಿರುವುದಾಗಿ ಭಾವಿಸತಕ್ಕುದು.

**17ಬಿ. ನೈಜವಲ್ಲದ ಔಷಧಗಳು.–** ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಔಷಧವನ್ನು, –

(ಎ) ಇನ್ನೊಂದು ಔಷದಕ್ಕೆ ಸೇರಿರುವಂಥ ಹೆಸರಿನ ಅಡಿಯಲ್ಲಿ ಅದನ್ನು ತಯಾರಿಸಿದ್ದರೆ; ಅಥವಾ

(ಬಿ) ಅದರ ನಿಜವಾದ ಸ್ವರೂಪವನ್ನು ಮತ್ತು ಅಂಥ ಇತರ ಔಷಧದೊಂದಿಗೆ ಅದರ ಗುರುತಿನ ಅಭಾವವನ್ನು ಬಹಿರಂಗಪಡಿಸುವ ಹಾಗೆ ಅದಕ್ಕೆ ಸ್ಪಷ್ಟವಾಗಿ ಮತ್ತು ಎದ್ದು ಕಾಣುವಂತೆ ಗುರುತು ಹಾಕಿದ್ದ ಹೊರತು, ಅದು ಇನ್ನೊಂದು ಔಷಧದ ಅನುಕರಣೆಯಾಗಿದ್ದರೆ ಅಥವಾ ಅದಕ್ಕಾಗಿ ಬದಲಿಯದು ಆಗಿದ್ದರೆ ಅಥವಾ ವಂಚಿಸುವ ಸಂಭವವಿರುವ ರೀತಿಯಲ್ಲಿ ಇನ್ನೊಂದು ಔಷಧಿಯನ್ನು ಹೋಲುವಂತಿದ್ದರೆ ಅಥವಾ ಅದರ ಮೇಲೆ ಅಥವಾ ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಇನ್ನೊಂದು ಔಷಧದ ಹೆಸರನ್ನು ಹೊಂದಿದ್ದರೆ; ಅಥವಾ

(ಸಿ) ಆ ಲೇಬಲ್ಲು ಅಥವಾ ಸಂಪುಟವು ಆ ಔಷಧದ ತಯಾರಕನಾಗಿರುವುದಾಗಿ ತಾತ್ಪರ್ಯವಾಗುವ ಯಾವ ವ್ಯಕ್ತಿ ಅಥವಾ ಕಂಪನಿಯು ಕಾಲ್ಪನಿಕವಾಗಿರುವುದೋ ಅಥವಾ ಅಸ್ತಿತ್ವದಲ್ಲಿಲ್ಲವೋ ಆ ವ್ಯಕ್ತಿ ಅಥವಾ ಕಂಪನಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಡಿ) ಅದಕ್ಕೆ ಬದಲಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಇನ್ನೊಂದು ಔಷಧ ಅಥವಾ ವಸ್ತುವನ್ನು ಸೇರಿಸಲಾಗಿದ್ದರೆ; ಅಥವಾ

(ಇ) ಅದು ನಿಜಕ್ಕೂ ಯಾರ ತಯಾರಿಕೆ ಅಲ್ಲವೋ ಆ ತಯಾರಕನ ಉತ್ಪಾದನೆಯಾಗಿರುವುದಾಗಿ ತಾತ್ಪರ್ಯವಾಗುವ ಹಾಗಿದ್ದರೆ

– ನೈಜವಲ್ಲವೆಂಬುದಾಗಿ ಭಾವಿಸತಕ್ಕುದು.

**17ಸಿ. ತಪ್ಪಾಗಿ ಗುರುತು ಹಾಕಿದ ಪ್ರಸಾಧನ ಸಾಮಗ್ರಿಗಳು.–** ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಪ್ರಸಾಧನ ಸಾಮಗ್ರಿಯನ್ನು,–

(ಎ) ಅದು ನಿಯಮಿಸಿಲ್ಲದೇ ಇರುವ ಬಣ್ಣವನ್ನು ಒಳಗೊಂಡಿದ್ದರೆ; ಅಥವಾ

(ಬಿ) ಅದಕ್ಕೆ ನಿಯಮಿಸಿದ ರೀತಿಯಲ್ಲಿ ಲೇಬಲ್ಲನ್ನು ಹಾಕಿಲ್ಲದಿದ್ದರೆ; ಅಥವಾ

(ಸಿ) ಆ ಲೇಬಲ್ಲು ಅಥವಾ ಸಂಪುಟ ಅಥವಾ ಪ್ರಸಾಧನ ಸಾಮಗ್ರಿಯೊಂದಿಗಿರುವ ಯಾವುದೇ ವಸ್ತುವು ಯಾವುದೇ ವಿವರದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವಂಥ ಯಾವುದೇ ನಿರೂಪಣೆಯನ್ನು ಹೊಂದಿದ್ದರೆ

– ತಪ್ಪಾಗಿ ಗುರುತು ಹಾಕಿರುವುದಾಗಿ ಭಾವಿಸತಕ್ಕುದು.

**17ಡಿ. ನೈಜವಲ್ಲದ ಪ್ರಸಾಧನ ಸಾಮಗ್ರಿಗಳು.–** ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಪ್ರಸಾಧನ ಸಾಮಗ್ರಿಯನ್ನು,–

(ಎ) ಇನ್ನೊಂದು ಪ್ರಸಾಧನ ಸಾಮಗ್ರಿಗೆ ಸೇರಿರುವಂಥ ಹೆಸರಿನಡಿಯಲ್ಲಿ ಅದನ್ನು ತಯಾರಿಸಿದ್ದರೆ; ಅಥವಾ

(ಬಿ) ಅದರ ನಿಜವಾದ ಸ್ವರೂಪವನ್ನು ಮತ್ತು ಅಂಥ ಇತರ ಪ್ರಸಾಧನ ಸಾಮಗ್ರಿಯೊಂದಿಗೆ ಅದರ ಗುರುತಿನ ಅಭಾವವನ್ನು ಬಹಿರಂಗಪಡಿಸುವ ಹಾಗೆ ಅದನ್ನು ಸ್ಪಷ್ಟವಾಗಿ ಮತ್ತು ಎದ್ದು ಕಾಣುವಂತೆ ಗುರುತು ಹಾಕಿದ್ದ ಹೊರತು, ಅದು ಇನ್ನೊಂದು ಪ್ರಸಾಧನ ಸಾಮಗ್ರಿಯ ಅನುಕರಣೆಯಾಗಿದ್ದರೆ ಅಥವಾ ಅದಕ್ಕಾಗಿ ಬದಲಿಯದಾಗಿದ್ದರೆ ಅಥವಾ ವಂಚಿಸುವ ಸಂಭವವಿರುವ ರೀತಿಯಲ್ಲಿ ಇನ್ನೊಂದು ಪ್ರಸಾಧನ ಸಾಮಗ್ರಿಯನ್ನು ಹೋಲುವಂತಿದ್ದರೆ ಅಥವಾ ಅದರ ಮೇಲೆ ಅಥವಾ ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಇನ್ನೊಂದು ಪ್ರಸಾಧನ ಸಾಮಗ್ರಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಸಿ) ಆ ಪ್ರಸಾಧನ ಸಾಮಗ್ರಿಯ ತಯಾರಕನಾಗಿರುವುದಾಗಿ ತಾತ್ಪರ್ಯವಾಗುವ ಆ ಲೇಬಲ್ಲು ಅಥವಾ ಸಂಪುಟವು ಯಾವ ವ್ಯಕ್ತಿ ಅಥವಾ ಕಂಪನಿಯು ಕಾಲ್ಪನಿಕವಾಗಿರುವುದೋ ಅಥವಾ ಅಸ್ತಿತ್ವದಲ್ಲಿಲ್ಲವೋ ಆ ವ್ಯಕ್ತಿ ಅಥವಾ ಕಂಪನಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಡಿ) ಅದು ನಿಜಕ್ಕೂ ಯಾರ ತಯಾರಿಕೆ ಅಲ್ಲವೋ ಆ ತಯಾರಕನ ಉತ್ಪಾದನೆಯಾಗಿರುವುದಾಗಿ ತಾತ್ಪರ್ಯವಾಗುವ ಹಾಗಿದ್ದರೆ

– ನೈಜವಲ್ಲವೆಂಬುದಾಗಿ ಭಾವಿಸತಕ್ಕುದು.

**18. ಕೆಲವು ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ ಮತ್ತು ಮಾರಾಟದ ಬಗ್ಗೆ ನಿಷೇಧ.–** ರಾಜ್ಯ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ದಿನಾಂಕದಿಂದ, ಯಾವನೇ ವ್ಯಕ್ತಿಯು ತಾನಾಗಿಯೇ ಆಗಲಿ ಅಥವಾ ಅವನ ಪರವಾಗಿ ಯಾವನೇ ಇತರ ವ್ಯಕ್ತಿಯು, –

(ಎ) (i) ಗುಣಮಟ್ಟದ್ದಲ್ಲದ ಅಥವಾ ತಪ್ಪಾಗಿ ಗುರುತು ಹಾಕಲಾದ ಅಥವಾ ಕಲಬೆರಕೆ ಮಾಡಿದ ಅಥವಾ ನೈಜವಾಗಿಲ್ಲದೇ ಇರುವಂಥ ಯಾವುದೇ ಔಷಧವನ್ನು;

(ii) ಗುಣಮಟ್ಟದ್ದಲ್ಲದ ಅಥವಾ ತಪ್ಪಾಗಿ ಗುರುತು ಹಾಕಲಾದ ಅಥವಾ ನೈಜವಲ್ಲದಂಥ ಯಾವುದೇ ಪ್ರಸಾಧನ ಸಾಮಗ್ರಿಯನ್ನು;

(iii) ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಅದರ ನೈಜ ಸೂತ್ರ ಅಥವಾ ಪರಿಮಾಣಗಳೊಂದಿಗೆ ಅದರಲ್ಲಿ ಒಳಗೊಂಡಿರುವ ಕ್ರಿಯಾಶೀಲ ಘಟಕಗಳ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸಿದ್ದ ಹೊರತು ಯಾವುದೇ ಪೇಟೆಂಟ್ ಅಥವಾ ಮಾಲೀಕತ್ವದ ಮದ್ದು;

(iv) ಯಾವ ಔಷಧವು ಅದರೊಂದಿಗೆ ಇರುವ ಯಾವುದೇ ನಿರೂಪಣೆ, ವಿನ್ಯಾಸ ಅಥವಾ ಸಾಧನದ ಮೂಲಕ ಅಥವಾ ಯಾವುದೇ ಇತರ ರೀತಿಯ ಮೂಲಕ ನಿಯಮಿಸಬಹುದಾದಂಥ ಯಾವುದೇ ರೋಗ ಅಥವಾ ಕಾಯಿಲೆಯನ್ನು ತಡೆಗಟ್ಟುವುದೆಂದು, ಗುಣಪಡಿಸುವುದೆಂದು ಅಥವಾ ಉಪಶಮನಗೊಳಿಸುವುದೆಂದು ಅಥವಾ ಯಾವುದೇ ಅಂಥ ಇತರ ಪರಿಣಾಮವನ್ನು ಹೊಂದಿದೆಯೆಂದು ತೋರಿಬರುವುದೋ ಅಥವಾ ಅದನ್ನು ಕ್ಲೇಮು ಮಾಡುವುದೋ ಆ ಯಾವುದೇ ಔಷಧ;

(v) ಸೂಚಿಸಿರುವ ಅಥವಾ ಶಿಫಾರಸ್ಸು ಮಾಡಿರುವ ನಿರ್ದೇಶನಗಳ ಮೇರೆಗೆ ಉಪಯೋಗಿಸುವುದಕ್ಕಾಗಿ ಅದನ್ನು ಸುರಕ್ಷಿತವಲ್ಲದ ಹಾಗೆ ಮತ್ತು ಹಾನಿಕರವಾಗುವ ಹಾಗೆ ಮಾಡಬಹುದಾದಂಥ ಯಾವುದೇ ಘಟಕವನ್ನು ಒಳಗೊಂಡ ಯಾವುದೇ ಪ್ರಸಾಧನ ಸಾಮಗ್ರಿ;

(vi) ಈ ಅಧ್ಯಾಯದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿದ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿ

– ಇವುಗಳನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸತಕ್ಕುದಲ್ಲ ಅಥವಾ ಮಾರಾಟ ಮಾಡತಕ್ಕುದಲ್ಲ, ದಾಸ್ತಾನು ಮಾಡತಕ್ಕುದಲ್ಲ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸತಕ್ಕುದಲ್ಲ ಅಥವಾ ಮಾರಾಟಕ್ಕಾಗಿ ಕೊಡಮಾಡತಕ್ಕುದಲ್ಲ ಅಥವಾ ವಿತರಣೆ ಮಾಡತಕ್ಕುದಲ್ಲ;

(ಬಿ) ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ ಆಮದು ಮಾಡಲಾಗಿರುವ ಅಥವಾ ತಯಾರಿಸಿರುವಂಥ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು, ಮಾರಾಟ ಮಾಡತಕ್ಕುದಲ್ಲ ಅಥವಾ ದಾಸ್ತಾನು ಮಾಡತಕ್ಕುದಲ್ಲ ಅಥವಾ ಪ್ರದರ್ಶಿಸತಕ್ಕುದಲ್ಲ ಅಥವಾ ಮಾರಾಟಕ್ಕಾಗಿ ಕೊಡಮಾಡತಕ್ಕುದಲ್ಲ ಅಥವಾ ವಿತರಣೆ ಮಾಡತಕ್ಕುದಲ್ಲ;

(ಸಿ) ಈ ಅಧ್ಯಾಯದ ಮೇರೆಗೆ, ಅಂಥ ಉದ್ದೇಶಕ್ಕಾಗಿ ಕೊಟ್ಟ ಲೈಸೆನ್ಸಿನ ಮೇರೆಗೆ ಮತ್ತು ಅದರ ಷರತ್ತುಗಳಿಗೆ ಅನುಸಾರವಾಗಿಯಲ್ಲದೆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸತಕ್ಕುದಲ್ಲ ಅಥವಾ ಮಾರಾಟ ಮಾಡತಕ್ಕುದಲ್ಲ ಅಥವಾ ದಾಸ್ತಾನು ಮಾಡತಕ್ಕುದಲ್ಲ ಅಥವಾ ಪ್ರದರ್ಶಿಸತಕ್ಕುದಲ್ಲ ಅಥವಾ ಮಾರಾಟಕ್ಕಾಗಿ ಕೊಡಮಾಡತಕ್ಕುದಲ್ಲ ಅಥವಾ ವಿತರಣೆ ಮಾಡತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ನಿಯಮಿಸಿದ ಷರತ್ತುಗಳಿಗೊಳಪಟ್ಟು ಪರೀಕ್ಷೆ, ಉಪ-ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಯಾವುದೇ ಔಷಧವನ್ನೂ ಸಣ್ಣ ಪ್ರಮಾಣದಲ್ಲಿ ತಯಾರಿಸುವುದಕ್ಕೆ ಅನ್ವಯವಾಗತಕ್ಕುದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳಿಗೊಳಪಟ್ಟು, ಗುಣಮಟ್ಟವಿಲ್ಲದ ಯಾವುದೇ ಔಷಧ ಅಥವಾ ಔಷಧಗಳ ವರ್ಗವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸುವುದಕ್ಕೆ, ಮಾರಾಟ ಮಾಡುವುದಕ್ಕೆ, ದಾಸ್ತಾನು ಮಾಡುವುದಕ್ಕೆ ಅಥವಾ ಪ್ರದರ್ಶಿಸುವುದಕ್ಕೆ ಅಥವಾ ಮಾರಾಟಕ್ಕಾಗಿ ಕೊಡಮಾಡುವುದಕ್ಕೆ ಅಥವಾ ವಿತರಣೆ ಮಾಡುವುದಕ್ಕೆ ಅನುಮತಿಸಬಹುದು.

**18ಎ. ತಯಾರಕ ಮುಂತಾದವರ ಹೆಸರನ್ನು ಬಹಿರಂಗಪಡಿಸುವುದು.-** ಔಷಧ ಅಥವಾ ಪ್ರಸಾಧನ ಸಾಮಗ್ರಿಯ ತಯಾರಕನಲ್ಲದ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಅದರ ವಿತರಣೆಗಾಗಿನ ಅವನ ಏಜೆಂಟನು ಹಾಗೆ ಅಗತ್ಯಪಡಿಸಿದರೆ, ಪರಿಶೀಲಕನಿಗೆ ಯಾವ ವ್ಯಕ್ತಿಯಿಂದ ಅವನು ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಆರ್ಜಿಸಿದನೋ ಆ ವ್ಯಕ್ತಿಯ ಹೆಸರು, ವಿಳಾಸ ಅಥವಾ ಇತರ ವಿವರಗಳನ್ನು ಬಹಿರಂಗಪಡಿಸಕ್ಕುದು.

**18ಬಿ. ದಾಖಲೆಗಳನ್ನು ಇಟ್ಟುಕೊಂಡು ಬರುವುದು ಮತ್ತು ಮಾಹಿತಿಯನ್ನು ಒದಗಿಸುವುದು.-** 18ನೇ ಪ್ರಕರಣದ (ಸಿ) ಖಂಡದ ಮೇರೆಗೆ ಲೈಸೆನ್ಸನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ದಾಖಲೆಗಳು, ರಿಜಿಸ್ಟರುಗಳು ಮತ್ತು ಇತರ ದಸ್ತಾವೇಜುಗಳನ್ನು ಇಡತಕ್ಕುದು ಮತ್ತು ಇಟ್ಟುಕೊಂಡು ಬರತಕ್ಕುದು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸುವ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರಿಗೆ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಂಥ ಅಧಿಕಾರಿ ಅಥವಾ ಪ್ರಾಧಿಕಾರಿಯು ಅಗತ್ಯಪಡಿಸಿದಂಥ ಮಾಹಿತಿಯನ್ನು ಒದಗಿಸತಕ್ಕುದು.

**19. ವಾದಗಳು.-** (1) ಈ ಪ್ರಕರಣದಲ್ಲಿ ಇನ್ನು ಮುಂದೆ ಉಪಬಂಧಿಸಿರುವುದನ್ನು ಹೊರತುಪಡಿಸಿ, ಯಾವ ಔಷಧ ಅಥವಾ ಪ್ರಸಾಧನ ಸಾಮಗ್ರಿಗೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿದೆಯೋ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಸ್ವರೂಪ, ಸಾರ ಅಥವಾ ಗುಣಮಟ್ಟದ ಬಗ್ಗೆ ಅಥವಾ ಅದರ ತಯಾರಿಕೆ ಅಥವಾ ಆಮದಿನ ಬಗೆಗಿನ ಸಂದರ್ಭಗಳ ಬಗ್ಗೆ ಆಪಾದಿತನಿಗೆ ತಿಳಿದಿರಲಿಲ್ಲವೆಂದು ಅಥವಾ ಖರೀದಿದಾರನಿಗೆ ಉಪಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಮಾತ್ರ ಇದನ್ನು ಖರೀದಿಸಿದ್ದು, ಆ ಮಾರಾಟದ ಮೂಲಕ ಬಾಧಕವಾಗಿಲ್ಲವೆಂದು ಮಾತ್ರ ರುಜುವಾತುಪಡಿಸುವುದು ಈ ಅಧ್ಯಾಯದ ಮೇರೆಗಿನ ಪ್ರಾಸಿಕ್ಯೂಷನ್ನಿನಲ್ಲಿ ಪ್ರತಿರಕ್ಷೆಯಾಗಿರತಕ್ಕುದಲ್ಲ.

(2) 18ನೇ ಪ್ರಕರಣದ ಉದ್ದೇಶಗಳಿಗಾಗಿ, -

(ಎ) ಸಾಗಿಸುವುದು ಅಥವಾ ಬಳಕೆಗಾಗಿ ಯೋಗ್ಯವಾದ ಸ್ಥಿತಿಯಲ್ಲಿ ವಾಣಿಜ್ಯ ವಸ್ತುವೆಂದು ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸುವುದಕ್ಕಾಗಿ ಅಥವಾ ಸಿದ್ಧಪಡಿಸುವುದಕ್ಕಾಗಿ ಮತ್ತು ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಮೊತ್ತ, ತೂಕ ಅಥವಾ ಅಳತೆಯನ್ನು ಹೆಚ್ಚಿಸದೆ ಇರುವುದಕ್ಕಾಗಿ ಅಥವಾ ಅದರ ಕೀಳು ಗುಣಮಟ್ಟ ಅಥವಾ ಇತರ ದೋಷಗಳನ್ನು ಬಚ್ಚಿಡುವುದಕ್ಕಾಗಿ ಅದು ಅಗತ್ಯವಾಗಿದೆ ಎಂಬ ಕಾರಣದಿಂದ ಅದಕ್ಕೆ ಯಾವುದೇ ಅಪಾಯಕಾರಿಯಲ್ಲದ ವಸ್ತು ಅಥವಾ ಘಟಕವನ್ನು ಸೇರಿಸಲಾಗಿದೆ; ಅಥವಾ

(ಬಿ) ತಯಾರಿಕೆ, ಸಿದ್ಧಪಡಿಸುವಿಕೆ ಅಥವಾ ಸಾಗಣೆಯ ಕ್ರಮದಲ್ಲಿ ಯಾವುದೇ ಹೊರಗಿನ ವಸ್ತುವು ಅನಿವಾರ್ಯವಾಗಿ ಅದರೊಂದಿಗೆ ಮಿಶ್ರಣವಾಗಿದೆ: ಪರಂತು, ಈ ಖಂಡವು, ಆ ಮಾರಾಟಗಾರ ಅಥವಾ ವಿತರಕನು ಅಂಥ ಸಮ್ಮಿಶ್ರಣದ ಬಗ್ಗೆ ತಿಳಿದುಕೊಂಡ ತರುವಾಯ ಸಂಭವಿಸುವ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಯಾವುದೇ ಮಾರಾಟ ಅಥವಾ ವಿತರಣೆಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕುದಲ್ಲ.

- ಎಂಬ ಸಂಗತಿಯ ಕಾರಣ ಮಾತ್ರದಿಂದಲೇ ಒಂದು ಔಷಧವನ್ನು ತಪ್ಪಾಗಿ ಗುರುತು ಮಾಡಿರುವುದಾಗಿ ಅಥವಾ ಕಲಬೆರಕೆ ಮಾಡಿರುವುದಾಗಿ ಅಥವಾ ನೈಜವಲ್ಲದಿರುವುದಾಗಿ ಅಥವಾ ಗುಣಮಟ್ಟಕ್ಕಿಂತ ಕಮ್ಮಿಯಾಗಿರುವುದಾಗಿ ಭಾವಿಸತಕ್ಕುದಲ್ಲ ಅಥವಾ ಒಂದು ಪ್ರಸಾಧನ ಸಾಮಗ್ರಿಯನ್ನು ತಪ್ಪಾಗಿ ಗುರುತು ಮಾಡಿರುವುದಾಗಿ ಅಥವಾ ಗುಣಮಟ್ಟಕ್ಕಿಂತ ಕಮ್ಮಿಯಾಗಿರುವುದಾಗಿ ಭಾವಿಸತಕ್ಕುದಲ್ಲ;

(3) ಔಷಧ ಅಥವಾ ಪ್ರಸಾಧನ ಸಾಮಗ್ರಿಯ ತಯಾರಕನಲ್ಲದ ವ್ಯಕ್ತಿ ಅಥವಾ ಅದರ ವಿತರಣೆಗಾಗಿನ ಅವನ ಏಜೆಂಟನು 18ನೇ ಪ್ರಕರಣದ ಉಲ್ಲಂಘನೆಗಾಗಿ; ಅವನು,-

(ಎ) ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಅದರ ಕ್ರಮಬದ್ಧವಾದ ಲೈಸೆನ್ಸನ್ನು ಪಡೆದ ತಯಾರಕ, ವಿತರಕ ಅಥವಾ ವ್ಯವಹಾರಿಯಿಂದ ಆರ್ಜಿಸಿದನೆಂದು;

(ಬಿ) ಅವನಿಗೆ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯು ಆ ಪ್ರಕರಣದ ಉಪಬಂಧಗಳನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದೆ ಎಂಬ ಬಗ್ಗೆ ತಿಳಿದಿರಲಿಲ್ಲವೆಂದು ಮತ್ತು ಯುಕ್ತ ಶ್ರದ್ಧೆಯಿಂದ ಅವನು ಅದನ್ನು ಖಚಿತಪಡಿಸಿಕೊಳ್ಳಲು ಆಗುತ್ತಿರಲಿಲ್ಲವೆಂದು; ಮತ್ತು

(ಸಿ) ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯು ಅವನ ಸ್ವಾಧೀನದಲ್ಲಿದ್ದಾಗ ಅವನು ಆರ್ಜಿಸಿದಾಗ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಸರಿಯಾಗಿ ದಾಸ್ತಾನು ಮಾಡಲಾಗಿತ್ತೆಂದು ಮತ್ತು ಉಳಿದಿತ್ತೆಂದು

– ರುಜುವಾತುಪಡಿಸಿದರೆ ಗುರಿಯಾಗತಕ್ಕುದಲ್ಲ.

**20. ಸರ್ಕಾರಿ ವಿಶ್ಲೇಷಣಾಧಿಕಾರಿ.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರಾಜ್ಯದಲ್ಲಿನ ಪ್ರದೇಶಗಳಿಗಾಗಿ ಮತ್ತು ಅಂಥ ಔಷಧಗಳು ಅಥವಾ ಔಷಧಗಳ ವರ್ಗಗಳು ಅಥವಾ ಅಂಥ ಪ್ರಸಾಧನ ಸಾಮಗ್ರಿಗಳು ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗಗಳಿಗೆ ಸಂಬಂಧಿಸಿದಂತೆ ಸರ್ಕಾರಿ ವಿಶ್ಲೇಷಣಾಧಿಕಾರಿಗಳಾಗಿರಲು ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ ಮತ್ತು ಅದು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(2) ಕೇಂದ್ರ ಸರ್ಕಾರವು ಸಹ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಔಷಧಗಳು ಅಥವಾ ಔಷಧಗಳ ವರ್ಗಗಳು ಅಥವಾ ಅಂಥ ಪ್ರಸಾಧನ ಸಾಮಗ್ರಿಗಳು ಅಥವಾ ಪ್ರಸಾಧನ ಸಾಮಗ್ರಿಗಳು ವರ್ಗಗಳಿಗೆ ಸಂಬಂಧಿಸಿದಂತೆ ಸರ್ಕಾರಿ ವಿಶ್ಲೇಷಣಾಧಿಕಾರಿಗಳಾಗಿರಲು ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ ಮತ್ತು ಅದು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(3) (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಅದರ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಯಾರೇ ಅಧಿಕಾರಿಯನ್ನು ಆ ಸರ್ಕಾರದ ಪೂರ್ವಸಮ್ಮತಿ ಇಲ್ಲದೆ ಸರ್ಕಾರಿ ವಿಶ್ಲೇಷಣಾಧಿಕಾರಿ ಎಂದು ನೇಮಕ ಮಾಡತಕ್ಕುದಲ್ಲ.

(4) ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ಆಮದು, ತಯಾರಿಕೆ ಅಥವಾ ಮಾರಾಟದಲ್ಲಿ ಯಾವುದೇ ಹಣಕಾಸು ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಈ ಪ್ರಕರಣದ (1)ನೇ ಉಪ- ಪ್ರಕರಣ ಅಥವಾ (2)ನೇ ಉಪ ಪ್ರಕರಣದ ಮೇರೆಗೆ ಸರ್ಕಾರಿ ವಿಶ್ಲೇಷಣಾಧಿಕಾರಿಯಾಗಿರಲು ನೇಮಕ ಮಾಡತಕ್ಕುದಲ್ಲ.

**21. ಪರಿಶೀಲಕರು.–** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅವರಿಗೆ ವಹಿಸಿಕೊಡಬಹುದಾದಂಥ ಪ್ರದೇಶಗಳಿಗಾಗಿ ಪರಿಶೀಲಕರಾಗಿರಲು ಅದು ಸೂಕ್ತವೆಂದು ಯೋಚಿಸುವಂಥ, ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(2) ಪರಿಶೀಲಕನು ಚಲಾಯಿಸಬಹುದಾದ ಅಧಿಕಾರಗಳು ಮತ್ತು ಅವನು ನೆರವೇರಿಸಬಹುದಾದಂಥ ಕರ್ತವ್ಯಗಳು ಯಾವುದಕ್ಕೆ ಸಂಬಂಧಪಟ್ಟಂತೆ – ಆ ಔಷಧಗಳು

ಅಥವಾ ಔಷಧಗಳ ವರ್ಗಗಳು ಅಥವಾ ಪ್ರಸಾಧನ ಸಾಮಗ್ರಿಗಳು ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗಗಳು ಮತ್ತು ಯಾವುದಕ್ಕೆ ಒಳಪಟ್ಟು ಅಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸಬಹುದೋ ಅಥವಾ ನೆರವೇರಿಸಬಹುದೋ ಆ ಷರತ್ತುಗಳು, ಪರಿಮಿತಿಗಳು ಅಥವಾ ಪರಿಬಂಧಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

(3) ಔಷಧಗಳ ಅಥವಾ ಪ್ರಸಾಧನ ಸಾಮಗ್ರಿಗಳ ಆಮದು, ತಯಾರಿಕೆ ಮತ್ತು ಮಾರಾಟದಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಪರಿಶೀಲಕನಾಗಿರಲು ನೇಮಕ ಮಾಡತಕ್ಕದ್ದಲ್ಲ.

(4) ಪ್ರತಿಯೊಬ್ಬ ಪರಿಶೀಲಕನು ಭಾರತ ದಂಡಸಂಹಿತೆ, 1860 (1860 ರ 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವನನ್ನು ನೇಮಕ ಮಾಡುವ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ, ನಿಯಮಿಸಿದ ಅರ್ಹತೆಗಳನ್ನು ಹೊಂದಿರುವಂಥ ಪ್ರಾಧಿಕಾರಿಗೆ ಅಧಿಕೃತವಾಗಿ ಅವನು ಅಧೀನನಾಗಿರತಕ್ಕದ್ದು.

**22. ಪರಿಶೀಲಕರ ಅಧಿಕಾರಗಳು.-** (1) 23ನೇ ಪ್ರಕರಣ ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಿದ ಯಾವುವೇ ನಿಯಮಗಳ ಉಪಬಂಧಗಳಿಗೊಳಪಟ್ಟು, ಪರಿಶೀಲಕನು ಯಾವ ಪ್ರದೇಶದ ಸ್ಥಳೀಯ ಪರಿಮಿತಿಗಳೊಳಗೆ ಅವನು ನೇಮಕಗೊಂಡಿರುವನೋ, ಆ ಪ್ರದೇಶದ ಸ್ಥಳೀಯ ಪರಿಮಿತಿಗಳೊಳಗೆ, -

(ಎ) (i) ಯಾವ ಆವರಣದಲ್ಲಿ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಲಾಗುತ್ತಿದೆಯೋ ಆ ಯಾವುದೇ ಆವರಣ ಮತ್ತು ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಪ್ರಮಾಣ ನಿಷ್ಕರ್ಷೆ ಮತ್ತು ಉಪ-ಪರೀಕ್ಷೆಗಾಗಿ ಉಪಯೋಗಿಸಿದ ಸಾಧನಗಳು;

(ii) ಯಾವ ಆವರಣದಲ್ಲಿ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಮಾರಾಟ ಮಾಡಲಾಗುತ್ತಿದೆಯೋ, ದಾಸ್ತಾನು ಮಾಡಲಾಗುತ್ತಿದೆಯೋ ಅಥವಾ ಪ್ರದರ್ಶಿಸಲಾಗುತ್ತಿದೆಯೋ ಅಥವಾ ಮಾರಾಟಕ್ಕಾಗಿ ಕೊಡಮಾಡಲಾಗುತ್ತಿದೆಯೋ ಅಥವಾ ವಿತರಣೆ ಮಾಡಲಾಗುತ್ತಿದೆಯೋ ಆ ಯಾವುದೇ ಆವರಣ

- ಇವುಗಳನ್ನು ಪರಿಶೀಲಿಸಬಹುದು;

(ಬಿ) (i) ಯಾವ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಲಾಗುತ್ತಿದೆಯೋ, ಮಾರಾಟ ಮಾಡಲಾಗುತ್ತಿದೆಯೋ, ದಾಸ್ತಾನು ಮಾಡಲಾಗಿದೆಯೋ, ಪ್ರದರ್ಶಿಸಲಾಗಿದೆಯೋ, ಮಾರಾಟಕ್ಕಾಗಿ ಕೊಡಮಾಡಲಾಗಿದೆಯೋ ಅಥವಾ ವಿತರಣೆ ಮಾಡಲಾಗುತ್ತಿದೆಯೋ ಆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಮಾದರಿಗಳನ್ನು;

(ii) ಯಾವ ವ್ಯಕ್ತಿಯು ಅಂಥ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಖರೀದಿದಾರನಿಗೆ ಅಥವಾ ಸರಕು ಪಡೆಯುವವನಿಗೆ ಸಾಗಣೆ ಮಾಡುವ, ವಶಾವಣೆ ಮಾಡುವ ಅಥವಾ ವಶಾವಣೆ ಮಾಡಲು ಸಿದ್ಧಮಾಡಿಕೊಳ್ಳುತ್ತಿರುವ ಕ್ರಮದಲ್ಲಿರುವನೋ ಆ ಯಾವನೇ ವ್ಯಕ್ತಿಯಿಂದ

- ತೆಗೆದುಕೊಳ್ಳಬಹುದು;

(ಸಿ) ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸಹಾಯ ಯಾವುದಾದರೂ ಇದ್ದರೆ ಅದರೊಂದಿಗೆ ಎಲ್ಲಾ ಯುಕ್ತ ಕಾಲಗಳಲ್ಲಿ, -

(i) ಯಾವುದಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ಮಾಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ ಆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಯಾವನೇ ವ್ಯಕ್ತಿಯು ತನ್ನ ಶರೀರದಲ್ಲಿ ಬಚ್ಚಿಟ್ಟುಕೊಂಡಿರುವನೆಂದು ಅವನಿಗೆ ನಂಬಲು ಕಾರಣವಿರುವಂಥ ವ್ಯಕ್ತಿಯನ್ನು ಶೋಧಿಸಬಹುದು; ಅಥವಾ

(ii) ಯಾವ ಸ್ಥಳದಲ್ಲಿ ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ಮಾಡಲಾಗಿದೆ ಎಂದು ಅಥವಾ ಮಾಡಲಾಗುತ್ತಿದೆ ಎಂದು ಅವನಿಗೆ ನಂಬಲು ಕಾರಣವಿದೆಯೋ, ಆ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು; ಅಥವಾ

(iii) ಯಾವುದಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ಮಾಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ, ಆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಸಾಗಿಸುವುದಕ್ಕಾಗಿ ಉಪಯೋಗಿಸಲಾಗುತ್ತಿದೆ ಎಂದು ಅವನಿಗೆ ನಂಬಲು ಕಾರಣವಿರುವ ಯಾವುದೇ ವಾಹನ, ನೌಕೆ ಅಥವಾ ಇತರ ಯಾನವನ್ನು ನಿಲ್ಲಿಸಬಹುದು ಮತ್ತು ಶೋಧಿಸಬಹುದು,

ಮತ್ತು ಯಾವುದಕ್ಕೆ ಸಂಬಂಧಿಸಿದಂತೆ ಆ ಅಪರಾಧವನ್ನು ಮಾಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಗೆ, ಇಪ್ಪತ್ತು ದಿವಸಗಳಿಗೆ ಮೀರದ ನಿರ್ದಿಷ್ಟಪಡಿಸಿದ ಅವಧಿಗಾಗಿ ಅಂಥ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಯಾವುದೇ ದಾಸ್ತಾನನ್ನು ವಿಲೆ ಮಾಡಕೂಡದೆಂದು ಬರಹದಲ್ಲಿ ಆದೇಶಿಸಬಹುದು ಅಥವಾ ಆ ಅಪಾದಿತ ಅಪರಾಧವು ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಸ್ವಾಧೀನವನ್ನು ಹೊಂದಿರುವವನು ಆ ದೋಷವನ್ನು ತೆಗೆದುಹಾಕಬಹುದಾದಂಥದ್ದದಾಗಿದ್ದ ಹೊರತು, ಅಂಥ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ದಾಸ್ತಾನು ಮತ್ತು ಯಾವುದರ ಮೂಲಕ ಆ ಅಪರಾಧವನ್ನು ಮಾಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ ಅಥವಾ ಅಂಥ ಅಪರಾಧವನ್ನು ಮಾಡುವುದಕ್ಕಾಗಿ ಉಪಯೋಗಿಸಬಹುದೋ ಆ ಯಾವುದೇ ಪದಾರ್ಥ ಅಥವಾ ವಸ್ತುವನ್ನು ಅಭಿಗ್ರಹಿಸಬಹುದು;

(ಸಿಸಿ) (ಸಿ)ಖಂಡದಲ್ಲಿ ಉಲ್ಲೇಖಿಸಿದ ಯಾವನೇ ವ್ಯಕ್ತಿಯ ಬಳಿ ಅಥವಾ ಯಾವುದೇ ಸ್ಥಳ, ವಾಹನ, ನೌಕೆ ಅಥವಾ ಇತರ ಯಾನದಲ್ಲಿ ಕಂಡುಬಂದ ಯಾವುದೇ ದಾಖಲೆ, ರಿಜಿಸ್ಟರು, ದಸ್ತಾವೇಜು, ಅಥವಾ ಯಾವುದೇ ಇತರ ಭೌತಿಕ ವಸ್ತುವನ್ನು ಪರೀಕ್ಷಿಸಬಹುದು ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದ ಬಗ್ಗೆ ಸಾಕ್ಷ್ಯವನ್ನು ಅದು ಒದಗಿಸಬಹುದೆಂದು ಅವನು ನಂಬಲು ಕಾರಣವಿದ್ದರೆ ಅದನ್ನು ಅಭಿಗ್ರಹಿಸಬಹುದು;

(ಸಿಸಿಎ) ಯಾವುದಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗಿನ ಅಪರಾಧವು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಎಂದು ಅವನು ನಂಬಲು ಕಾರಣಗಳಿವೆಯೋ ಆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಮಾರಾಟಕ್ಕಾಗಿನ ತಯಾರಿಕೆಗೆ ಅಥವಾ ವಿತರಣೆಗೆ, ದಾಸ್ತಾನು, ಮಾರಾಟಕ್ಕಾಗಿನ ಪ್ರದರ್ಶನ, ಮಾರಾಟಕ್ಕಾಗಿ ಕೊಡಮಾಡುವುದು ಅಥವಾ ವಿತರಣೆಗೆ

ಸಂಬಂಧಪಟ್ಟ ಯಾವುದೇ ದಾಖಲೆ, ರಿಜಿಸ್ಟರ್ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಯಾವನೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(ಡಿ) ಈ ಅಧ್ಯಾಯ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಸಾಧ್ಯವಾಗಬಹುದಾದಷ್ಟರಮಟ್ಟಿಗೆ, ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನ ಅಧಿಕಾರದ ಮೇರೆಗೆ ಮಾಡಿದ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅವು ಅನ್ವಯವಾಗುವ ಹಾಗೆ ಈ ಅಧ್ಯಾಯದ ಮೇರೆಗಿನ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅನ್ವಯವಾಗತಕ್ಕುದು.

(2ಎ) (ಸಿಸಿ) ಖಂಡದ ಮೇರೆಗೆ ಅಭಿಗ್ರಹಿಸಿದ ಅಥವಾ (ಸಿಸಿಎ) ಖಂಡದ ಮೇರೆಗೆ ಹಾಜರುಪಡಿಸಿದ ಪ್ರತಿಯೊಂದು ದಾಖಲೆ, ರಿಜಿಸ್ಟರ್ ಅಥವಾ ಇತರ ದಸ್ತಾವೇಜನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಆ ವ್ಯಕ್ತಿಯು ಪ್ರಮಾಣೀಕರಿಸಿದ ಅದರ ಪ್ರತಿಗಳು ಅಥವಾ ಅವುಗಳ ಉದ್ಧೃತಿಗಳನ್ನು ತೆಗೆದುಕೊಂಡ ತರುವಾಯ, ಸಂದರ್ಭಾನುಸಾರ ಅಂಥ ಅಭಿಗ್ರಹಣ ಅಥವಾ ಹಾಜರುಪಡಿಸುವಿಕೆಯ ದಿನಾಂಕದಿಂದ ಇಪ್ಪತ್ತು ದಿವಸಗಳೊಳಗೆ, ಅವುಗಳನ್ನು ಯಾರಿಂದ ಅಭಿಗ್ರಹಿಸಲಾಯಿತೋ ಆ ವ್ಯಕ್ತಿಗೆ ಅಥವಾ ಅವುಗಳನ್ನು ಹಾಜರುಪಡಿಸಿದ ವ್ಯಕ್ತಿಗೆ ಹಿಂದಿರುಗಿಸತಕ್ಕುದು.

(3) ಈ ಅಧ್ಯಾಯದ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವಲ್ಲಿ ಯಾರೇ ವ್ಯಕ್ತಿಯು, ಉದ್ದೇಶಪೂರ್ವಕವಾಗಿ ಪರಿಶೀಲಕನನ್ನು ಅಡ್ಡಿಪಡಿಸಿದರೆ ಅಥವಾ (1)ನೇ ಉಪ ಪ್ರಕರಣದ (ಸಿಸಿಎ) ಖಂಡದ ಮೇರೆಗೆ ಹಾಗೆ ಅಗತ್ಯಪಡಿಸಿದಾಗ ಯಾವುದೇ ದಾಖಲೆ, ರಿಜಿಸ್ಟರ್ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ನಿರಾಕರಿಸಿದರೆ ಅವನು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**23. ಪರಿಶೀಲಕರ ಪ್ರಕ್ರಿಯೆ.-** (1) ಪರಿಶೀಲಕನು ಈ ಅಧ್ಯಾಯದ ಮೇರೆಗೆ, ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಯಾವುದೇ ಮಾದರಿಯನ್ನು ತೆಗೆದುಕೊಳ್ಳುವಲ್ಲಿ ಅವನು ಅದರ ನ್ಯಾಯ ಬೆಲೆಯನ್ನು ಕೊಡತಕ್ಕುದು ಮತ್ತು ಅದಕ್ಕಾಗಿ ಬರಹದಲ್ಲಿನ ಸ್ವೀಕೃತಿಯನ್ನು ಕೋರಬಹುದು.

(2) (1)ನೇ ಉಪ ಪ್ರಕರಣದ ಮೇರೆಗೆ ಕೊಟ್ಟ ಬೆಲೆಯನ್ನು ನಿರಾಕರಿಸುವಲ್ಲಿ ಅಥವಾ 22ನೇ ಪ್ರಕರಣದ (ಸಿ) ಖಂಡದ ಮೇರೆಗೆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ದಾಸ್ತಾನನ್ನು ಪರೀಶೀಲಕನು ಅಭಿಗ್ರಹಿಸುವಲ್ಲಿ, ಅವನು ನಿಯಮಿಸಿದ ನಮೂನೆಯಲ್ಲಿ, ಅದಕ್ಕಾಗಿ ರಸೀದಿಯನ್ನು ಕೊಡತಕ್ಕುದು.

(3) ಪರಿಶೀಲಕನು, ಉಪ-ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಮಾದರಿಯನ್ನು ತೆಗೆದುಕೊಳ್ಳುವಲ್ಲಿ, ಅವನು ಅದನ್ನು ಯಾವ ವ್ಯಕ್ತಿಯಿಂದ ತೆಗೆದುಕೊಳ್ಳುವನೋ ಆ ವ್ಯಕ್ತಿಗೆ ನಿಯಮಿಸಿದ ನಮೂನೆಯಲ್ಲಿ ಬರಹದಲ್ಲಿ ಅಂಥ ಉದ್ದೇಶವನ್ನು ತಿಳಿಸಕ್ಕುದು ಮತ್ತು ಅವನು ಉದ್ದೇಶಪೂರ್ವಕವಾಗಿ ಗೈರುಹಾಜರಾದ ಹೊರತು, ಅಂಥ ವ್ಯಕ್ತಿಯ ಸಮಕ್ಷಮದಲ್ಲಿ ಆ ಮಾದರಿಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸತಕ್ಕುದು ಮತ್ತು ಪರಿಣಾಮಕಾರಿಯಾಗಿ ಮೊಹರು ಮಾಡತಕ್ಕುದು ಮತ್ತು ಅದಕ್ಕೆ ಸೂಕ್ತವಾಗಿ ಗುರುತು

ಮಾಡತಕ್ಕುದು ಮತ್ತು ಹಾಗೆ ಮೊಹರು ಮಾಡಿದ ಮತ್ತು ಗುರುತು ಮಾಡಿದ ಎಲ್ಲಾ ಅಥವಾ ಯಾವುದೇ ಭಾಗದ ಮೇಲೆ ಅವನದೇ ಆದ ಮೊಹರು ಮತ್ತು ಗುರುತನ್ನು ಸೇರಿಸಲು ಅಂಥ ವ್ಯಕ್ತಿಗೆ ಅನುಮತಿಸತಕ್ಕುದು:

ಪರಂತು, ಆ ಮಾದರಿಯನ್ನು ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಲಾಗುತ್ತಿರುವ ಆವರಣದಿಂದ ತೆಗೆದುಕೊಳ್ಳುವಲ್ಲಿ, ಆ ಮಾದರಿಯನ್ನು ಮೂರು ಭಾಗಗಳಾಗಿ ಮಾತ್ರ ವಿಭಜಿಸುವುದು ಅವಶ್ಯವಾಗಿರತಕ್ಕುದು:

ಮತ್ತೂ ಪರಂತು, ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಹಿಂದೆ ಹೇಳಿದಂತೆ ಮಾದರಿಯನ್ನು ವಿಭಜಿಸುವುದಕ್ಕೆ ಬದಲಾಗಿ ಸಣ್ಣ ಪ್ರಮಾಣದ ಸಂಪುಟಗಳಲ್ಲಿ ಶೇಖರಿಸುವಲ್ಲಿ ಪರಿಶೀಲಕನು, ಸಂದರ್ಭಾನುಸಾರ ಮೂರು ಅಥವಾ ನಾಲ್ಕು ಸಂಪುಟಗಳನ್ನು ಅವುಗಳಿಗೆ ಸೂಕ್ತವಾಗಿ ಗುರುತು ಮಾಡಿದ ತರುವಾಯ ಮತ್ತು ಅವಶ್ಯವಿರುವಲ್ಲಿ ಅವುಗಳಿಗೆ ಮೊಹರು ಮಾಡಿದ ತರುವಾಯ ತೆಗೆದುಕೊಳ್ಳಬಹುದು ಮತ್ತು ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯು ದುಸ್ಥಿತಿಗೆ ಬರುವ ಅಥವಾ ಬಯಲು ಮಾಡುವುದರ ಮೂಲಕ ಅನ್ಯಥಾ ಹಾನಿಗೆ ಒಳಗಾಗುವ ಸಂಭವವಿರುವ ಹಾಗಿದ್ದರೆ ಹಾಗೆ ಮಾಡತಕ್ಕುದು.

(4) ಪರೀಶೀಲಕನು ಸಂದರ್ಭಾನುಸಾರ ಹಾಗೆ ವಿಭಜಿಸಿದ ಮಾದರಿಯ ಒಂದು ಭಾಗವನ್ನು ಅಥವಾ ಒಂದು ಸಂಪುಟವನ್ನು, ಯಾರಿಂದ ಅದನ್ನು ಅವನು ತೆಗೆದುಕೊಳ್ಳುವನೋ ಆ ವ್ಯಕ್ತಿಗೆ ವಾಪಸ್ಸು ಕೊಡತಕ್ಕುದು ಮತ್ತು ಉಳಿದಿರುವುದನ್ನು ಇಟ್ಟುಕೊಳ್ಳತಕ್ಕುದು ಮತ್ತು ಅದನ್ನು ಈ ಕೆಳಕಂಡಂತೆ ವಿಲೆ ಮಾಡತಕ್ಕುದು:-

(i) ಅವನು ಒಂದು ಭಾಗ ಅಥವಾ ಸಂಪುಟವನ್ನು ಉಪ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ, ತಕ್ಷಣ ಸರ್ಕಾರಿ ವಿಶ್ಲೇಷಣಾಧಿಕಾರಿಗೆ ಕಳುಹಿಸತಕ್ಕುದು;

(ii) ಎರಡನೆಯದನ್ನು, ಅವನು ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಗೆ ಸಂಬಂಧಿಸಿದಂತೆ ವ್ಯವಹರಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಯಾವ ನ್ಯಾಯಾಲಯದ ಮುಂದೆ ಹೂಡಲಾಗಿದೆಯೋ ಆ ನ್ಯಾಯಾಲಯದ ಮುಂದೆ ಹಾಜರುಪಡಿಸತಕ್ಕುದು; ಮತ್ತು

(iii) ಮೂರನೆಯದನ್ನು ತೆಗೆದುಕೊಂಡಿರುವಲ್ಲಿ, ಅವನು 18ಎ ಪ್ರಕರಣದ ಮೇರೆಗೆ ಯಾರ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಬಹಿರಂಗಪಡಿಸಲಾಗಿದೆಯೋ ಆ ವ್ಯಕ್ತಿ ಯಾವನಾದರೂ ಇದ್ದರೆ, ಅವನಿಗೆ ಕಳುಹಿಸತಕ್ಕುದು.

(5) ಪರಿಶೀಲಕನು, 22ನೇ ಪ್ರಕರಣದ (ಸಿ) ಖಂಡದ ಮೇರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವಲ್ಲಿ,-

(ಎ) ಅವನು ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯು 18ನೇ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವುದೋ ಅಥವಾ ಇಲ್ಲವೋ ಹೇಗೆ ಎಂಬುದನ್ನು ಖಚಿತಪಡಿಸಿಕೊಳ್ಳುವಲ್ಲಿ ಶೀಘ್ರವಾಗಿ ವರ್ತಿಸತಕ್ಕುದು ಮತ್ತು ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯು ಹಾಗೆ ಉಲ್ಲಂಘಿಸುವುದಿಲ್ಲವೆಂದು ಖಚಿತಪಡಿಸಿಕೊಂಡರೆ, ತಕ್ಷಣ ಸದರಿ ಖಂಡದ ಮೇರೆಗೆ ಮಾಡಿದ ಆದೇಶವನ್ನು ರದ್ದುಗೊಳಿಸತಕ್ಕುದು ಅಥವಾ ಸಂದರ್ಭಾನುಸಾರ ಅಭಿಗ್ರಹಿಸಿದ ದಾಸ್ತಾನನ್ನು ಹಿಂದಿರುಗಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಕ್ರಮವನ್ನು ತೆಗೆದುಕೊಳ್ಳತಕ್ಕುದು.

(ಬಿ) ಅವನು, ಔಷಧ ಅಥವಾ ಪ್ರಸಾಧನ ಸಾಮಗ್ರಿಯ ದಾಸ್ತಾನನ್ನು ಅಭಿಗ್ರಹಿಸಿದರೆ, ಅದನ್ನು ಆದಷ್ಟು ಬೇಗ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ತಿಳಿಸತಕ್ಕುದು ಮತ್ತು ಅದರ ಅಭಿರಕ್ಷೆಯ ಬಗ್ಗೆ ಅವನ ಆದೇಶಗಳನ್ನು ತೆಗೆದುಕೊಳ್ಳತಕ್ಕುದು.

(ಸಿ) ಯಾವುದೇ ಪ್ರಾಸಿಕ್ಯೂಷನನ್ನು ಹೂಡುವುದಕ್ಕೆ ಬಾಧಕವಾಗದಂತೆ ಆಪಾದಿಸಲಾದ ಉಲ್ಲಂಘನೆಯು, ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಹೊಂದಿರುವವನು ಆ ದೋಷವನ್ನು ಪರಿಹರಿಸಬಹುದಾದಂಥದ್ದಾಗಿದ್ದರೆ, ಅವನು ಆ ದೋಷವನ್ನು ಹಾಗೆ ಪರಿಹರಿಸಲಾಗಿದೆ ಎಂದು ಮನದಟ್ಟು ಮಾಡಿಕೊಂಡ ಮೇಲೆ, ಸದರಿ ಖಂಡದ ಮೇರೆಗೆ ಅವನ ಆದೇಶವನ್ನು ತಕ್ಷಣ ರದ್ದುಗೊಳಿಸತಕ್ಕುದು.

(6) ಪರಿಶೀಲಕನು, 22ನೇ ಪ್ರಕರಣದ (1)ನೇ ಉಪ- ಪ್ರಕರಣದ (ಸಿಸಿ) ಖಂಡದ ಮೇರೆಗೆ ಯಾವುದೇ ದಾಖಲೆ, ರಿಜಿಸ್ಟರು, ದಸ್ತಾವೇಜು ಅಥವಾ ಯಾವುದೇ ಇತರ ಭೌತಿಕ ವಸ್ತುವನ್ನು ಅಭಿಗ್ರಹಿಸುವಲ್ಲಿ, ಅವನು ಆದಷ್ಟು ಬೇಗ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕುದು ಮತ್ತು ಅದರ ಅಭಿರಕ್ಷೆಯ ಬಗ್ಗೆ ಅವನ ಆದೇಶಗಳನ್ನು ತೆಗೆದುಕೊಳ್ಳತಕ್ಕುದು.

**24. ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು ತಯಾರಿಸುವ ಮತ್ತು ಇಟ್ಟಿರುವ ಸ್ಥಳವನ್ನು ಬಹಿರಂಗಪಡಿಸಲು ಬದ್ಧರಾದ ವ್ಯಕ್ತಿಗಳು.-** ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಲಾಗುತ್ತಿರುವ ಅಥವಾ ಮಾರಾಟ ಅಥವಾ ವಿತರಣೆಗಾಗಿ ಇಟ್ಟಿರುವ ಯಾವುದೇ ಆವರಣದ ಪ್ರಭಾರವನ್ನು ತತ್ಕಾಲದಲ್ಲಿ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ಮಾಡಲು ಪರಿಶೀಲಕನು ಅಗತ್ಯಪಡಿಸಿದಾಗ, ಸಂದರ್ಭಾನುಸಾರ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಲಾಗುತ್ತಿರುವ ಅಥವಾ ಇಟ್ಟಿರುವ ಸ್ಥಳವನ್ನು ಪರಿಶೀಲಕನಿಗೆ ಬಹಿರಂಗಪಡಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರತಕ್ಕುದು.

**25. ಸರ್ಕಾರಿ ವಿಶ್ಲೇಷಣಾಧಿಕಾರಿಗಳ ವರದಿಗಳು.-** (1) ಯಾವ ಸರ್ಕಾರಿ ವಿಶ್ಲೇಷಣಾಧಿಕಾರಿಗೆ 23ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಮಾದರಿಯನ್ನು ಒಪ್ಪಿಸಲಾಗಿದೆಯೋ ಆ ಸರ್ಕಾರಿ ವಿಶ್ಲೇಷಣಾಧಿಕಾರಿಯು, ಅದನ್ನು ಒಪ್ಪಿಸಿರುವ ಪರಿಶೀಲಕನಿಗೆ ನಿಯಮಿಸಿದ ನಮೂನೆಯಲ್ಲಿ, ತ್ರಿಪ್ರತಿಗಳಲ್ಲಿ ರುಜು ಮಾಡಿದ ವರದಿಯನ್ನು ವಶಾವಣೆ ಮಾಡತಕ್ಕುದು.

(2) ಪರಿಶೀಲಕನು, ಅದನ್ನು ಸ್ವೀಕರಿಸಿದ ಮೇಲೆ, ಆ ಮಾದರಿಯನ್ನು ಯಾವ ವ್ಯಕ್ತಿಯಿಂದ ತೆಗೆದುಕೊಂಡಿದ್ದನೋ ಆ ವ್ಯಕ್ತಿಗೆ ಆ ವರದಿಯ ಒಂದು ಪ್ರತಿಯನ್ನು ಮತ್ತು 18ಎ ಪ್ರಕರಣದ ಮೇರೆಗೆ ಯಾರ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಬಹಿರಂಗಪಡಿಸಲಾಗಿದೆಯೋ ಆ ವ್ಯಕ್ತಿ ಯಾವನಾದರೂ ಇದ್ದರೆ, ಅವನಿಗೆ ಇನ್ನೊಂದು ಪ್ರತಿಯನ್ನು ವಶಾವಣೆ ಮಾಡತಕ್ಕುದು ಮತ್ತು ಮೂರನೇ ಪ್ರತಿಯನ್ನು, ಆ ಮಾದರಿಗೆ ಸಂಬಂಧಿಸಿದಂತೆ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ಉಪಯೋಗಿಸುವುದಕ್ಕಾಗಿ ಉಳಿಸಿಕೊಳ್ಳತಕ್ಕುದು.

(3) ಈ ಅಧ್ಯಾಯದ ಮೇರೆಗೆ ಸರ್ಕಾರಿ ವಿಶ್ಲೇಷಣಾಧಿಕಾರಿಯು ರುಜು ಮಾಡಿದ ವರದಿಯಾಗಿರುವುದಾಗಿ ತಾತ್ಪರ್ಯವಾಗುವ ಯಾವುದೇ ದಸ್ತಾವೇಜು, ಅದರಲ್ಲಿ ನಿರೂಪಿಸಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವಾಗಿರತಕ್ಕುದು ಮತ್ತು ಅಂಥ ಸಾಕ್ಷ್ಯವು ಯಾವ ವ್ಯಕ್ತಿಯಿಂದ ಆ ಮಾದರಿಯನ್ನು ತೆಗೆದುಕೊಳ್ಳಲಾಯಿತೋ ಆ ವ್ಯಕ್ತಿ ಅಥವಾ 18ಎ ಪ್ರಕರಣದ ಮೇರೆಗೆ ಯಾರ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಬಹಿರಂಗಪಡಿಸಲಾಗಿದೆಯೋ ಆ ವ್ಯಕ್ತಿಯು, ವರದಿಯ ಪ್ರತಿಯನ್ನು ಸ್ವೀಕರಿಸಿದ ಇಪ್ಪತ್ತೆಂಟು ದಿವಸಗಳೊಳಗೆ, ಬರಹದಲ್ಲಿ ಪರಿಶೀಲಕನಿಗೆ ಅಥವಾ ಆ ಮಾದರಿಗೆ ಸಂಬಂಧಿಸಿದಂತೆ ಯಾವ ನ್ಯಾಯಾಲಯದ ಮುಂದೆ ಯಾವುವೇ

ವ್ಯವಹರಣೆಗಳು ಇತ್ಯರ್ಥದಲ್ಲಿವೆಯೋ ಆ ನ್ಯಾಯಾಲಯಕ್ಕೆ ಆ ವರದಿಯನ್ನು ವಿವಾದಿಸಿ ಸಾಕ್ಷ್ಯವನ್ನು ಮುಂದಿಡಲು ಅವನು ಉದ್ದೇಶಿಸಿದ್ದಾನೆಂದು ತಿಳಿಸಿದ್ದ ಹೊರತು ನಿರ್ಣಾಯಕವಾಗಿರತಕ್ಕುದು.

(4) ಆ ಮಾದರಿಯನ್ನು ಈಗಾಗಲೇ ಕೇಂದ್ರ ಔಷಧಗಳ ಪ್ರಯೋಗಾಲಯದಲ್ಲಿ ಉಪ ಪರೀಕ್ಷಿಸಲಾಗಿದ್ದ ಅಥವಾ ವಿಶ್ಲೇಷಿಸಲಾಗಿದ್ದ ಹೊರತು, ಒಬ್ಬ ವ್ಯಕ್ತಿಯು (3)ನೇ ಉಪ ಪ್ರಕರಣದ ಮೇರೆಗೆ ಸರ್ಕಾರಿ ವಿಶ್ಲೇಷಣಾಧಿಕಾರಿಯ ವರದಿಯನ್ನು ವಿವಾದಿಸಿ ಸಾಕ್ಷ್ಯವನ್ನು ಮುಂದಿಡುವ ತನ್ನ ಉದ್ದೇಶವನ್ನು ತಿಳಿಸಿರುವಲ್ಲಿ, ಆ ನ್ಯಾಯಾಲಯವು, ತಾನಾಗಿಯೇ ಅಥವಾ ಫಿರ್ಯಾದುದಾರ ಅಥವಾ ಆಪಾದಿತನ ಕೋರಿಕೆಯ ಮೇರೆಗೆ ತನ್ನ ವಿವೇಚನೆಯಲ್ಲಿ 23ನೇ ಪ್ರಕರಣದ (4)ನೇಉಪ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಲಾದ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಮಾದರಿಯನ್ನು ಸದರಿ ಪ್ರಯೋಗಾಲಯಕ್ಕೆ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಕಳುಹಿಸಿಕೊಡುವಂತೆ ಮಾಡಬಹುದು; ಅದು ಆ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯನ್ನು ಮಾಡತಕ್ಕುದು ಮತ್ತು ಅದರ ಪರಿಣಾಮವನ್ನು ಕೇಂದ್ರ ಔಷಧಗಳ ಪ್ರಯೋಗಾಲಯದ ನಿರ್ದೇಶಕನು ಅಥವಾ ಅವನ ಅಧಿಕಾರದ ಮೇರೆಗೆ ರುಜು ಮಾಡಿ ಬರಹದಲ್ಲಿ ವರದಿ ಮಾಡತಕ್ಕುದು ಮತ್ತು ಅಂಥ ವರದಿಯು, ಅದರಲ್ಲಿ ನಿರೂಪಿಸಿರುವ ಸಂಗತಿಗಳ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

(5) (4)ನೇ ಉಪ ಪ್ರಕರಣದ ಮೇರೆಗೆ, ಕೇಂದ್ರ ಔಷಧಗಳ ಪ್ರಯೋಗಾಲಯವು ಮಾಡಿದ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ಖರ್ಚನ್ನು ನ್ಯಾಯಾಲಯವು ನಿರ್ದೇಶಿಸತಕ್ಕಂಥ ಫಿರ್ಯಾದಿಯು ಅಥವಾ ಆಪಾದಿತನು ಸಂದಾಯ ಮಾಡತಕ್ಕುದು.

**26. ಉಪ-ಪರೀಕ್ಷೆ ಅಥವಾ ವಿಶ್ಲೇಷಣೆಯನ್ನು ಪಡೆದುಕೊಳ್ಳಲು ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಖರೀದಿದಾರನನ್ನು ಶಕ್ತಗೊಳಿಸುವುದು.-** ಯಾವನೇ ವ್ಯಕ್ತಿಯು ಅಥವಾ ಯಾವುದೇ ಮನ್ನಣೆ ಪಡೆದ ಗ್ರಾಹಕ ಸಂಸ್ಥೆಯು, ಅಂಥ ವ್ಯಕ್ತಿಯು ಆ ಸಂಸ್ಥೆಯ ಸದಸ್ಯನಾಗಿರಲಿ ಅಥವಾ ಆಗಿಲ್ಲದಿರಲಿ ನಿಯಮಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ, ಅವನು ಅಥವಾ ಅದು ಖರೀದಿ ಮಾಡಿರುವ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಉಪ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಸರ್ಕಾರಿ ವಿಶ್ಲೇಷಣಾಧಿಕಾರಿಗೆ ಒಪ್ಪಿಸಲು ಮತ್ತು ಸರ್ಕಾರಿ ವಿಶ್ಲೇಷಣಾಧಿಕಾರಿಯು ರುಜು ಮಾಡಿರುವ ಅಂಥ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ವರದಿಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕುದು.

**26ಎ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಔಷಧ ಮತ್ತು ಪ್ರಸಾಧನ ಸಾಮಗ್ರಿಯ ತಯಾರಿಕೆ ಮುಂತಾದವುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರಗಳು.-** ಈ ಅಧ್ಯಾಯದಲ್ಲಿ ಒಳಗೊಂಡಿರುವ ಯಾವುದೇ ಇತರ ಉಪಬಂಧಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರಕ್ಕೆ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ಉಪಯೋಗವು, ಮನುಷ್ಯರು ಅಥವಾ ಪ್ರಾಣಿಗಳಿಗೆ ಯಾವುದೇ ಅಪಾಯವನ್ನು ಉಂಟುಮಾಡುವ ಸಂಭವವಿದೆಯೆಂದು ಅಥವಾ ಯಾವುದೇ ಔಷಧವು ಅದಕ್ಕಾಗಿ ಕ್ಲೇಮು ಮಾಡಿದ ಅಥವಾ ಕ್ಲೇಮು ಮಾಡಿದೆಯೆಂದು ತಾತ್ಪರ್ಯವಾಗುವ ಚಿಕಿತ್ಸಾ ಮೌಲ್ಯವನ್ನು ಹೊಂದಿರುವುದಿಲ್ಲವೆಂದು ಅಥವಾ ಯಾವುದಕ್ಕಾಗಿ ಚಿಕಿತ್ಸಾ ಶಾಸ್ತ್ರದ ಸಮರ್ಥನೆಯಿಲ್ಲವೋ ಆ ಘಟಕಗಳನ್ನು ಮತ್ತು ಅಂಥ ಪ್ರಮಾಣದಲ್ಲಿ ಅದು ಒಳಗೊಂಡಿದೆಯೆಂದು ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡಲು ಅವಶ್ಯಕ ಅಥವಾ ವಿಹಿತವೆಂದು ಮನದಟ್ಟಾದರೆ ಆಗ ಆ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ತಯಾರಿಕೆ, ಮಾರಾಟ ಅಥವಾ ವಿತರಣೆಯನ್ನು ನಿಷೇಧಿಸಬಹುದು.

**27. ಈ ಅಧ್ಯಾಯವನ್ನು ಉಲ್ಲಂಘಿಸಿ, ಔಷಧಗಳ ತಯಾರಿಕೆ, ಮಾರಾಟ ಮುಂತಾದವುಗಳಿಗಾಗಿ ದಂಡನೆ.**- ಯಾರೇ ಆಗಲಿ, ಖುದ್ದಾಗಿ ಅಥವಾ ಅವನ ಪರವಾಗಿ ಯಾವನೇ ವ್ಯಕ್ತಿಯ ಮೂಲಕ, -

(ಎ) 17ಎ ಪ್ರಕರಣದ ಮೇರೆಗೆ, ಕಲಬೆರಕೆ ಮಾಡಿರುವುದಾಗಿ ಅಥವಾ 17ಬಿ ಪ್ರಕರಣದ ಮೇರೆಗೆ ನೈಜವಲ್ಲದಿರುವುದಾಗಿ ಭಾವಿಸಿದ ಅಥವಾ ಯಾವುದನ್ನು ಯಾವನೇ ವ್ಯಕ್ತಿಯು ಯಾವುದೇ ರೋಗ ಅಥವಾ ಅಸ್ವಸ್ಥತೆಗಾಗಿ ಅಥವಾ ಅದರ ರೋಗನಿದಾನ, ಚಿಕಿತ್ಸೆ, ಅದನ್ನು ಕಡಿಮೆ ಮಾಡುವುದು ಅಥವಾ ಅದನ್ನು ನಿವಾರಿಸುವಲ್ಲಿ ಉಪಯೋಗಿಸಿದಾಗ, ಸಂದರ್ಭಾನುಸಾರ ಅಂಥ ಔಷಧವು ಕಲಬೆರಕೆಯಾಗಿರುವ ಅಥವಾ ನೈಜವಾಗಿಲ್ಲದೇ ಇರುವ ಅಥವಾ ಗುಣಮಟ್ಟದ್ದಲ್ಲದೇ ಇರುವ ಕಾರಣಮಾತ್ರದಿಂದಲೇ ಅವನ ಮರಣವನ್ನುಂಟುಮಾಡುವ ಸಂಭವವಿರುವುದೋ ಅಥವಾ ಭಾರತ ದಂಡ ಸಂಹಿತೆ, 1860 (1860ರ 45)ರ 320ನೇ ಪ್ರಕರಣದ ವ್ಯಾಪ್ತಿಯೊಳಗೆ ತೀವ್ರ ಗಾಯವೆನಿಸುವಂತೆ ಅವನ ಶರೀರದ ಮೇಲೆ ಅಂಥ ಹಾನಿಯನ್ನುಂಟುಮಾಡುವ ಸಂಭವವಿರುವುದೋ ಆ ಯಾವುದೇ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ, ಮಾರಾಟ ಮಾಡಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ ಅಥವಾ ವಿತರಣೆ ಮಾಡಿದರೆ, ಅವನು ಐದು ವರ್ಷಗಳಿಗಿಂತ ಕಡಿಮೆಯಿಲ್ಲದೇ ಇರತಕ್ಕಂಥ ಆದರೆ, ಜೀವಾವಧಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದೇ ಇರುವಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(ಬಿ) (i) 17ಎ ಪ್ರಕರಣದ ಮೇರೆಗೆ ಕಲಬೆರಕೆ ಮಾಡಿರುವುದಾಗಿ ಭಾವಿಸಿದ ಆದರೆ, (ಎ) ಖಂಡದಲ್ಲಿ ಉಲ್ಲೇಖಿಸಿದ ಔಷಧವಾಗಿಲ್ಲದ; ಅಥವಾ

(ii) 18ನೇ ಪ್ರಕರಣದ (ಸಿ) ಖಂಡದ ಮೇರೆಗೆ ಅಗತ್ಯಪಡಿಸಲಾದಂತೆ ಸಿಂಧುವಾದ ಲೈಸೆನ್ಸು ಇಲ್ಲದೆ,

ಯಾವುದೇ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ ಅಥವಾ ವಿತರಣೆ ಮಾಡಿದರೆ ಅವನು, ಒಂದು ವರ್ಷಕ್ಕಿಂತ ಕಡಿಮೆ ಇಲ್ಲದೆ ಇರತಕ್ಕಂಥ ಆದರೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯವು ಆ ತೀರ್ಪಿನಲ್ಲಿ ದಾಖಲು ಮಾಡಬಹುದಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಗಾಗಿನ ಕಾರಾವಾಸದ ಮತ್ತು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು;

(ಸಿ) 17ಬಿ ಪ್ರಕರಣದ ಮೇರೆಗೆ ನೈಜವಲ್ಲದಿರುವುದಾಗಿ ಭಾವಿಸಿದ ಆದರೆ, (ಎ) ಖಂಡದಲ್ಲಿ ಉಲ್ಲೇಖಿಸಿದ ಔಷಧವಾಗಿಲ್ಲದೇ ಇರುವ ಯಾವುದೇ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ ಅಥವಾ ವಿತರಣೆ ಮಾಡಿದರೆ ಅವನು, ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಆದರೆ, ಐದು ವರ್ಷಗಳವರೆಗೆ

ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಐದುಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯವು, ಆ ತೀರ್ಪಿನಲ್ಲಿ ದಾಖಲು ಮಾಡಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಮೂರು ವರ್ಷಗಳಿಗಿಂತ ಕಡಿಮೆಯಾದರೆ, ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಗಾಗಿನ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು;

(ಡಿ) (ಎ)ಖಂಡ ಅಥವಾ (ಬಿ) ಖಂಡ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಿದ ಔಷಧವನ್ನು ಹೊರತುಪಡಿಸಿ ಈ ಅಧ್ಯಾಯದ ಯಾವುದೇ ಇತರ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ ಯಾವುದೇ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆ ಮಾಡುವುದಕ್ಕಾಗಿ ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ ಅಥವಾ ವಿತರಣೆ ಮಾಡಿದರೆ ಅವನು, ಒಂದು ವರ್ಷಕ್ಕಿಂತ ಕಡಿಮೆ ಇಲ್ಲದೆ ಇರತಕ್ಕಂಥ ಆದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯವು, ಆ ತೀರ್ಪಿನಲ್ಲಿ ದಾಖಲು ಮಾಡಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಗಾಗಿನ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು.

**27ಎ. ಈ ಅಧ್ಯಾಯವನ್ನು ಉಲ್ಲಂಘಿಸಿ, ಪ್ರಸಾಧನ ಸಾಮಗ್ರಿಗಳ ತಯಾರಿಕೆ, ಮಾರಾಟ ಮುಂತಾದವುಗಳಿಗಾಗಿ ದಂಡನೆ.–** ಯಾರೇ ಆಗಲಿ, ಖುದ್ದಾಗಿ ಅಥವಾ ಅವನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕ, –

(i) 17ಸಿ ಪ್ರಕರಣದ ಮೇರೆಗೆ ನೈಜವಲ್ಲದಿರುವುದಾಗಿ ಭಾವಿಸಿದ ಯಾವುದೇ ಪ್ರಸಾಧನ ಸಾಮಗ್ರಿಯನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ ಅವನು, ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದು;

(ii) (i)ನೇ ಖಂಡದಲ್ಲಿ ಉಲ್ಲೇಖಿಸಿದ ಪ್ರಸಾಧನ ಸಾಮಗ್ರಿಯನ್ನು ಹೊರತುಪಡಿಸಿ, ಈ ಅಧ್ಯಾಯದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ ಯಾವುದೇ ಪ್ರಸಾಧನ ಸಾಮಗ್ರಿಯನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ ಅವನು, ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**28. ತಯಾರಕ ಮುಂತಾದವರ ಹೆಸರನ್ನು ಬಹಿರಂಗಪಡಿಸದಿರುವುದಕ್ಕಾಗಿ ದಂಡನೆ.–** ಯಾರೇ ಆಗಲಿ, 18–ಎ ಪ್ರಕರಣ ಅಥವಾ 24ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**28ಎ. ದಸ್ತಾವೇಜುಗಳು ಮುಂತಾದವುಗಳನ್ನು ಇಡದೇ ಇರುವುದಕ್ಕಾಗಿ ಮತ್ತು ಮಾಹಿತಿಯನ್ನು ಬಹಿರಂಗಪಡಿಸದಿರುವುದಕ್ಕಾಗಿ ದಂಡನೆ.–** ಯಾರೇ ಆಗಲಿ, ಯುಕ್ತ ಕಾರಣ ಅಥವಾ ನೆಪವಿಲ್ಲದೆ 18ಬಿ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**28ಬಿ. 26ಎ ಪ್ರಕರಣವನ್ನು ಉಲ್ಲಂಘಿಸಿ, ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ತಯಾರಿಕೆ ಮುಂತಾದವುಗಳಿಗಾಗಿ ದಂಡನೆ.–** ಯಾರೇ ಆಗಲಿ, ಖುದ್ದಾಗಿ ಅಥವಾ ಅವನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕ, 26ಎ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಿದರೆ ಅಥವಾ ಮಾರಾಟ ಮಾಡಿದರೆ ಅಥವಾ ವಿತರಣೆ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಗೆ ಸಹಾ ಗುರಿಯಾಗತಕ್ಕುದು.

**29. ಜಾಹೀರಾತುಗೊಳಿಸುವುದಕ್ಕಾಗಿ ಸರ್ಕಾರಿ ವಿಶ್ಲೇಷಣಾಧಿಕಾರಿಯ ವರದಿಯನ್ನು ಉಪಯೋಗಿಸಿದ್ದಕ್ಕಾಗಿ ದಂಡನೆ.–** ಯಾರೇ ಆಗಲಿ, ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ಜಾಹಿರಾತುಗೊಳಿಸುವ ಉದ್ದೇಶಕ್ಕಾಗಿ, ಕೇಂದ್ರ ಔಷಧಗಳ ಪ್ರಯೋಗಾಲಯ ಅಥವಾ ಸರ್ಕಾರಿ ವಿಶ್ಲೇಷಣಾಧಿಕಾರಿಯು ಮಾಡಿರುವ ಉಪ-ಪರೀಕ್ಷೆ ಅಥವಾ ವಿಶ್ಲೇಷಣೆಯ ಯಾವುದೇ ವರದಿ ಅಥವಾ ಅಂಥ ವರದಿಯ ಯಾವುದೇ ಉದ್ಧೃತಿಯನ್ನು ಉಪಯೋಗಿಸಿದರೆ, ಅವನು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**30. ತರುವಾಯದ ಅಪರಾಧಗಳಿಗಾಗಿ ದಂಡನೆ.–** (1) ಯಾರೇ ಆಗಲಿ, –

(ಎ) 27ನೇ ಪ್ರಕರಣದ (ಬಿ) ಖಂಡದ ಮೇರೆಗೆ ಅಪರಾಧಥ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿ ಅದೇ ಖಂಡದ ಮೇರೆಗಿನ ಅಪರಾಧದ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ ಅವನು, ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಆದರೆ, ಆರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯವು, ಆ ತೀರ್ಪಿನಲ್ಲಿ ನಮೂದಿಸಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗಾಗಿನ ಕಾರಾವಾಸದ ಮತ್ತು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು;

(ಬಿ) 27ನೇ ಪ್ರಕರಣದ (ಸಿ) ಖಂಡದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ಆ ಖಂಡದ ಮೇರೆಗಿನ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ, ಅವನು ಆರು ವರ್ಷಗಳಿಗಿಂತ ಕಡಿಮೆ ಇಲ್ಲದ ಆದರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗಿಲ್ಲ ದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು;

(ಸಿ) 27ನೇ ಪ್ರಕರಣದ (ಡಿ) ಖಂಡದ ಮೇರೆಗೆ, ಆ ಖಂಡದ ಮೇರೆಗಿನ ಅಪರಾಧದ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ, ಅವನು ಎರಡು ವರ್ಷಗಳಿಗಿಂತ ಕಡಿಮೆ

ಇಲ್ಲದೆ ಇರತಕ್ಕಂಥ ಆದರೆ, ನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(1ಎ) ಯಾರೇ ಆಗಲಿ, 27ಎ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ಆ ಪ್ರಕರಣದ ಮೇರೆಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ, ಅವನು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಯಾರೇ ಆಗಲಿ, 29ನೇ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ಅದೇ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ, ಅವನು ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**31. ಸರ್ಕಾರಕ್ಕೆ ಸೇರಿಸಿಕೊಳ್ಳುವುದು.-** (1) ಯಾವನೇ ವ್ಯಕ್ತಿಯನ್ನು, ಈ ಬಗ್ಗೆ ರಚಿಸಿದ ನಿಯಮದ ಮೂಲಕ ನಿರ್ದಿಷ್ಟಪಡಿಸ ಬಹುದಾದಂತೆ, ಈ ಅಧ್ಯಾಯದ ಯಾವುದೇ ಅಂಥ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿರುವುದಕ್ಕಾಗಿ ಈ ಅಧ್ಯಾಯದ ಮೇರೆಗೆ ಅಪರಾಧಿ ಎಂದು ನಿರ್ಣಯಿಸಲಾಗಿರುವಲ್ಲಿ, ಯಾವುದಕ್ಕೆ ಸಂಬಂಧಿಸಿದಂತೆ ಆ ಉಲ್ಲಂಘನೆಯನ್ನು ಮಾಡಲಾಗಿದೆಯೋ ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯ ದಾಸ್ತಾನನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಗುರಿಯಾಗತಕ್ಕುದು ಮತ್ತು ಅಂಥ ಉಲ್ಲಂಘನೆಯು, -

(i) 17ನೇ ಪ್ರಕರಣದ ಮೇರೆಗೆ ತಪ್ಪು ಗುರುತು ಹಾಕಿರುವುದಾಗಿ ಅಥವಾ 17ಎ ಪ್ರಕರಣದ ಮೇರೆಗೆ ಕಲಬೆರಕೆ ಮಾಡಿರುವುದಾಗಿ ಅಥವಾ 17ಬಿ ಪ್ರಕರಣದ ಮೇರೆಗೆ ನೈಜವಲ್ಲದಿರುವುದಾಗಿ ಭಾವಿಸಿದ ಯಾವುದೇ ಔಷಧದ ತಯಾರಿಕೆಗೆ; ಅಥವಾ

(ii) 18ನೇ ಪ್ರಕರಣದ (ಸಿ) ಖಂಡದ ಮೇರೆಗೆ, ಅಗತ್ಯಪಡಿಸಿದಂತೆ ಸಿಂಧುವಾದ ಲೈಸೆನ್ಸು ಇಲ್ಲದೆ ಯಾವುದೇ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸುವುದಕ್ಕೆ, ಮಾರಾಟ ಮಾಡುವುದಕ್ಕೆ ಅಥವಾ ದಾಸ್ತಾನು ಮಾಡುವುದಕ್ಕೆ ಅಥವಾ ಪ್ರದರ್ಶನ ಅಥವಾ ಮಾರಾಟಕ್ಕಾಗಿ ಕೊಡಮಾಡುವುದಕ್ಕೆ ಅಥವಾ ವಿತರಣೆಗೆ

-ಸಂಬಂಧಿಸಿದಂತೆ ಆಗಿದ್ದರೆ, ಅಂಥ ತಯಾರಿಕೆ, ಮಾರಾಟ ಅಥವಾ ವಿತರಣೆಯಲ್ಲಿ ಉಪಯೋಗಿಸಿದ ಯಾವುವೇ ಉಪಕರಣಗಳು ಅಥವಾ ಯಂತ್ರಸಾಮಗ್ರಿ ಮತ್ತು ಅಂಥ ಔಷಧಿಯನ್ನು ಒಳಗೊಂಡಿರುವಂಥ ಯಾವುವೇ ಪಾತ್ರೆಗಳು, ಪ್ಯಾಕೇಜುಗಳು ಅಥವಾ ಹೊದಿಕೆಗಳು ಮತ್ತು ಅಂಥ ಔಷಧಿಯನ್ನು ಒಯ್ಯುವಲ್ಲಿ ಉಪಯೋಗಿಸಿದ ಪ್ರಾಣಿಗಳು, ವಾಹನಗಳು, ನೌಕೆಗಳು ಅಥವಾ ಇತರ ಯಾನಗಳೂ ಸಹ ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಗುರಿಯಾಗತಕ್ಕುದು.

(2) (1)ನೇ ಉಪ ಪ್ರಕರಣದಲ್ಲಿ ಅಡಕವಾದ ಉಪಬಂಧಗಳಿಗೆ ಬಾಧಕವಾಗದಂತೆ, ಪರಿಶೀಲಕನು ಮಾಡಿಕೊಂಡ ಅರ್ಜಿಯ ಮೇಲೆ ಅಥವಾ ಅನ್ಯಥಾ ಮತ್ತು ಅವಶ್ಯವಾಗಬಹುದಾದ ವಿಚಾರಣೆಯನ್ನು ಮಾಡಿದ ತರುವಾಯ, ಆ ಔಷಧ ಅಥವಾ ಪ್ರಸಾಧನ ಸಾಮಗ್ರಿಯು ಗುಣಮಟ್ಟದ್ದಲ್ಲವೆಂದು ಅಥವಾ ಅದಕ್ಕೆ ತಪ್ಪಾಗಿ ಗುರುತು ಹಾಕಿದ, ಕಲಬೆರಕೆ ಮಾಡಿದ ಅಥವಾ ನೈಜವಲ್ಲದ ಔಷಧವೆಂದು ಅಥವಾ ತಪ್ಪು ಗುರುತು ಹಾಕಿದ, ಅಥವಾ

ನೈಜವಲ್ಲದ ಪ್ರಸಾಧನ ಸಾಮಗ್ರಿ ಎಂದು ನ್ಯಾಯಾಲಯಕ್ಕೆ ಮನದಟ್ಟಾಗಿರುವಲ್ಲಿ ಅಂಥ ಔಷಧ ಅಥವಾ ಸಂದರ್ಭಾನುಸಾರ ಅಂಥ ಪ್ರಸಾಧನ ಸಾಮಗ್ರಿಯು ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಗುರಿಯಾಗತಕ್ಕುದು.

**31ಎ. ಸರ್ಕಾರಿ ಇಲಾಖೆಗಳಿಗೆ ಉಪಬಂಧಗಳ ಅನ್ವಯ.–** 31ನೇ ಪ್ರಕರಣದಲ್ಲಿ ಅಡಕವಾಗಿರುವುದನ್ನು ಹೊರತುಪಡಿಸಿ ಈ ಅಧ್ಯಾಯದ ಉಪಬಂಧಗಳು, ಯಾವನೇ ಇತರ ವ್ಯಕ್ತಿಯು ಔಷಧಗಳ ಬಗ್ಗೆ ಮಾಡಿದ ತಯಾರಿಕೆ, ಮಾರಾಟ ಅಥವಾ ವಿತರಣೆಗೆ ಸಂಬಂಧಪಟ್ಟಂತೆ, ಅವು ಅನ್ವಯವಾಗುವ ಹಾಗೆ ಸರ್ಕಾರದ ಯಾವುದೇ ಇಲಾಖೆಯು ಔಷಧಗಳ ಬಗ್ಗೆ ಮಾಡಿದ ತಯಾರಿಕೆ, ಮಾರಾಟ ಅಥವಾ ವಿತರಣೆಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕುದು.

**32. ಅಪರಾಧಗಳ ಸಂಜ್ಞೇಯತೆ.–** (1) ಈ ಅಧ್ಯಾಯದ ಮೇರೆಗೆ ಯಾವುದೇ ಪ್ರಾಸಿಕ್ಯೂಷನನ್ನು ಪರಿಶೀಲಕನು ಅಥವಾ ಬಾಧಿತ ವ್ಯಕ್ತಿಯು ಅಥವಾ ಅಂಥ ವ್ಯಕ್ತಿಯು ಮನ್ನಣೆ ಪಡೆದ ನೋಂದಾಯಿತ ಸಂಸ್ಥೆಯ ಸದಸ್ಯನಾಗಿರಲಿ ಅಥವಾ ಆಗಿಲ್ಲದಿರಲಿ ಅಂಥ ಸಂಸ್ಥೆ – ಇವರನ್ನು ಹೊರತುಪಡಿಸಿ ಯಾರೂ ಹೂಡತಕ್ಕುದಲ್ಲ.

(2) ಮಹಾನಗರ ಮ್ಯಾಜಿಸ್ಟ್ರೇಟು ಅಥವಾ ಒಂದನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು, ಈ ಅಧ್ಯಾಯದ ಮೇರೆಗೆ ದಂಡನೀಯವಾದ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

(3) ಈ ಅಧ್ಯಾಯದಲ್ಲಿ ಅಡಕವಾಗಿರುವುದು ಯಾವುದೂ ಈ ಅಧ್ಯಾಯದ ವಿರುದ್ಧ ಒಂದು ಅಪರಾಧವಾಗುವಂಥ ಯಾವುದೇ ಕಾರ್ಯ ಅಥವಾ ಲೋಪಕ್ಕಾಗಿ ಯಾವುದೇ ಇತರ ಕಾನೂನಿನ ಮೇರೆಗೆ ಪ್ರಾಸಿಕ್ಯೂಷನ್ನಿಗೆ ಯಾವನೇ ವ್ಯಕ್ತಿಯು ಒಳಗಾಗುವುದನ್ನು ತಡೆಗಟ್ಟುವುದು ಎಂದು ಭಾವಿಸತಕ್ಕುದಲ್ಲ.

**ವಿವರಣೆ:–** ಈ ಪ್ರಕರಣದ ಮತ್ತು 32ನೇ ಪ್ರಕರಣದ ಉದ್ದೇಶಗಳಿಗಾಗಿ " ಮನ್ನಣೆ ಪಡೆದ ಗ್ರಾಹಕ ಸಂಸ್ಥೆ" ಎಂದರೆ, ಕಂಪನಿಗಳ ಅಧಿನಿಯಮ, 1956 (1956ರ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಣಿಯಾಗಿರುವ ಒಂದು ಸ್ವಯಂ ಗ್ರಾಹಕರ ಸಂಸ್ಥೆ.

**32ಎ. ತಯಾರಕ ಮುಂತಾದವರನ್ನು ಪಕ್ಷಕಾರನನ್ನಾಗಿ ಮಾಡಲು ನ್ಯಾಯಾಲಯದ ಅಧಿಕಾರ.–** ಔಷಧ ಅಥವಾ ಪ್ರಸಾಧನ ಸಾಮಗ್ರಿಯ ತಯಾರಕ ಅಥವಾ ಅದರ ವಿತರಣೆಗಾಗಿನ ಅವನ ಏಜೆಂಟನಲ್ಲದ ಯಾವನೇ ವ್ಯಕ್ತಿಯು ಮಾಡಿರುವನೆಂದು ಆಪಾದಿಸಲಾದ, ಈ ಅಧ್ಯಾಯದ ಮೇರೆಗಿನ ಯಾವುದೇ ಅಪರಾಧದ ಅಧಿವಿಚಾರಣೆಯಲ್ಲಿ ಯಾವುದೇ ಕಾಲದಲ್ಲಿ ಅದರ ಮುಂದೆ ಇಟ್ಟ ಸಾಕ್ಷ್ಯದಿಂದ ಅಂಥ ತಯಾರಕ ಅಥವಾ ಏಜೆಂಟನು ಸಹ ಆ ಅಪರಾಧಕ್ಕೆ ಸಂಬಂಧಪಟ್ಟಿರುವನೆಂದು ನ್ಯಾಯಾಲಯಕ್ಕೆ ಮನದಟ್ಟಾಗಿರುವಲ್ಲಿ ಆಗ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆ, 1973ರ (1974 ರ 2) 319ನೇ ಪ್ರಕರಣದ (1), (2) ಮತ್ತು (3)ನೇ ಉಪ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, 32ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಪ್ರಾಸಿಕ್ಯೂಷನನ್ನು ಹೂಡಲಾಗಿದ್ದಂತೆ ಅವನ ವಿರುದ್ಧ ಮುಂದುವರಿಯಬಹುದು.

**33. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಅಥವಾ ಅದರ ಶಿಫಾರಸ್ಸಿನ ಮೇಲೆ ಮತ್ತು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು:

ಪರಂತು, ಕೇಂದ್ರ ಸರ್ಕಾರವು, ಅಂಥ ಸಮಾಲೋಚನೆ ಇಲ್ಲದೆ ನಿಯಮಗಳನ್ನು ರಚಿಸುವುದು ಅದಕ್ಕೆ ಅವಶ್ಯಗೊಳಿಸುವಂಥ ಸಂದರ್ಭಗಳು ಉಂಟಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ, ಆ ಮಂಡಲಿಯೊಂದಿಗಿನ ಸಮಾಲೋಚನೆಯನ್ನು ಬಿಟ್ಟುಬಿಡಬಹುದು. ಆದರೆ, ಅಂಥ ಸಂದರ್ಭದಲ್ಲಿ ಆ ನಿಯಮಗಳನ್ನು ರಚಿಸಿದ ಆರು ತಿಂಗಳುಗಳೊಳಗೆ ಆ ಮಂಡಲಿಯೊಂದಿಗೆ ಸಮಾಲೋಚಿಸತಕ್ಕುದು ಮತ್ತು ಕೇಂದ್ರ ಸರ್ಕಾರವು, ಆ ಮಂಡಲಿಯು ಸದರಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಮಾಡಬಹುದಾದಂಥ ಯಾವುವೇ ಸೂಚನೆಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, -

(ಎ) ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ಉಪ ಪರೀಕ್ಷೆ ಮತ್ತು ವಿಶ್ಲೇಷಣೆಯನ್ನು ಮಾಡುವುದಕ್ಕಾಗಿ ಪ್ರಯೋಗ ಶಾಲೆಗಳನ್ನು ಸ್ಥಾಪಿಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು;

(ಬಿ) ಸರ್ಕಾರಿ ವಿಶ್ಲೇಷಣಾಧಿಕಾರಿಗಳ ಅರ್ಹತೆಗಳು ಮತ್ತು ಕರ್ತವ್ಯಗಳನ್ನು ಮತ್ತು ಪರಿಶೀಲಕರ ಅರ್ಹತೆಗಳನ್ನು ನಿಯಮಿಸಬಹುದು;

(ಸಿ) ಔಷಧ ಅಥವಾ ಪ್ರಸಾಧನ ಸಾಮಗ್ರಿಯು ಗುಣಮಟ್ಟದ್ದಾಗಿರುವುದೋ ಹೇಗೆ ಎಂಬುದನ್ನು ನಿರ್ಧರಿಸಲು ಬಳಸಬೇಕಾದ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ವಿಧಾನಗಳನ್ನು ನಿಯಮಿಸಬಹುದು;

(ಡಿ) ಜೀವಶಾಸ್ತ್ರೀಯ ಮತ್ತು ಜೈವಿಕ ಲೋಹಕ ಮಿಶ್ರಣಗಳಿಗೆ ಸಂಬಂಧಿಸಿದಂತೆ ಪ್ರಮಾಣ ನಿಷ್ಕರ್ಷಣೆಯ ಘಟಕಗಳು ಮತ್ತು ವಿಧಾನಗಳನ್ನು ನಿಯಮಿಸಬಹುದು;

(ಡಿಡಿ) 17ಎ ಪ್ರಕರಣದ (ಡಿ) ಖಂಡದ ಮೇರೆಗೆ, ಬಣ್ಣ ಬರಿಸುವ ಉದ್ದೇಶಗಳಿಗಾಗಿ ಔಷಧವು ಹೊಂದಬಹುದಾದ ಅಥವಾ ಒಳಗೊಂಡಿರಬಹುದಾದಂಥ ಬಣ್ಣ ಅಥವಾ ಬಣ್ಣಗಳನ್ನು ನಿಯಮಿಸಬಹುದು;

(ಇ) ಔಷಧಗಳು ಅಥವಾ ಯಾವುದೇ ನಿರ್ದಿಷ್ಟಪಡಿಸಿದ ಔಷಧ ಅಥವಾ ಔಷಧಗಳ ವರ್ಗದ ಅಥವಾ ಪ್ರಸಾಧನ ಸಾಮಗ್ರಿಗಳ ಅಥವಾ ಯಾವುದೇ ನಿರ್ದಿಷ್ಟಪಡಿಸಿದ ಪ್ರಸಾಧನ ಸಾಮಗ್ರಿ ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗದ ಮಾರಾಟಕ್ಕಾಗಿ ಅಥವಾ ವಿತರಣೆಗಾಗಿನ ತಯಾರಿಕೆಗಾಗಿ, ಅವುಗಳ ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ಲೈಸೆನ್ಸುಗಳ ನಮೂನೆಗಳನ್ನು, ಅಂಥ ಲೈಸೆನ್ಸುಗಳಿಗಾಗಿನ ಅರ್ಜಿಯ ನಮೂನೆಯನ್ನು ಯಾವ ಷರತ್ತುಗಳಿಗೊಳಪಟ್ಟು ಅಂಥ ಲೈಸೆನ್ಸುಗಳನ್ನು ಕೊಡಬಹುದೋ ಆ ಷರತ್ತುಗಳನ್ನು, ಅದನ್ನು ಕೊಡಲು ಅಧಿಕೃತಗೊಳಿಸಿದ ಪ್ರಾಧಿಕಾರಿಯನ್ನು, ಅಂಥ ಪ್ರಾಧಿಕಾರಿಯ ಅರ್ಹತೆಗಳನ್ನು ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸಬಹುದು ಮತ್ತು ಯಾವ ಪ್ರಕರಣದಲ್ಲಿ ಈ ಅಧ್ಯಾಯದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಉಲ್ಲಂಘಿಸಲಾಗಿದೆಯೋ ಅಥವಾ ಯಾವ ಷರತ್ತುಗಳಿಗೊಳಪಟ್ಟು ಅವುಗಳನ್ನು ಕೊಡಲಾಗಿದೆಯೋ ಆ ಷರತ್ತುಗಳನ್ನು ಪಾಲಿಸಲಾಗಿಲ್ಲವೋ ಆ ಯಾವುದೇ ಪ್ರಕರಣದಲ್ಲಿ, ಅಂಥ ಲೈಸೆನ್ಸುಗಳನ್ನು ರದ್ದುಗೊಳಿಸುವುದಕ್ಕಾಗಿ ಅಥವಾ ಅಮಾನತ್ತಿನಲ್ಲಿಡುವುದಕ್ಕಾಗಿ ಉಪಬಂಧಿಸಬಹುದು;

(ಇಇ) 18ಬಿ ಪ್ರಕರಣದ ಮೇರೆಗೆ ಇಡಬೇಕಾದ ಮತ್ತು ಇಟ್ಟುಕೊಂಡು ಬರಬೇಕಾದ ದಾಖಲೆಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ನಿಯಮಿಸಬಹುದು;

(ಇಇಎ) ಯಾವುದರಲ್ಲಿ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿಯನ್ನು ತಯಾರಿಸಲಾಗುತ್ತಿದೆಯೋ ಅಥವಾ ತಯಾರಿಸಲು ಉದ್ದೇಶಿಸಲಾಗಿದೆಯೋ ಆ ಆವರಣದ ಪರಿಶೀಲನೆಗಾಗಿ ಲೈಸೆನ್ಸುಗಳ ಮಂಜೂರಾತಿ ಅಥವಾ ನವೀಕರಣದ ಉದ್ದೇಶಗಳಿಗಾಗಿ ಫೀಜುಗಳನ್ನು ನಿಯಮಿಸಬಹುದು;

(ಇಇಬಿ) 22ನೇ ಪ್ರಕರಣದ (2ಎ) ಉಪ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಪ್ರತಿಗಳನ್ನು ಪ್ರಮಾಣೀಕರಿಸಬೇಕಾಗಿದೆಯೋ ಆ ರೀತಿಯನ್ನು ನಿಯಮಿಸಬಹುದು;

(ಎಫ್) ಔಷಧವು ಯಾವ ರೋಗಗಳು ಅಥವಾ ಕಾಯಿಲೆಗಳನ್ನು ತಡೆಗಟ್ಟುವುದು, ಗುಣಪಡಿಸುವುದು ಅಥವಾ ಉಪಶಮನ ಮಾಡುವುದು ಎಂದು ತೋರಿಬರುವುದಿಲ್ಲವೋ ಅಥವಾ ಹಾಗೆಂದು ಕ್ಲೇಮು ಮಾಡಬಹುದಾಗಿಲ್ಲವೋ ಆ ರೋಗಗಳು ಮತ್ತು ಕಾಯಿಲೆಗಳನ್ನು ಮತ್ತು ಔಷಧವು ಯಾವ ಪರಿಣಾಮಗಳನ್ನು ಹೊಂದಿರುವುದೆಂದು ತೋರಬಹುದಾಗಿಲ್ಲವೋ ಅಥವಾ ಕ್ಲೇಮು ಮಾಡಬಹುದಾಗಿಲ್ಲವೋ ಅಂಥ ಇತರ ಪರಿಣಾಮಗಳನ್ನು ನಿರ್ದಿಷ್ಟಪಡಿಸಬಹುದು;

(ಜಿ) ಯಾವ ಷರತ್ತುಗಳಿಗೊಳಪಟ್ಟು ಔಷಧಗಳ ಸಣ್ಣ ಪ್ರಮಾಣಗಳನ್ನು ಪರೀಕ್ಷೆ, ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ತಯಾರಿಸಬಹುದೋ ಆ ಷರತ್ತುಗಳನ್ನು ನಿಯಮಿಸಬಹುದು;

(ಹೆಚ್) ಯಾವುದೇ ನಿರ್ದಿಷ್ಟಪಡಿಸಿದ ಔಷಧ ಅಥವಾ ಔಷಧಗಳ ವರ್ಗದ ತಯಾರಿಕೆಯ ದಿನಾಂಕ ಮತ್ತು ಬಲ ಕೊನೆಗೊಳ್ಳುವ ದಿನಾಂಕವನ್ನು ಲೇಬಲ್ಲು ಅಥವಾ ಸಂಪುಟದ ಮೇಲೆ ಸ್ಪಷ್ಟವಾಗಿ ಮತ್ತು ಸರಿಯಾಗಿ ನಿರೂಪಿಸುವಂತೆ ಅಗತ್ಯಪಡಿಸಬಹುದು ಮತ್ತು ತಯಾರಿಕೆಯ ದಿನಾಂಕದಿಂದ ನಿರ್ದಿಷ್ಟಪಡಿಸಿದ ಅವಧಿಯು ಕೊನೆಗೊಂಡ ತರುವಾಯ ಅಥವಾ ಬಲದ ದಿನಾಂಕವು ಕೊನೆಗೊಂಡ ತರುವಾಯ ಸದರಿ ಔಷಧ ಅಥವಾ ಔಷಧಗಳ ವರ್ಗಗಳ ಮಾರಾಟ, ಅವುಗಳನ್ನು ದಾಸ್ತಾನು ಮಾಡುವುದು ಅಥವಾ ಮಾರಾಟಕ್ಕಾಗಿ ಪ್ರದರ್ಶಿಸುವುದು ಅಥವಾ ವಿತರಣೆ ಮಾಡುವುದು - ಇವುಗಳನ್ನು ನಿಷೇಧಿಸಬಹುದು;

(ಐ) ಔಷಧಗಳೊಂದಿಗೆ ನೇರ ಸಂಪರ್ಕದಲ್ಲಿ ಬರುವಂಥ ಪ್ಯಾಕಿಂಗ್ ಸಾಮಗ್ರಿಯ ಉಪಯೋಗವನ್ನು ಒಳಗೊಂಡು ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳನ್ನು ಶೀಷೆಗಳು, ಪ್ಯಾಕೇಜುಗಳು ಮತ್ತು ಇತರ ಸಂಪುಟಗಳಲ್ಲಿ ಪ್ಯಾಕು ಮಾಡುವಲ್ಲಿ ಪಾಲಿಸಬೇಕಾದ ಷರತ್ತುಗಳನ್ನು ನಿಯಮಿಸಬಹುದು ಮತ್ತು ಅಂಥ ಷರತ್ತುಗಳನ್ನು ಉಲ್ಲಂಘಿಸಿ, ಪ್ಯಾಕು ಮಾಡಿದ ಔಷಧಗಳು ಅಥವಾ ಪ್ರಸಾಧನ ಸಾಮಗ್ರಿಗಳ ಮಾರಾಟ, ದಾಸ್ತಾನು ಮಾಡುವುದು ಅಥವಾ ಮಾರಾಟಕ್ಕಾಗಿ ಪ್ರದರ್ಶಿಸುವುದು ಅಥವಾ ವಿತರಣೆ ಮಾಡುವುದನ್ನು ನಿಷೇಧಿಸಬಹುದು;

(ಜೆ) ಪ್ಯಾಕು ಮಾಡಿದ ಔಷಧಗಳ ಅಥವಾ ಪ್ರಸಾಧನ ಸಾಮಗ್ರಿಗಳಿಗೆ ಲೇಬಲ್ಲು ಮಾಡುವ ವಿಧಾನವನ್ನು ನಿಯಂತ್ರಿಸಬಹುದು ಮತ್ತು ಅಂಥ ಲೇಬಲ್ಲುಗಳಲ್ಲಿ ಒಳಗೊಳ್ಳತಕ್ಕ ಅಥವಾ ಒಳಗೊಳ್ಳದೆ ಇರತಕ್ಕಂಥ ವಿಷಯಗಳನ್ನು ನಿಯಮಿಸಬಹುದು;

(ಕೆ) ಯಾವುದೇ ಔಷಧಕ್ಕೆ ಸೇರಿಸಬಹುದಾದ ಅಥವಾ ಅದರಲ್ಲಿ ಒಳಗೊಂಡಿರಬಹುದಾದಂಥ ಯಾವುದೇ ವಿಷಪೂರಿತ ಪದಾರ್ಥದ ಗರಿಷ್ಠ ಪ್ರಮಾಣವನ್ನು ನಿಯಮಿಸಬಹುದು. ಆ ಪ್ರಮಾಣವು ಮೀರಿರುವಂಥ ಯಾವುದೇ ಔಷಧದ ತಯಾರಿಕೆ, ಮಾರಾಟ ಅಥವಾ ದಾಸ್ತಾನು ಅಥವಾ ಮಾರಾಟಕ್ಕಾಗಿನ ಪ್ರದರ್ಶನ ಅಥವಾ ವಿತರಣೆಯನ್ನು ನಿಷೇಧಿಸಬಹುದು ಮತ್ತು ಈ ಅಧ್ಯಾಯ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳಿಗಾಗಿ ವಿಷಪೂರಿತವಾಗಿರುವುದಾಗಿ ಭಾವಿಸತಕ್ಕಂಥ ಪದಾರ್ಥಗಳನ್ನು ನಿರ್ದಿಷ್ಟಪಡಿಸಬಹುದು;

(ಎಲ್) ಯಾವುದೇ ನಿರ್ದಿಷ್ಟಪಡಿಸಿದ ಔಷಧದ ಅಂಗೀಕರಿಸಿದ ವೈಜ್ಞಾನಿಕ ಹೆಸರನ್ನು ಅಂಥ ಔಷಧವನ್ನು ಒಳಗೊಂಡಿರುವ ಯಾವುದೇ ಪೇಟೆಂಟ್ ಅಥವಾ ಮಾಲೀಕತ್ವದ ಮದ್ದಿನ ಲೇಬಲ್ಲು ಅಥವಾ ಹೊದಿಕೆಯ ಮೇಲೆ ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸತಕ್ಕುದೆಂದು ಅಗತ್ಯಪಡಿಸಬಹುದು;

** ** ** **

(ಎನ್) ಪರಿಶೀಲಕರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮತ್ತು ಅಂಥ ಪರಿಶೀಲಕರು ಯಾವ ಪ್ರಾಧಿಕಾರಿಗೆ ಅಧೀನರಾಗಿರತಕ್ಕುದೋ ಆ ಪ್ರಾಧಿಕಾರಿಯ ಅರ್ಹತೆಗಳನ್ನು ನಿಯಮಿಸಬಹುದು ಮತ್ತು ಯಾವುದಕ್ಕೆ ಸಂಬಂಧಪಟ್ಟಂತೆ ಮತ್ತು ಯಾವುದಕ್ಕೆ ಒಳಪಟ್ಟು ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸಬಹುದೋ ಅಥವಾ ನೆರವೇರಿಸಬಹುದೋ ಆ ಸಂಬಂಧಪಟ್ಟ ಔಷಧಗಳು ಅಥವಾ ಔಷಧಗಳ ವರ್ಗಗಳು ಅಥವಾ ಪ್ರಸಾಧನ ಸಾಮಗ್ರಿಗಳು ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗಗಳು ಮತ್ತು ಆ ಷರತ್ತುಗಳು, ಪರಿಮಿತಿಗಳು ಅಥವಾ ಪರಿಬಂಧಗಳನ್ನು ನಿರ್ದಿಷ್ಟಪಡಿಸಬಹುದು;

(ಓ) ಸರ್ಕಾರಿ ವಿಶ್ಲೇಷಣಾಧಿಕಾರಿಯು ಕೊಡಬೇಕಾದ ವರದಿಗಳ ನಮೂನೆ ಮತ್ತು 26ನೇ ಪ್ರಕರಣದ ಮೇರೆಗಿನ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಗಾಗಿ ಅರ್ಜಿಯನ್ನು ಮಾಡಿಕೊಳ್ಳಬೇಕಾದ ರೀತಿ ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸಬಹುದು;

(ಪಿ) ಯಾವುದಕ್ಕೆ ಸಂಬಂಧಪಟ್ಟಂತೆ 31ನೇ ಪ್ರಕರಣದ ಮೇರೆಗೆ ಸರ್ಕಾರಕ್ಕೆ ಸೇರಿಸಿಕೊಳ್ಳುವ ಆದೇಶವನ್ನು ಮಾಡಬಹುದೋ ಅದಕ್ಕೆ ಸಂಬಂಧಪಟ್ಟಂತೆ ಈ ಅಧ್ಯಾಯದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಪರಾಧಗಳನ್ನು ನಿರ್ದಿಷ್ಟಪಡಿಸಬಹುದು; ಮತ್ತು

(ಕ್ಯೂ) ಯಾವುದೇ ನಿರ್ದಿಷ್ಟಪಡಿಸಿದ ಔಷಧ ಅಥವಾ ಔಷಧಗಳ ವರ್ಗ ಅಥವಾ ಪ್ರಸಾಧನ ಸಾಮಗ್ರಿ ಅಥವಾ ಪ್ರಸಾಧನ ಸಾಮಗ್ರಿಗಳ ವರ್ಗದ ಬಗ್ಗೆ ಈ ಅಧ್ಯಾಯದ ಎಲ್ಲಾ ಅಥವಾ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಂದ ಷರತ್ತುಪೂರ್ವಕವಾಗಿ ಅಥವಾ ಅನ್ಯಥಾ ವಿನಾಯಿತಿಗಾಗಿ ಉಪಬಂಧಿಸಬಹುದು.

**33ಎ. ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳಿಗೆ ಈ ಅಧ್ಯಾಯವು ಅನ್ವಯವಾಗತಕ್ಕುದಲ್ಲ.–** ಈ ಅಧ್ಯಾಯದಲ್ಲಿ ಅನ್ಯಥಾ ಉಪಬಂಧಿಸಿದ್ದಂತೆ ಹೊರತು, ಈ ಅಧ್ಯಾಯದಲ್ಲಿರುವುದು ಯಾವುದೂ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಿಗಳಿಗೆ ಅನ್ವಯವಾಗತಕ್ಕುದಲ್ಲ.

## ಅಧ್ಯಾಯ –IV ಎ

## ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳಿಗೆ ಸಂಬಂಧಪಟ್ಟ ಉಪಬಂಧಗಳು

**33ಬಿ. ಅಧ್ಯಾಯ IVಎ ದ ಅನ್ವಯ.–** ಈ ಅಧ್ಯಾಯವು ಆಯುರ್ವೇದ, ಸಿದ್ಧ ಮತ್ತು ಔಷಧಗಳಿಗೆ ಮಾತ್ರ ಅನ್ವಯವಾಗತಕ್ಕುದು.

**33ಸಿ. ಆಯುರ್ವೇದ ಮತ್ತು ಯುನಾನಿ ಔಷಧಗಳ ತಾಂತ್ರಿಕ ಸಲಹಾ ಮಂಡಲಿ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧ್ಯಾಯದಿಂದ ಉದ್ಭವಿಸುವ ತಾಂತ್ರಿಕ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆಯನ್ನು ಕೊಡುವುದಕ್ಕಾಗಿ ಮತ್ತು ಈ ಅಧ್ಯಾಯದ ಮೂಲಕ ಅದಕ್ಕೆ ವಹಿಸಿರುವ ಇತರ

ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ತಾಂತ್ರಿಕ ಸಲಹಾ ಮಂಡಲಿ ಎಂದು ಕರೆಯಬೇಕಾದ ಒಂದು ಮಂಡಲಿಯನ್ನು ರಚಿಸತಕ್ಕುದು.

(2) ಆ ಮಂಡಲಿಯು, ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ, -

(i) ಆರೋಗ್ಯ ಸೇವೆಗಳ ಮಹಾ ನಿರ್ದೇಶಕ, ಪದನಿಮಿತ್ತ;

(ii) ಭಾರತದ ಔಷಧಗಳ ನಿಯಂತ್ರಣಾಧಿಕಾರಿ, ಪದನಿಮಿತ್ತ;

(iii) ಆರೋಗ್ಯ ಮಂತ್ರಾಲಯದಲ್ಲಿ ಭಾರತೀಯ ವೈದ್ಯಪದ್ಧತಿಯೊಂದಿಗೆ ವ್ಯವಹರಿಸುವ ಪ್ರಧಾನ ಅಧಿಕಾರಿ, ಪದನಿಮಿತ್ತ;

(iv) ಕಲ್ಕತ್ತಾದ ಕೇಂದ್ರ ಔಷಧಗಳ ಪ್ರಯೋಗಶಾಲೆಯ ನಿರ್ದೇಶಕ, ಪದನಿಮಿತ್ತ;

(v) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ 33ಎಫ್ ಪ್ರಕರಣದ ಮೇರೆಗೆ ಸರ್ಕಾರಿ ವಿಶ್ಲೇಷಣಾಧಿಕಾರಿಯ ಹುದ್ದೆಯನ್ನು ಧಾರಣ ಮಾಡಿರುವ ಒಬ್ಬ ವ್ಯಕ್ತಿ;

(vi) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಔಷಧ ಶಾಸ್ತ್ರಜ್ಞ;

(vii) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಸಸ್ಯ ರಸಾಯನಶಾಸ್ತ್ರಜ್ಞ;

(viii) ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡಬೇಕಾದ ನಾಲ್ಕು ವ್ಯಕ್ತಿಗಳು, - ಅವರಲ್ಲಿ ಆಯುರ್ವೇದ ಔಷಧ ಸಂಹಿತೆ ಸಮಿತಿಯ ಸದಸ್ಯರಿಂದ ಇಬ್ಬರು, ಯುನಾನಿ ಔಷಧ ಸಂಹಿತೆ ಸಮಿತಿಯಿಂದ ಒಬ್ಬನು ಮತ್ತು ಸಿದ್ಧ ಔಷಧ ಸಂಹಿತೆ ಸಮಿತಿಯಿಂದ ಒಬ್ಬನು;

(ix) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ದ್ರವ್ಯಗುಣ ಮತ್ತು ಬೈಷಜ್ಯ ಕಲ್ಪನದಲ್ಲಿನ ಒಬ್ಬ ಶಿಕ್ಷಕ;

(x) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ಇಲ್ಮ್ ಉಲ್ ಅಡಿಯಲ್ಲಿನ ಮತ್ತು ತಾಕ್ಲಿಸ್-ವಾ-ದವಾ ಸಾಜಿಯಲ್ಲಿನ ಒಬ್ಬ ಶಿಕ್ಷಕ;

(xi) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ಗುಣಪಾದಂನಲ್ಲಿನ ಒಬ್ಬ ಶಿಕ್ಷಕ;

(xii) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು, - ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧ ಕೈಗಾರಿಕೆಯನ್ನು ಪ್ರತಿನಿಧಿಸಲು ಪ್ರತಿಯೊಂದಕ್ಕಾಗಿ ಒಬ್ಬನು;

(xiii) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು,- ಆಯುರ್ವೇದ, ಸಿದ್ಧ ಮತ್ತು ಯುನಾನಿ ತಿಬ್ ವೈದ್ಯ ಪದ್ಧತಿಗಳ ವೃತ್ತಿಗರಿಂದ ಪ್ರತಿಯೊಂದಕ್ಕಾಗಿ ಒಬ್ಬನು.

(3) ಕೇಂದ್ರ ಸರ್ಕಾರವು ಮಂಡಲಿಯ ಒಬ್ಬ ಸದಸ್ಯನನ್ನು ಅದರ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕುದು.

(4) ಮಂಡಲಿಯ ನಾಮನಿರ್ದೇಶಿತ ಸದಸ್ಯರು, ಮೂರು ವರ್ಷಗಳಿಗಾಗಿ ಪದಧಾರಣ ಮಾಡತಕ್ಕುದು. ಆದರೆ, ಅವರು ಮರುನಾಮನಿರ್ದೇಶನಕ್ಕಾಗಿ ಅರ್ಹರಾಗಿರತಕ್ಕುದು.

(5) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು, ಕೋರಂ ಅನ್ನು ನಿಗದಿಪಡಿಸಿ ಮತ್ತು ಅದರದೇ ಆದ ಪ್ರಕ್ರಿಯೆಯನ್ನು ಮತ್ತು ಅದು ವ್ಯವಹರಿಸಬೇಕಾದ ಎಲ್ಲಾ ವ್ಯವಹಾರಗಳನ್ನು ನಡೆಸುವುದನ್ನು ನಿಯಂತ್ರಿಸುವ ಉಪವಿಧಿಗಳನ್ನು ರಚಿಸಬಹುದು.

(6) ಮಂಡಲಿಯ ಪ್ರಕಾರ್ಯಗಳನ್ನು ಅದರಲ್ಲಿ ಯಾವುದೇ ಖಾಲಿ ಸ್ಥಾನವು ಇದ್ದಾಗ್ಯೂ ಚಲಾಯಿಸಬಹುದು.

(7) ಕೇಂದ್ರ ಸರ್ಕಾರವು ಮಂಡಲಿಯ ಕಾರ್ಯದರ್ಶಿಯಾಗಿರಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕುದು ಮತ್ತು ಮಂಡಲಿಗೆ ಕೇಂದ್ರ ಸರ್ಕಾರವು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಲಿಪಿಕ ಮತ್ತು ಇತರ ಸಿಬ್ಬಂದಿಯನ್ನು ಒದಗಿಸತಕ್ಕುದು.

**33ಡಿ. ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಸಮಾಲೋಚನಾ ಸಮಿತಿ.–** (1) ಕೇಂದ್ರ ಸರ್ಕಾರವು, ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳ ಸಮಾಲೋಚನಾ ಸಮಿತಿ ಎಂದು ಕರೆಯಬೇಕಾದ ಸಲಹಾ ಸಮಿತಿಯನ್ನು ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳಿಗೆ ಅದು ಸಂಬಂಧಪಡುವಷ್ಟರಮಟ್ಟಿಗೆ, ಈ ಅಧಿನಿಯಮದ ಆಡಳಿತದಲ್ಲಿ ಭಾರತಾದ್ಯಂತ ಏಕರೂಪತೆಯನ್ನು ಸಾಧಿಸುವ ಉದ್ದೇಶಕ್ಕಾಗಿ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಮತ್ತು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ತಾಂತ್ರಿಕ ಸಲಹಾ ಮಂಡಲಿಗೆ ಸಲಹೆ ಮಾಡಲು ರಚಿಸಬಹುದು.

(2) ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಸಮಾಲೋಚನಾ ಸಮಿತಿಯು ಕೇಂದ್ರ ಸರ್ಕಾರವು ಕೇಂದ್ರ ಸರ್ಕಾರದ ಪ್ರತಿನಿಧಿಗಳೆಂದು ನಾಮನಿರ್ದೇಶನ ಮಾಡಬೇಕಾದ ಇಬ್ಬರು ವ್ಯಕ್ತಿಗಳನ್ನು ಒಳಗೊಂಡಿರತಕ್ಕುದು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಪ್ರತಿಯೊಂದು ರಾಜ್ಯದ ಒಬ್ಬ ಪ್ರತಿನಿಧಿಗಿಂತ ಹೆಚ್ಚಿಲ್ಲದವನನ್ನು ಒಳಗೊಂಡಿರತಕ್ಕುದು.

(3) ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಸಮಾಲೋಚನಾ ಸಮಿತಿಯು, ಕೇಂದ್ರ ಸರ್ಕಾರವು ಹಾಗೆ ಮಾಡಲು ಅಗತ್ಯಪಡಿಸಿದಾಗ ಸಭೆ ಸೇರತಕ್ಕುದು ಮತ್ತು ಅದರದೇ ಆದ ಪ್ರಕ್ರಿಯೆಯನ್ನು ನಿಯಂತ್ರಿಸತಕ್ಕುದು.

**33ಇ. ತಪ್ಪಾಗಿ ಗುರುತು ಹಾಕಿದ ಔಷಧಗಳು.–** ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧವನ್ನು, –

(ಎ) ಹಾನಿಯನ್ನು ಮರೆಮಾಡುವ ಹಾಗೆ ಅದಕ್ಕೆ ಬಣ್ಣವನ್ನು ಕೊಡಲಾಗಿದ್ದರೆ, ಲೇಪನ ಮಾಡಿದ್ದರೆ, ಅದನ್ನು ಪುಡಿಮಾಡಿದ್ದರೆ ಅಥವಾ ಅದಕ್ಕೆ ಮೆರುಗು ಕೊಟ್ಟಿದ್ದರೆ ಅಥವಾ ಅದು ವಾಸ್ತವವಾಗಿರುವುದಕ್ಕಿಂತ ಉತ್ತಮ ಅಥವಾ ಹೆಚ್ಚಿನ ಚಿಕಿತ್ಸಾ ಮೌಲ್ಯವುಳ್ಳದ್ದೆಂದು ಕಂಡುಬರುವಂತೆ ಅದನ್ನು ಮಾಡಲಾಗಿದ್ದರೆ; ಅಥವಾ

(ಬಿ) ಅದಕ್ಕೆ ನಿಯಮಿಸಿದ ರೀತಿಯಲ್ಲಿ ಅದಕ್ಕೆ ಲೇಬಲ್ಲುಗಳನ್ನು ಹಾಕಿಲ್ಲದಿದ್ದರೆ; ಅಥವಾ

(ಸಿ) ಅದರ ಲೇಬಲ್ಲು ಅಥವಾ ಸಂಪುಟವು ಅಥವಾ ಆ ಔಷಧದೊಂದಿಗಿರುವ ಯಾವುದೇ ವಸ್ತುವು ಆ ಔಷಧದ ಬಗ್ಗೆ ಯಾವುದೇ ಸುಳ್ಳು ಕ್ಲೇಮನ್ನು ಮಾಡುವಂಥ ಅಥವಾ ಯಾವುದೇ ವಿವರದಲ್ಲಿ ಸುಳ್ಳು ಅಥವಾ ತಪ್ಪು ದಾರಿಗೆ ಎಳೆಯುವಂಥ ಯಾವುದೇ ನಿರೂಪಣೆ, ವಿನ್ಯಾಸ ಅಥವಾ ಸಾಧನವನ್ನು ಹೊಂದಿದ್ದರೆ

- ತಪ್ಪಾಗಿ ಗುರುತು ಮಾಡಿರುವುದಾಗಿ ಭಾವಿಸತಕ್ಕುದು.

**33ಇಇ. ಕಲಬೆರಕೆ ಮಾಡಿದ ಔಷಧಗಳು.-** ಈ ಅಧ್ಯಾಯದ ಉದ್ದೇಶಗಳಿಗಾಗಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು,-

(ಎ) ಅದು ಸಂಪೂರ್ಣವಾಗಿ ಅಥವಾ ಭಾಗಶಃ ಯಾವುದೇ ಹೊಲಸಾದ, ಕೊಳೆತು ನಾರುವ ಅಥವಾ ಕೊಳೆತ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಬಿ) ಯಾವುದರ ಮೂಲಕ ಹೊಲಸಿನೊಂದಿಗೆ ಅದು ಮಲಿನಗೊಂಡಿರುವುದೋ ಅಥವಾ ಯಾವುದರ ಮೂಲಕ ಅದು ಆರೋಗ್ಯಕ್ಕೆ ಹಾನಿಕಾರಕವಾಗಿರಬಹುದೋ ಆ ಅನೈರ್ಮಲ್ಯ ಪರಿಸ್ಥಿತಿಗಳಲ್ಲಿ ಅದನ್ನು ತಯಾರಿಸಲಾಗಿದ್ದರೆ, ಪ್ಯಾಕು ಮಾಡಲಾಗಿದ್ದರೆ ಅಥವಾ ದಾಸ್ತಾನು ಮಾಡಲಾಗಿದ್ದರೆ; ಅಥವಾ

(ಸಿ) ಅದರ ಸಂಪುಟವು ಪೂರ್ಣವಾಗಿ ಅಥವಾ ಭಾಗಶಃ ಒಳಾಂಶಗಳು ಆರೋಗ್ಯಕ್ಕೆ ಹಾನಿಕಾರಕವಾಗಿಸುವಂಥ ಯಾವುದೇ ವಿಷಪೂರಿತ ಅಥವಾ ಅಪಾಯಕರ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಡಿ) ಅದು ಬಣ್ಣ ಭರಿಸುವ ಉದ್ದೇಶಕ್ಕಾಗಿ ಮಾತ್ರವೇ ನಿಯಮಿಸಲಾದುದನ್ನು ಹೊರತುಪಡಿಸಿ ಬಣ್ಣವನ್ನು ಹೊಂದಿದ್ದರೆ ಅಥವಾ ಒಳಗೊಂಡಿದ್ದರೆ; ಅಥವಾ

(ಇ) ಅದು ಆರೋಗ್ಯಕ್ಕೆ ಹಾನಿಕರವಾಗಿಸುವಂತಹ ಯಾವುದೇ ಹಾನಿಕರ ಅಥವಾ ವಿಷವುಳ್ಳ ಪದಾರ್ಥವನ್ನು ಒಳಗೊಂಡಿದ್ದರೆ; ಅಥವಾ

(ಎಫ್) ಅದರ ಗುಣಮಟ್ಟ ಅಥವಾ ಶಕ್ತಿಯನ್ನು ಕಡಿಮೆ ಮಾಡುವಂತೆ ಅದರೊಂದಿಗೆ ಯಾವುದೇ ಪದಾರ್ಥವನ್ನು ಬೆರೆಸಲಾಗಿದ್ದರೆ

- ಕಲಬೆರಕೆ ಮಾಡಲಾಗಿರುವುದಾಗಿ ಭಾವಿಸತಕ್ಕುದು.

**ವಿವರಣೆ:-** (ಎ) ಖಂಡದ ಉದ್ದೇಶಕ್ಕಾಗಿ ಒಂದು ಔಷಧವನ್ನು ಯಾವುದೇ ಕೊಳೆತ ಪದಾರ್ಥವನ್ನು ಸಂಪೂರ್ಣ ಅಥವಾ ಭಾಗಶಃ ಒಳಗೊಂಡಿದೆಯೆಂದು ಅಂಥ ಕೊಳೆತ ಪದಾರ್ಥವು ಆ ಔಷಧದ ಯಾವುದೇ ಸ್ವಾಭಾವಿಕ ಕೊಳೆಯುವಿಕೆಯ ಸಂಗತಿಯ ಕಾರಣ ಮಾತ್ರದಿಂದಲೇ ಭಾವಿಸತಕ್ಕುದಲ್ಲ:

ಪರಂತು, ಅಂಥ ಕೊಳೆಯುವಿಕೆಯು, ಆ ಔಷಧದ ತಯಾರಕ ಅಥವಾ ಅದರ ವ್ಯವಹಾರಿಯ ಯಾವುದೇ ಉಪೇಕ್ಷೆಯಿಂದ ಉಂಟಾಗಿರಕೂಡದು ಮತ್ತು ಅದು, ಆ ಔಷಧವು ಆರೋಗ್ಯಕ್ಕೆ ಹಾನಿಕಾರಕವಾಗಿರಕೂಡದು.

**33ಇಇಎ. ನೈಜವಲ್ಲದ ಔಷಧಗಳು.-** ಈ ಅಧ್ಯಾಯದ ಉದ್ದೇಶಗಳಿಗಾಗಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು,-

(ಎ) ಇನ್ನೊಂದು ಔಷಧಕ್ಕೆ ಸೇರಿರುವ ಹೆಸರಿನಡಿಯಲ್ಲಿ ಅದನ್ನು ಮಾರಾಟ ಮಾಡಿದ್ದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದ್ದರೆ ಅಥವಾ ಪ್ರದರ್ಶಿಸಿದ್ದರೆ; ಅಥವಾ

(ಬಿ) ಅದರ ನಿಜವಾದ ಸ್ವರೂಪವನ್ನು ಮತ್ತು ಅಂಥ ಇತರ ಔಷಧದೊಂದಿಗೆ ಅದರ ಗುರುತಿನ ಅಭಾವವನ್ನು ಬಹಿರಂಗಪಡಿಸುವ ಹಾಗೆ ಅದಕ್ಕೆ ಸ್ಪಷ್ಟವಾಗಿ ಮತ್ತು ಎದ್ದು ಕಾಣುವಂತೆ ಗುರುತು ಹಾಕಿದ್ದ ಹೊರತು, ಅದು ಇನ್ನೊಂದು ಔಷಧದ ಅನುಕರಣೆಯಾಗಿದ್ದರೆ ಅಥವಾ ಅದಕ್ಕಾಗಿ ಬದಲಿಯದು ಆಗಿದ್ದರೆ ಅಥವಾ ವಂಚಿಸುವ ಸಂಭವವಿರುವ ರೀತಿಯಲ್ಲಿ ಇನ್ನೊಂದು ಔಷಧಿಯನ್ನು ಹೋಲುವಂತಿದ್ದರೆ ಅಥವಾ ಅದರ ಮೇಲೆ ಅಥವಾ ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಇನ್ನೊಂದು ಔಷಧದ ಹೆಸರನ್ನು ಹೊಂದಿದ್ದರೆ; ಅಥವಾ

(ಸಿ) ಆ ಲೇಬಲ್ಲು ಅಥವಾ ಸಂಪುಟವು ಆ ಔಷಧದ ತಯಾರಕನಾಗಿರುವುದಾಗಿ ತಾತ್ಪರ್ಯವಾಗುವ ಯಾವ ವ್ಯಕ್ತಿ ಅಥವಾ ಕಂಪನಿಯು ಕಾಲ್ಪನಿಕವಾಗಿರುವುದೋ ಆ ವ್ಯಕ್ತಿ ಅಥವಾ ಕಂಪನಿಯ ಹೆಸರನ್ನು ಹೊಂದಿದ್ದರೆ; ಅಥವಾ

(ಡಿ) ಅದಕ್ಕೆ ಬದಲಾಗಿ ಸಂಪೂರ್ಣವಾಗಿ ಆಥವಾ ಭಾಗಶಃ ಇನ್ನೊಂದು ಔಷಧ ಅಥವಾ ವಸ್ತುವನ್ನು ಸೇರಿಸಲಾಗಿದ್ದರೆ; ಅಥವಾ

(ಇ) ಅದು ನಿಜಕ್ಕೂ ಯಾರ ತಯಾರಿಕೆ ಅಲ್ಲವೋ ಆ ತಯಾರಕನ ಉತ್ಪಾದನೆಯಾಗಿರುವುದಾಗಿ ತಾತ್ಪರ್ಯವಾಗುವ ಹಾಗಿದ್ದರೆ

– ನೈಜವಲ್ಲವೆಂಬುದಾಗಿ ಭಾವಿಸತಕ್ಕುದು.

**33ಇಇಬಿ. ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಮಾರಾಟಕ್ಕಾಗಿನ ತಯಾರಿಕೆಯ ನಿಯಂತ್ರಣ.–** ಯಾವನೇ ವ್ಯಕ್ತಿಯು, ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು, ಆ ಔಷಧಕ್ಕೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ಗುಣಮಟ್ಟಗಳು ಯಾವುವಾದರೂ ಇದ್ದರೆ, ಅವುಗಳಿಗನುಸಾರವಾಗಿಯಲ್ಲದೆ ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸತಕ್ಕುದಲ್ಲ.

**33ಇಇಸಿ. ಕೆಲವು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ತಯಾರಿಕೆ ಮತ್ತು ಮಾರಾಟದ ನಿಷೇಧ.–** ರಾಜ್ಯ ಸರ್ಕಾರವು, ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಯಾವನೇ ವ್ಯಕ್ತಿಯು ಖುದ್ದಾಗಿಯೇ ಆಗಲಿ ಅಥವಾ ಅವನ ಪರವಾಗಿ ಇತರ ಯಾವನೇ ವ್ಯಕ್ತಿಯ ಮೂಲಕವೇ ಆಗಲಿ,–

(ಎ) (i) ಯಾವುದೇ ತಪ್ಪಾಗಿ ಗುರುತು ಮಾಡಿದ, ಕಲಬೆರಕೆ ಮಾಡಿದ ಅಥವಾ ನೈಜವಲ್ಲದ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು;

(ii) ಅದರ ಲೇಬಲ್ಲು ಅಥವಾ ಸಂಪುಟದ ಮೇಲೆ ಅದರಲ್ಲಿ ಒಳಗೊಂಡಿರುವ ಎಲ್ಲಾ ಘಟಕಗಳ ನಿಜವಾದ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸಿದ್ದ ಹೊರತು, ಯಾವುದೇ ಪೇಟೆಂಟ್ ಅಥವಾ ಮಾಲೀಕತ್ವದ ಮದ್ದನ್ನು; ಮತ್ತು

(iii) ಈ ಅಧ್ಯಾಯದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ, ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು

– ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸತಕ್ಕುದಲ್ಲ.

(ಬಿ) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ ತಯಾರಿಸಲಾಗಿರುವಂಥ ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು ಮಾರಾಟ ಮಾಡತಕ್ಕುದಲ್ಲ, ದಾಸ್ತಾನು ಮಾಡತಕ್ಕುದಲ್ಲ ಅಥವಾ ಪ್ರದರ್ಶಿಸತಕ್ಕುದಲ್ಲ ಅಥವಾ ಮಾರಾಟಕ್ಕಾಗಿ ಕೊಡಮಾಡತಕ್ಕುದಲ್ಲ ಅಥವಾ ವಿತರಣೆ ಮಾಡತಕ್ಕುದಲ್ಲ;

(ಸಿ) ನಿಯಮಿಸಿದ ಪ್ರಾಧಿಕಾರವು, ಈ ಅಧ್ಯಾಯದ ಮೇರೆಗೆ, ಅಂಥ ಉದ್ದೇಶಕ್ಕಾಗಿ ಕೊಟ್ಟ ಲೈಸೆನ್ಸಿನ ಮೇರೆಗೆ ಮತ್ತು ಅದರ ಷರತ್ತುಗಳಿಗನುಸಾರವಾಗಿಯಲ್ಲದೆ, ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸತಕ್ಕುದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು ಅವರ ಸ್ವಂತ ರೋಗಿಗಳ ಉಪಯೋಗಕ್ಕಾಗಿ ತಯಾರು ಮಾಡುವ ವೈದ್ಯರು ಮತ್ತು ಹಕೀಮರುಗಳಿಗೆ ಅನ್ವಯವಾಗತಕ್ಕುದಲ್ಲ:

ಮತ್ತೂ ಪರಂತು, ಈ ಪ್ರಕರಣದಲ್ಲಿರುವುದಾವುದೂ ನಿಯಮಿಸಿದ ಷರತ್ತುಗಳಿಗೊಳಪಟ್ಟು ಪರೀಕ್ಷೆ, ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧದ ಸಣ್ಣ ಪ್ರಮಾಣಗಳನ್ನು ತಯಾರಿಸುವುದಕ್ಕೆ ಅನ್ವಯವಾಗತಕ್ಕುದಲ್ಲ.

**33ಇಇಡಿ. ಸಾರ್ವಜನಿಕ ಹಿತಾಸಕ್ತಿಯಲ್ಲಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳ ತಯಾರಿಕೆ ಮುಂತಾದವುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರ.–** ಈ ಅಧ್ಯಾಯದಲ್ಲಿ ಒಳಗೊಂಡಿರುವ ಯಾವುದೇ ಇತರ ಉಪಬಂಧಕ್ಕೆ ಬಾಧಕವಾಗದಂತೆ ಕೇಂದ್ರ ಸರ್ಕಾರಕ್ಕೆ, ಅದರ ಮುಂದೆ ಲಭ್ಯವಿರುವ ಯಾವುದೇ ಸಾಕ್ಷ್ಯ ಅಥವಾ ಇತರ ಸಾಮಗ್ರಿಯ ಆಧಾರದ ಮೇಲೆ ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧದ ಉಪಯೋಗವು ಮನುಷ್ಯರಿಗೆ ಅಥವಾ ಪ್ರಾಣಿಗಳಿಗೆ ಯಾವುದೇ ಅಪಾಯವನ್ನುಂಟುಮಾಡುವ ಸಂಭವವಿದೆ ಎಂದು ಅಥವಾ ಯಾವುದೇ ಅಂಥ ಔಷಧವು ಅದಕ್ಕಾಗಿ ಕ್ಲೇಮು ಮಾಡಿದ ಅಥವಾ ಕ್ಲೇಮು ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಚಿಕಿತ್ಸಾ ಶಾಸ್ತ್ರದ ಮೌಲ್ಯವನ್ನು ಹೊಂದಿಲ್ಲವೆಂದು ಮತ್ತು ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯಕ ಅಥವಾ ವಿಹಿತವಾಗಿದೆ ಎಂದು ಮನದಟ್ಟಾದರೆ, ಆಗ ಆ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಔಷಧದ ತಯಾರಿಕೆ, ಮಾರಾಟ ಅಥವಾ ವಿತರಣೆಯನ್ನು ನಿಷೇಧಿಸಬಹುದು.

**33ಎಫ್. ಸರ್ಕಾರಿ ವಿಶ್ಲೇಷಣಾಧಿಕಾರಿಗಳು.–** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಿಸಿದ ಹಾಗೆ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅವರಿಗೆ ವಹಿಸಿಕೊಡಬಹುದಾದಂಥ ಪ್ರದೇಶಗಳಿಗಾಗಿ ಸರ್ಕಾರಿ ವಿಶ್ಲೇಷಣಾಧಿಕಾರಿಗಳಾಗಿರಲು ಅರ್ಹತೆಗಳನ್ನು ಹೊಂದಿರುವ, ಅದು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವೇ ಆಗಲಿ ಅಥವಾ ರಾಜ್ಯ ಸರ್ಕಾರವೇ ಆಗಲಿ ಯಾವ ಸರ್ಕಾರದ ಅಧೀನದಲ್ಲಿ ಅವನು ಸೇವೆ ಸಲ್ಲಿಸುತ್ತಿರುವನೋ ಆ ಸರ್ಕಾರದ ಪೂರ್ವ ಸಮ್ಮತಿ ಇಲ್ಲದೆ ಅದರ ಅಧೀನದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಯಾರೇ ಅಧಿಕಾರಿಯನ್ನು ಸರ್ಕಾರಿ ವಿಶ್ಲೇಷಣಾಧಿಕಾರಿ ಎಂದು ನೇಮಕ ಮಾಡತಕ್ಕುದಲ್ಲ.

(3) ಯಾವುದೇ ಔಷಧದ ತಯಾರಿಕೆ ಅಥವಾ ಮಾರಾಟದಲ್ಲಿ ಯಾವುದೇ ಹಣಕಾಸು ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು, ಈ ಪ್ರಕರಣದ ಮೇರೆಗೆ ಸರ್ಕಾರಿ ವಿಶ್ಲೇಷಣಾಧಿಕಾರಿಯಾಗಿರಲು ನೇಮಕ ಮಾಡತಕ್ಕುದಲ್ಲ.

**33ಜಿ. ಪರಿಶೀಲಕರು.–** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅವರಿಗೆ ವಹಿಸಿಕೊಡಬಹುದಾದಂಥ ಪ್ರದೇಶಗಳಿಗಾಗಿ ಪರಿಶೀಲಕರಾಗಿರಲು ಅದು ಸೂಕ್ತವೆಂದು ಯೋಚಿಸುವಂಥ, ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ನೇಮಕ ಮಾಡಬಹುದು.

(2) ಪರಿಶೀಲಕನು ಚಲಾಯಿಸಬಹುದಾದಂಥ ಅಧಿಕಾರಗಳು ಮತ್ತು ಅವನು ನೆರವೇರಿಸಬಹುದಾದಂಥ ಕರ್ತವ್ಯಗಳು ಮತ್ತು ಯಾವುದಕ್ಕೆ ಒಳಪಟ್ಟು ಅಂಥ ಅಧಿಕಾರಗಳನ್ನು

ಮತ್ತು ಕರ್ತವ್ಯಗಳನ್ನು ಚಲಾಯಿಸಬಹುದೋ ಅಥವಾ ನೆರವೇರಿಸಬಹುದೋ ಆ ಷರತ್ತುಗಳು, ಪರಿಮಿತಿಗಳು ಅಥವಾ ಪರಿಬಂಧಗಳು ನಿಯಮಿಸಬಹುದಾದಂಥವು ಆಗಿರತಕ್ಕದ್ದು.

(3) ಯಾವುದೇ ಔಷಧದ ತಯಾರಿಕೆ ಅಥವಾ ಮಾರಾಟದಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಪರಿಶೀಲಕನಾಗಿರಲು ನೇಮಕ ಮಾಡತಕ್ಕದ್ದಲ್ಲ.

(4) ಪ್ರತಿಯೊಬ್ಬ ಪರಿಶೀಲಕನನ್ನು, ಭಾರತ ದಂಡ ಸಂಹಿತೆ(1860ರ 45) ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವನನ್ನು ನೇಮಕ ಮಾಡುವ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಅಧಿಕೃತವಾಗಿ ಅವನು ಅಧೀನನಾಗಿರತಕ್ಕದ್ದು.

**33ಹೆಚ್. 22, 23, 24 ಮತ್ತು 25ನೇ ಪ್ರಕರಣಗಳ ಉಪಬಂಧಗಳ ಅನ್ವಯ.**- 22, 23, 24 ಮತ್ತು 25ನೇ ಪ್ರಕರಣಗಳ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಿದ ಯಾವುವೇ ನಿಯಮಗಳು ಯಾವುವಾದರೂ ಇದ್ದರೆ, ಅವುಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಈ ಅಧ್ಯಾಯದ ಮೇರೆಗೆ ನೇಮಕಗೊಂಡ ಪರಿಶೀಲಕ ಮತ್ತು ಸರ್ಕಾರಿ ವಿಶ್ಲೇಷಣಾಧಿಕಾರಿಗೆ ಸಂಬಂಧಪಟ್ಟಂತೆ ಸದರಿ ಪ್ರಕರಣಗಳಲ್ಲಿ "ಔಷಧ" ಎಂಬುದಕ್ಕೆ ಮಾಡಿದ ಉಲ್ಲೇಖಗಳನ್ನು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕ ಮಾರ್ಪಾಟಿಗೆ ಒಳಪಟ್ಟು (IV) ನೇ ಅಧ್ಯಾಯದ ಮೇರೆಗೆ ನೇಮಕಗೊಂಡ ಪರಿಶೀಲಕ ಮತ್ತು ಸರ್ಕಾರಿ ವಿಶ್ಲೇಷಣಾಧಿಕಾರಿಗೆ ಸಂಬಂಧಪಟ್ಟಂತೆ ಅವು ಅನ್ವಯವಾಗುವ ಹಾಗೆ ಅನ್ವಯವಾಗತಕ್ಕದ್ದು.

**33ಐ. ಈ ಅಧ್ಯಾಯವನ್ನು ಉಲ್ಲಂಘಿಸಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧದ ತಯಾರಿಕೆ, ಮಾರಾಟ ಮುಂತಾದವುಗಳಿಗಾಗಿನ ದಂಡನೆ.**- (1) ಯಾರೇ ಆಗಲಿ, ಖುದ್ದಾಗಿಯೇ ಆಗಲಿ ಅಥವಾ ಅವನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕವೇ ಆಗಲಿ,-

(ಎ) (i) 33ಇಇ ಪ್ರಕರಣದ ಮೇರೆಗೆ ಕಲಬೆರಕೆ ಮಾಡಿರುವುದಾಗಿ ಭಾವಿಸಲಾದ, ಅಥವಾ

(ii) 33ಇಇಸಿ ಪ್ರಕರಣದ (ಸಿ) ಖಂಡದ ಮೇರೆಗೆ ಅಗತ್ಯಪಡಿಸಿದಂತೆ ಸಿಂಧುವಾದ ಲೈಸೆನ್ಸ್ ಇಲ್ಲದೆ

- ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ, ಅವನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(ಬಿ) 33ಇಇಎ ಪ್ರಕರಣದ ಮೇರೆಗೆ ನೈಜವಲ್ಲದಿರುವುದಾಗಿ ಭಾವಿಸಿದ ಯಾವುದೇ ಆಯುರ್ವೇದ, ಸಿದ್ಧ, ಅಥವಾ ಯುನಾನಿ ಔಷಧವನ್ನು ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ತಯಾರಿಸಿದರೆ, ಅವನು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದೆ ಇರತಕ್ಕಂಥ ಆದರೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ಆ ನ್ಯಾಯಾಲಯವು, ತೀರ್ಪಿನಲ್ಲಿ ನಮೂದು ಮಾಡಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಗಾಗಿನ

ಕಾರಾವಾಸದ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು; ಅಥವಾ

(2) ಈ ಅಧ್ಯಾಯದ ಅಥವಾ 33ಎಚ್ ಪ್ರಕರಣದ ಮೂಲಕ ಅನ್ವಯಿಸಿದ ಹಾಗೆ 24ನೇ ಪ್ರಕರಣದ ಯಾವುದೇ ಇತರ ಉಪಬಂಧಗಳನ್ನು ಅಥವಾ ಈ ಅಧ್ಯಾಯದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ, ಅವನು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಐದು ನೂರು ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**33ಜೆ. ತರುವಾಯದ ಅಪರಾಧಗಳಿಗಾಗಿ ದಂಡನೆ.**- ಯಾರೇ ಆಗಲಿ, -

(ಎ) 33ಐ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ಆ ಖಂಡದ ಮೇರೆಗಿನ ಅಪರಾಧದ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ ಅವನು, ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಾಗಿಲ್ಲದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(ಬಿ) 33ಐ ಪ್ರಕರಣದ (1) ನೇ ಉಪ ಪ್ರಕರಣದ (ಬಿ) ಖಂಡದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು, ಆ ಖಂಡದ ಮೇರೆಗಿನ ಅಪರಾಧದ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ, ಅವನು ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಆದರೆ ಆರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇರತಕ್ಕಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯವು, ಆ ತೀರ್ಪಿನಲ್ಲಿ ನಮೂದಿಸಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಎರಡು ವರ್ಷಗಳಿಗಿಂತ ಕಡಿಮೆ ಅವಧಿಗಾಗಿನ ಕಾರಾವಾಸದ ಮತ್ತು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು.

(ಸಿ) 33ಐ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು ಆ ಉಪ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಮತ್ತೆ ಅಪರಾಧಿ ಎಂದು ನಿರ್ಣೀತನಾದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಗಾಗಿನ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗಿಲ್ಲದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**33ಕೆ. ಸರ್ಕಾರಕ್ಕೆ ಸೇರಿಸಿಕೊಳ್ಳುವುದು.**- ಯಾವನೇ ವ್ಯಕ್ತಿಯು, ಈ ಅಧ್ಯಾಯದ ಮೇರೆಗೆ ಅಪರಾಧಿ ಎಂದು ನಿರ್ಣೀತನಾಗಿರುವಲ್ಲಿ, ಯಾವುದಕ್ಕೆ ಸಂಬಂಧಿಸಿದಂತೆ ಉಲ್ಲಂಘನೆಯನ್ನು ಮಾಡಲಾಗಿದೆಯೋ ಆ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧದ ದಾಸ್ತಾನು ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಗುರಿಯಾಗತಕ್ಕುದು.

**33ಎಲ್. ಸರ್ಕಾರಿ ಇಲಾಖೆಗಳಿಗೆ ಉಪಬಂಧಗಳ ಅನ್ವಯ.**- 33ಕೆ ಪ್ರಕರಣದಲ್ಲಿ ಒಳಗೊಂಡಿರುವವುಗಳನ್ನು ಹೊರತುಪಡಿಸಿ ಈ ಅಧ್ಯಾಯದ ಉಪಬಂಧಗಳು, ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧವನ್ನು ಮಾರಾಟಕ್ಕಾಗಿ ತಯಾರಿಸುವುದು, ಮಾರಾಟ ಮಾಡುವುದು ಅಥವಾ ಸರ್ಕಾರದ ಯಾವುದೇ ಇಲಾಖೆಯ ಮೂಲಕ ವಿತರಣೆ ಮಾಡುವುದು - ಇವುಗಳಿಗೆ ಸಂಬಂಧಿಸಿದಂತೆ, ಅಂಥ ಔಷಧವನ್ನು ಮಾರಾಟಕ್ಕಾಗಿ

ತಯಾರಿಸುವುದು, ಮಾರಾಟ ಮಾಡುವುದು ಅಥವಾ ಯಾವನೇ ಇತರ ವ್ಯಕ್ತಿಗಳ ಮೂಲಕ ವಿತರಣೆ ಮಾಡುವುದು – ಇವುಗಳಿಗೆ ಸಂಬಂಧಿಸಿದಂತೆ, ಅವು ಅನ್ವಯವಾಗುವ ಹಾಗೆ ಅನ್ವಯವಾಗತಕ್ಕುದು.

**33ಎಂ. ಅಪರಾಧದ ಸಂಜ್ಞೇಯತೆ.–** (1) ಈ ಅಧ್ಯಾಯದ ಮೇರೆಗಿನ ಯಾವುದೇ ಪ್ರಾಸಿಕ್ಯೂಷನನ್ನು 33ಜಿ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಪೂರ್ವಮಂಜೂರಾತಿಯಿಂದ ಪರಿಶೀಲಕನ ಹೊರತು ಬೇರೆ ಯಾರೂ ಹೂಡತಕ್ಕುದಲ್ಲ.

(2) ಮಹಾನಗರ ಮ್ಯಾಜಿಸ್ಟ್ರೇಟು ಅಥವಾ ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ಯಾವುದೇ ನ್ಯಾಯಾಲಯವು, ಈ ಅಧ್ಯಾಯದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

**33ಎನ್. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಅಥವಾ ಅದರ ಶಿಫಾರಸ್ಸಿನ ಮೇಲೆ ಮತ್ತು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ, ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು:

ಪರಂತು, ಕೇಂದ್ರ ಸರ್ಕಾರವು, ಅಂಥ ಸಮಾಲೋಚನೆ ಇಲ್ಲದೆ ನಿಯಮಗಳನ್ನು ರಚಿಸುವುದು ಅದಕ್ಕೆ ಅವಶ್ಯಗೊಳಿಸುವಂಥ ಸಂದರ್ಭಗಳು ಉಂಟಾಗಿವೆ ಎಂದು ಅಭಿಪ್ರಾಯಪಟ್ಟಲ್ಲಿ, ಆ ಮಂಡಲಿಯೊಂದಿಗಿನ ಸಮಾಲೋಚನೆಯನ್ನು ಬಿಟ್ಟುಬಿಡಬಹುದು. ಆದರೆ, ಅಂಥ ಸಂದರ್ಭದಲ್ಲಿ ಆ ನಿಯಮಗಳನ್ನು ರಚಿಸಿದ ಆರು ತಿಂಗಳುಗಳೊಳಗೆ ಆ ಮಂಡಲಿಯೊಂದಿಗೆ ಸಮಾಲೋಚಿಸತಕ್ಕುದು ಮತ್ತು ಕೇಂದ್ರ ಸರ್ಕಾರವು, ಆ ಮಂಡಲಿಯು ಸದರಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಮಾಡಬಹುದಾದಂಥ ಯಾವುವೇ ಸೂಚನೆಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು, –

(ಎ) ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳ ಉಪ ಪರೀಕ್ಷೆಯನ್ನು ಮಾಡುವುದಕ್ಕಾಗಿ ಮತ್ತು ವಿಶ್ಲೇಷಣೆಯನ್ನು ಮಾಡುವುದಕ್ಕಾಗಿ ಪ್ರಯೋಗಶಾಲೆಗಳನ್ನು ಸ್ಥಾಪಿಸುವುದಕ್ಕಾಗಿ ಉಪಬಂಧಿಸಬಹುದು;

(ಬಿ) ಸರ್ಕಾರಿ ವಿಶ್ಲೇಷಣಾಧಿಕಾರಿಗಳ ಅರ್ಹತೆಗಳು ಮತ್ತು ಕಾರ್ಯಗಳನ್ನು ಮತ್ತು ಪರಿಶೀಲಕರ ಅರ್ಹತೆಗಳನ್ನು ನಿಯಮಿಸಬಹುದು;

(ಸಿ) ಯಾವುದೇ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಕ್ಕೆ, ಯಾವುದನ್ನು ಅದು ಒಳಗೊಂಡಿದೆ ಎಂದು ತಾತ್ಪರ್ಯವಾಗುವುದೋ ಆ ಘಟಕಗಳ ನಿಜವಾದ ಪಟ್ಟಿಯೊಂದಿಗೆ ಅದರ ಲೇಬಲ್ಲನ್ನು ಹಾಕಲಾಗಿದೆಯೋ ಹೇಗೆ ಎಂಬುದನ್ನು ನಿರ್ಧರಿಸುವಲ್ಲಿ ಬಳಸಬೇಕಾದ ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ವಿಧಾನಗಳನ್ನು ನಿಯಮಿಸಬಹುದು.

(ಡಿ) ಯಾವುದೇ ಪದಾರ್ಥವನ್ನು ವಿಷಪೂರಿತ ಪದಾರ್ಥವೆಂದು ನಿರ್ದಿಷ್ಟಪಡಿಸಬಹುದು;

(ಇ) ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳನ್ನು ಮಾರಾಟಕ್ಕಾಗಿ ತಯಾರಿಸುವುದಕ್ಕಾಗಿ ಮತ್ತು ಸಂಸ್ಕರಿಸಿದ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳ ಮಾರಾಟಕ್ಕಾಗಿನ ಲೈಸೆನ್ಸುಗಳ ನಮೂನೆಗಳನ್ನು, ಅಂಥ ಲೈಸೆನ್ಸುಗಳಿಗಾಗಿನ ಅರ್ಜಿಯ

ನಮೂನೆಯನ್ನು, ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಲೈಸೆನ್ಸುಗಳನ್ನು ಕೊಡಬಹುದೋ ಆ ಷರತ್ತುಗಳನ್ನು ಅದನ್ನು ಕೊಡಲು ಶಕ್ತಗೊಳಿಸಿದ ಪ್ರಾಧಿಕಾರಿ ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸಬಹುದು ಮತ್ತು ಈ ಅಧ್ಯಾಯದ ಯಾವುದೇ ಉಪಬಂಧ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಉಲ್ಲಂಘಿಸಿರುವಲ್ಲಿ ಅಥವಾ ಅವುಗಳನ್ನು ಯಾವ ಷರತ್ತುಗಳಿಗೊಳಪಟ್ಟು ಕೊಡಲಾಗಿದೆಯೋ ಆ ಯಾವುದೇ ಷರತ್ತನ್ನು ಪಾಲಿಸದೇ ಇರುವಲ್ಲಿನ ಯಾವುದೇ ಪ್ರಕರಣದಲ್ಲಿ ಅಂಥ ಲೈಸೆನ್ಸುಗಳನ್ನು ರದ್ದುಗೊಳಿಸುವುದಕ್ಕಾಗಿ ಅಥವಾ ಅಮಾನತ್ತಿನಲ್ಲಿಡುವುದಕ್ಕಾಗಿ ಉಪಬಂಧಿಸಬಹುದು;

(ಎಫ್) ಆ ಔಷಧಗಳೊಂದಿಗೆ ನೇರ ಸಂಪರ್ಕಕ್ಕೆ ಬರುವಂಥ ಪ್ಯಾಕಿಂಗ್ ಸಾಮಗ್ರಿಯ ಉಪಯೋಗವನ್ನು ಒಳಗೊಂಡು ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳನ್ನು ಪ್ಯಾಕು ಮಾಡುವಲ್ಲಿ ಪಾಲಿಸಬೇಕಾದ ಷರತ್ತುಗಳನ್ನು ನಿಯಮಿಸಬಹುದು, ಪ್ಯಾಕು ಮಾಡಿದ ಔಷಧಗಳ ಮೇಲೆ ಲೇಬಲ್ಲುಗಳನ್ನು ಹಾಕುವ ವಿಧಾನವನ್ನು ವಿನಿಯಮಿಸಬಹುದು ಮತ್ತು ಅಂಥ ಲೇಬಲ್ಲುಗಳಲ್ಲಿ ಯಾವ ವಿಷಯಗಳನ್ನು ಸೇರಿಸತಕ್ಕದೋ ಅಥವಾ ಸೇರಿಸತಕ್ಕದಲ್ಲವೋ ಆ ವಿಷಯಗಳನ್ನು ನಿಯಮಿಸಬಹುದು;

(ಜಿ) ಯಾವ ಷರತ್ತುಗಳಿಗೊಳಪಟ್ಟು ಪರೀಕ್ಷೆ, ಉಪ ಪರೀಕ್ಷೆ ಅಥವಾ ವಿಶ್ಲೇಷಣೆಯ ಉದ್ದೇಶಕ್ಕಾಗಿ, ಸಣ್ಣ ಪ್ರಮಾಣಗಳ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳನ್ನು ತಯಾರಿಸಬಹುದೋ ಆ ಷರತ್ತುಗಳನ್ನು ನಿಯಮಿಸಬಹುದು;

(ಜಿಜಿ) 33ಇಇ ಪ್ರಕರಣದ (ಡಿ) ಖಂಡದ ಮೇರೆಗೆ, ಬಣ್ಣ ಭರಿಸುವ ಉದ್ದೇಶಗಳಿಗಾಗಿ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳು ಯಾವ ಬಣ್ಣ ಅಥವಾ ಬಣ್ಣಗಳನ್ನು ಹೊಂದಿರಬಹುದೋ ಅಥವಾ ಒಳಗೊಂಡಿರಬಹುದೋ ಆ ಬಣ್ಣ ಅಥವಾ ಬಣ್ಣಗಳನ್ನು ನಿಯಮಿಸಬಹುದು;

(ಜಿಜಿಎ) 33ಇಇಬಿ ಪ್ರಕರಣದ ಮೇರೆಗೆ ಆಯುರ್ವೇದ, ಸಿದ್ಧ ಅಥವಾ ಯುನಾನಿ ಔಷಧಗಳಿಗಾಗಿ ಗುಣಮಟ್ಟಗಳನ್ನು ನಿಯಮಿಸಬಹುದು;

(ಹೆಚ್) ಈ ಅಧ್ಯಾಯದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**33ಓ. ಒಂದನೇ ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.**- ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಹಾಗೆ ಮಾಡಲು ಅದರ ಉದ್ದೇಶದ ಬಗ್ಗೆ ಮೂರು ತಿಂಗಳುಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೊಟ್ಟ ತರುವಾಯ, ಅಂಥದೇ ಅಧಿಸೂಚನೆಯ ಮೂಲಕ ಈ ಅಧ್ಯಾಯದ ಉದ್ದೇಶಗಳಿಗಾಗಿ, ಒಂದನೇ ಅನುಸೂಚಿಗೆ ಸೇರ್ಪಡೆ ಮಾಡಬಹುದು ಅಥವಾ ಅದನ್ನು ಅನ್ಯಥಾ ತಿದ್ದುಪಡಿ ಮಾಡಬಹುದು ಮತ್ತು ಅ ತರುವಾಯ ಸದರಿ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಿರುವುದಾಗಿ ಭಾವಿಸತಕ್ಕುದು.

## ಅಧ್ಯಾಯ - V

### ಸಂಕೀರ್ಣ

**33ಪಿ. ನಿರ್ದೇಶನಗಳನ್ನು ಕೊಡುವ ಅಧಿಕಾರ.**- ಕೇಂದ್ರ ಸರ್ಕಾರವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮದ ಅಥವಾ ಆದೇಶದ ಯಾವುದೇ

ಉಪಬಂಧವನ್ನು ರಾಜ್ಯದಲ್ಲಿ ಜಾರಿಗೊಳಿಸುವುದಕ್ಕಾಗಿ, ಕೇಂದ್ರ ಸರ್ಕಾರಕ್ಕೆ ಅವಶ್ಯವಾಗಿರುವುದಾಗಿ ಕಂಡುಬರುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯ ಸರ್ಕಾರಕ್ಕೆ ಕೊಡಬಹುದು.

**34. ಕಂಪನಿಗಳಿಂದ ಅಪರಾಧಗಳು.–** (1) ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವರು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರ ದಂಡಿತರಾಗತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಯಾವನೇ ಅಂಥ ವ್ಯಕ್ತಿಯು, ಅವನ ತಿಳುವಳಿಕೆ ಇಲ್ಲದೆ ಈ ಅಪರಾಧವನ್ನು ಮಾಡಲಾಗಿದೆ ಎಂದು ಅಥವಾ ಅಂಥ ಅಪರಾಧವನ್ನು ಮಾಡುವುದನ್ನು ತಡೆಗಟ್ಟಲು ಅವನು ಎಲ್ಲ ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು ಅವನು ರುಜುವಾತುಪಡಿಸಿದರೆ ಗುರಿಯಾಗಿಸತಕ್ಕುದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಆ ಅಪರಾಧವನ್ನು ಮಾಡಲಾಗಿದೆ ಎಂದು ಅಥವಾ ಅದನ್ನು ಅವನ ಯಾವುದೇ ನಿರ್ಲಕ್ಷ್ಯತೆಗೆ ಆರೋಪಿಸಬಹುದಾಗಿದೆ ಎಂದು ರುಜುವಾತುಪಡಿಸಿದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, –

(ಎ) "ಕಂಪನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ;

(ಬಿ) ಒಂದು ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ, ಆ ಫರ್ಮಿನಲ್ಲಿನ ಪಾಲುದಾರ.

**34ಎ. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು.–** ೪ನೇ ಅಧ್ಯಾಯದ ಅಥವಾ ೪ಎ ಅಧ್ಯಾಯದ ಮೇರೆಗಿನ ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿರುವಲ್ಲಿ, ಔಷಧಗಳ ತಯಾರಿಕೆ, ಮಾರಾಟ ಅಥವಾ ವಿತರಣೆಯ ಪ್ರಭಾರದಲ್ಲಿರುವುದಾಗಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸುವಂಥ ಪ್ರಾಧಿಕಾರಿಯು ಅಥವಾ ಯಾವನೇ ಪ್ರಾಧಿಕಾರಿಯನ್ನು ನಿರ್ದಿಷ್ಟಪಡಿಸದೆ ಇರುವಲ್ಲಿ ಆ ಇಲಾಖೆಯ ಮುಖ್ಯಸ್ಥನನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಸಂದರ್ಭಾನುಸಾರವಾಗಿ IVನೇ ಅಧ್ಯಾಯ ಅಥವಾ IVಎ ಅಧ್ಯಾಯದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಯಾವನೇ ಅಂಥ ಪ್ರಾಧಿಕಾರಿ ಅಥವಾ ವ್ಯಕ್ತಿಯನ್ನು ಅಂಥ ಪ್ರಾಧಿಕಾರಿ ಅಥವಾ ವ್ಯಕ್ತಿಯು, ಅದರ ಅಥವಾ ಅವನ ತಿಳುವಳಿಕೆ ಇಲ್ಲದೆ ಆ ಅಪರಾಧವನ್ನು ಮಾಡಲಾಗಿದೆ ಎಂದು ಅಥವಾ ಅಂಥ ಪ್ರಾಧಿಕಾರಿ

ಅಥವಾ ವ್ಯಕ್ತಿಯು ಅಂಥ ಅಪರಾಧವನ್ನು ಮಾಡುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು ರುಜುವಾತುಪಡಿಸಿದರೆ ಗುರಿಯಾಗಿಸತಕ್ಕುದಲ್ಲ.

**34ಎಎ. ಕಿರುಕುಳಕಾರಿ ಶೋಧನೆ ಅಥವಾ ಅಭಿಗ್ರಹಣಕ್ಕಾಗಿ ದಂಡನೆ.–**

(ಎ) ಯಾರು ಅನುಮಾನಕ್ಕೆ ಯುಕ್ತ ಕಾರಣವಿಲ್ಲದ ಯಾವುದೇ ಸ್ಥಳ, ವಾಹನ, ನೌಕೆ ಅಥವಾ ಇತರ ಯಾನವನ್ನು ಶೋಧಿಸುವನೋ; ಅಥವಾ

(ಬಿ) ಯಾರು ಯಾವನೇ ವ್ಯಕ್ತಿಯನ್ನು ಕಿರುಕುಳಕಾರಕವಾಗಿ ಮತ್ತು ಅನಾವಶ್ಯಕವಾಗಿ ಶೋಧಿಸುವನೋ; ಅಥವಾ

(ಸಿ) ಯಾರು ಕಿರುಕುಳಕಾರಕವಾಗಿ ಮತ್ತು ಅನಾವಶ್ಯಕವಾಗಿ ಯಾವುದೇ ಔಷಧ ಅಥವಾ ಪ್ರಸಾಧನ ಸಾಮಗ್ರಿ, ಅಥವಾ ಯಾವುದೇ ಪದಾರ್ಥ ಅಥವಾ ವಸ್ತು ಅಥವಾ ಯಾವುದೇ ದಾಖಲೆ, ರಿಜಿಸ್ಟರು, ದಸ್ತಾವೇಜು ಅಥವಾ ಇತರ ಭೌತಿಕ ವಸ್ತುವನ್ನು ಅಭಿಗ್ರಹಿಸುವನೋ; ಅಥವಾ

(ಡಿ) ಯಾರು ಅಂಥ ಪರಿಶೀಲಕನೆಂದು ಅವನ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಅಂಥ ಕಾರ್ಯವು ಅಗತ್ಯವಾಗಿದೆ ಎಂದು ನಂಬಲು ಕಾರಣವನ್ನು ಹೊಂದಿಲ್ಲದೆ ಯಾವನೇ ವ್ಯಕ್ತಿಗೆ ಹಾನಿಯಾಗುವ ಹಾಗೆ ಯಾವುದೇ ಇತರ ಕಾರ್ಯವನ್ನು ಮಾಡುವನೋ

– ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಆ ಯಾವನೇ ಪರಿಶೀಲಕನು, ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**35. ಈ ಅಧಿನಿಯಮದ ಮೇರೆಗೆ ಕೊಟ್ಟ ಶಿಕ್ಷೆಗಳ ಆದೇಶವನ್ನು ಪ್ರಕಟಿಸುವುದು.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಬಗ್ಗೆ ಯಾವನೇ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದರೆ, ಯಾವ ನ್ಯಾಯಾಲಯದಲ್ಲಿ ಆ ಅಪರಾಧ ನಿರ್ಣಯವು ನಡೆಯುತ್ತದೋ ಆ ನ್ಯಾಯಾಲಯವು, ಪರಿಶೀಲಕನು ಅದಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ ಆ ಅಪರಾಧಿಯ ಹೆಸರು, ನಿವಾಸ ಸ್ಥಳ, ಯಾವ ಅಪರಾಧದ ಬಗ್ಗೆ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆಯೋ ಆ ಅಪರಾಧ ಮತ್ತು ಅವನಿಗೆ ವಿಧಿಸಲಾಗಿರುವಂಥ ದಂಡನೆ ಇವುಗಳನ್ನು ಅಂಥ ವ್ಯಕ್ತಿಯ ವೆಚ್ಚದಲ್ಲಿ ಆ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ವೃತ್ತಪತ್ರಿಕೆಗಳ ಅಥವಾ ಅಂಥ ಇತರ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕುದು.

(2) ಅಂಥ ಪ್ರಕಟಣೆಯ ವೆಚ್ಚಗಳನ್ನು ಆ ಅಪರಾಧ ನಿರ್ಣಯಕ್ಕೆ ಸಂಬಂಧಪಟ್ಟ ಖರ್ಚುಗಳ ಭಾಗವಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವುಗಳನ್ನು ಆ ಖರ್ಚುಗಳನ್ನು ವಸೂಲು ಮಾಡಬಹುದಾದಂಥದೇ ರೀತಿಯಲ್ಲಿ ವಸೂಲು ಮಾಡತಕ್ಕುದು.

**36. ಹೆಚ್ಚಿಸಲಾದ ದಂಡನೆಗಳನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ಮಹಾನಗರದ ಮ್ಯಾಜಿಸ್ಟ್ರೇಟನಿಗೆ ಅಥವಾ ಮೊದಲನೇ ದರ್ಜೆಯ ಯಾವನೇ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಸದರಿ ಸಂಹಿತೆಯ ಮೇರೆಗಿನ ಅವನ ಅಧಿಕಾರಗಳನ್ನು ಮೀರಿ, ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ವಿಧಿಸಲು ಕಾನೂನುಸಮ್ಮತವಾಗಿರತಕ್ಕುದು.

**36ಎ. ಕೆಲವು ಅಪರಾಧಗಳನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡತಕ್ಕುದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಅಡಕವಾಗಿದ್ದಾಗ್ಯೂ, 33ಐ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಖಂಡದ ಮೇರೆಗಿನ ಅಪರಾಧವನ್ನು ಹೊರತುಪಡಿಸಿ, ಮೂರು

ವರ್ಷಗಳನ್ನು ಮೀರದ ಅವಧಿಯ ಕಾರಾವಾಸದಿಂದ ದಂಡನೀಯವಾದ ಈ ಅಧಿನಿಯಮದ ಮೇರೆಗಿನ ಎಲ್ಲ ಅಪರಾಧಗಳನ್ನು, ರಾಜ್ಯ ಸರ್ಕಾರವು ಈ ಬಗ್ಗೆ ವಿಶೇಷವಾಗಿ ಶಕ್ತಗೊಳಿಸಿದ ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಮಹಾನಗರದ ಮ್ಯಾಜಿಸ್ಟ್ರೇಟನು ಕ್ಷಿಪ್ರವಾಗಿ ಅಧಿವಿಚಾರಣೆಯನ್ನು ಮಾಡತಕ್ಕುದು ಮತ್ತು ಸದರಿ ಸಂಹಿತೆಯ 262ರಿಂದ 265ನೇ ಪ್ರಕರಣಗಳವರೆಗಿನ (ಎರಡನ್ನೂ ಒಳಗೊಂಡು) ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕುದು:

ಪರಂತು, ಈ ಪ್ರಕರಣದ ಮೇರೆಗಿನ ಕ್ಷಿಪ್ರ ಅಧಿವಿಚಾರಣೆಯಲ್ಲಿನ ಯಾವುದೇ ಅಪರಾಧ ನಿರ್ಣಯದ ಪ್ರಕರಣದಲ್ಲಿ ಒಂದು ವರ್ಷವನ್ನು ಮೀರದ ಅವಧಿಗಾಗಿನ ಕಾರಾವಾಸದ ಶಿಕ್ಷೆಯನ್ನು ವಿಧಿಸುವುದು ಮ್ಯಾಜಿಸ್ಟ್ರೇಟನಿಗೆ ಕಾನೂನು ಸಮ್ಮತವಾಗಿರತಕ್ಕುದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗಿನ ಕ್ಷಿಪ್ರ ಅಧಿವಿಚಾರಣೆಯ ಪ್ರಾರಂಭದಲ್ಲಿ ಅಥವಾ ಅದರ ಕ್ರಮದಲ್ಲಿ, ಮ್ಯಾಜಿಸ್ಟ್ರೇಟನಿಗೆ ಆ ಪ್ರಕರಣವು ಒಂದು ವರ್ಷವನ್ನು ಮೀರುವ ಅವಧಿಗಾಗಿನ ಕಾರಾವಾಸದ ಶಿಕ್ಷೆಯನ್ನು ವಿಧಿಸಬೇಕಾಗಬಹುದೆಂದು ಅಥವಾ ಯಾವುದೇ ಇತರ ಕಾರಣಕ್ಕಾಗಿ ಆ ಪ್ರಕರಣವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡುವುದು ಅನಪೇಕ್ಷಣೀಯವಾದುದೆಂದು ಕಂಡುಬಂದಾಗ, ಆ ಮ್ಯಾಜಿಸ್ಟ್ರೇಟನು, ಪಕ್ಷಕಾರರನ್ನು ಸುನಾವಣೆ ಮಾಡಿದ ತರುವಾಯ ಆ ಬಗ್ಗೆ ಆದೇಶವನ್ನು ದಾಖಲು ಮಾಡತಕ್ಕುದು ಮತ್ತು ಆ ತರುವಾಯ ಪರೀಕ್ಷಿಸಿರುವ ಯಾವನೇ ಸಾಕ್ಷಿಯನ್ನು ವಾಪಸ್ಸು ಕರೆಯತಕ್ಕುದು ಮತ್ತು ಸದರಿ ಸಂಹಿತೆಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಆ ಪ್ರಕರಣವನ್ನು ಸುನಾವಣೆ ಅಥವಾ ಮರು ಸುನಾವಣೆ ಮಾಡಲು ಮುಂದುವರಿಯತಕ್ಕುದು.

**37. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ.-** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**38. ಸಂಸತ್ತಿನ ಮುಂದೆ ನಿಯಮಗಳನ್ನು ಇಡತಕ್ಕುದು.-** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಈ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

**ಒಂದನೇ ಅನುಸೂಚಿ**

**[3(ಎ) ಪ್ರಕರಣವನ್ನು ನೋಡಿ]**

ಎ,– ಆಯುರ್ವೇದ ಮತ್ತು ಸಿದ್ಧ ಪದ್ಧತಿಗಳು

| ಕ್ರಮ ಸಂಖ್ಯೆ | ಪುಸ್ತಕದ ಹೆಸರು |
|---|---|
| | ಆಯುರ್ವೇದ |
| 01 | ಆರೋಗ್ಯ ಕಲ್ಪಧ್ರುಮ |
| 02 | ಆರ್ಕಪ್ರಕಾಶ |
| 03 | ಆರ್ಯಭಿಷಕ್ |
| 04 | ಅಷ್ಟಾಂಗ ಹೃದಯ |
| 05 | ಅಷ್ಟಾಂಗ ಸಂಗ್ರಹ |
| 06 | ಆಯುರ್ವೇದ ಕಲ್ಪಧ್ರುಮ |
| 07 | ಆಯುರ್ವೇದ ಪ್ರಕಾಶ |
| 08 | ಆಯುರ್ವೇದ ಸಂಗ್ರಹ |
| 09 | ಬೈಷಜ್ಯ ರತ್ನಾವಳಿ |
| 10 | ಬೃಹತ್ ಭೈಷಜ್ಯ ರತ್ನಾಕರ |
| 11 | ಭಾವ ಪ್ರಕಾಶ |
| 12 | ಬೃಹತ್ ನಿಘಂಟು |
| 13 | ಚರಕ ಸಂಹಿತ |
| 14 | ಚಕ್ರದತ್ತ |
| 15 | ಗಾಢನಿಗ್ರಹ |
| 16 | ಕುಪಿಪಕ್ವ ರಸಾಯನ |
| 17 | ನಿಘಂಟು ರತ್ನಾಕರ |
| 18 | ರಸ ಚಂದ್ರಾಂಶು |
| 19 | ರಸರಾಜ ಸುಂದರ |
| 20 | ರಸರತ್ನ ಸಮುಚ್ಚಯ |
| 21 | ರಸ ತಂತ್ರಸಾರ ಸಿದ್ಧ ಪ್ರಯೋಗ ಸಂಗ್ರಹ |
| 22 | ರಸತರಂಗಿಣಿ |
| 23 | ರಸಯೋಗ ಸಾಗರ |
| 24 | ರಸಯೋಗ ರತ್ನಾಕರ |
| 25 | ರಸಯೋಗ ಸಂಗ್ರಹ |
| 26 | ರಸೇಂದ್ರ ಸಾರ ಸಂಗ್ರಹ |

| | |
|---|---|
| 27 | ರಸ ಪ್ರದೀಪಿಕ |
| 28 | ಸಹಸ್ರ ಯೋಗ |
| 29 | ಸರ್ವರೋಗ ಚಿಕಿತ್ಸಾ ರತ್ನಂ |
| 30 | ಸರ್ವಯೋಗ ಚಿಕಿತ್ಸಾ ರತ್ನಂ |
| 31 | ಶಾರಂಗಧರ ಸಂಹಿತಾ |
| 32 | ಸಿದ್ಧ ಭೈಷಜ್ಯ ಮಣಿಮಾಲ |
| 33 | ಸಿದ್ಧ ಯೋಗ ಸಂಗ್ರಹ |
| 34 | ಸುಶ್ರುತ ಸಂಹಿತ |
| 35 | ವೈದ್ಯ ಚಿಂತಾಮಣಿ |
| 36 | ವೈದ್ಯಕ ಶಬ್ಧ ಸಿಂಧು |
| 37 | ವೈದ್ಯಕ ಚಿಕಿತ್ಸಾಸಾರ |
| 38 | ವೈದ್ಯ ಜೀವನ |
| 39 | ಬಸವ ರಾಜೀಯಂ |
| 40 | ಯೋಗ ರತ್ನಾಕರ |
| 41 | ಯೋಗ ತರಂಗಿಣಿ |
| 42 | ಯೋಗ ಚಿಂತಾಮಣಿ |
| 43 | ಕಶ್ಯಪ ಸಂಹಿತೆ |
| 44 | ಭೇಲ ಸಂಹಿತೆ |
| 45 | ವಿಶ್ವನಾಥ ಚಿಕಿತ್ಸಾ |
| 46 | ವೃಂದ ಚಿಕಿತ್ಸಾ |
| 47 | ಆಯುರ್ವೇದ ಚಿಂತಾಮಣಿ |
| 48 | ಅಭಿನವ ಚಿಂತಾಮಣಿ |
| 49 | ಆಯುರ್ವೇದ ರತ್ನಾಕರ |
| 50 | ಯೋಗ ರತ್ನ ಸಂಗ್ರಹ |
| 51 | ರಸಾಮೃತ |
| 52 | ದ್ರವ್ಯಗುಣ ನಿಘಂಟು |
| 53 | ರಸಮಂಜರಿ |
| 54 | ಬಂಗಸೇನ |

**ಸಿದ್ಧ**

| | |
|---|---|
| 55 | ಸಿದ್ಧವೈದ್ಯ ಥಿರಟ್ಟು |
| 56 | ಥೆರಾಯರ್ ಮಹಾಕರಿಸಾಲ್ |
| 57 | ಬ್ರಹ್ಮಮುನಿ ಕರುಕ್ಕಡೈ (300) |

| | |
|---|---|
| 58 | ಭೋಗರ್ (700) |
| 59 | ಪುಲಿಪ್ಪನಿ (500) |
| 60 | ಅಗಸ್ತಿಯರ್ ಪೆರಿಪುರಾಣಂ (400) |
| 61 | ಥೆರೆಯಾರ್ ಯಾಮಗಮ್ |
| 62 | ಅಗಸ್ತಿಯರ್ ಚೆಂದೂರಂ (300) |
| 63 | ಅಗಸ್ತಿಯಾರ್ (1500) |
| 64 | ಆತ್ಮರಕ್ಷಾಮೃತಂ |
| 65 | ಅಗಸ್ತಿಯರ್ ಷಿನ್ (80) |
| 66 | ಅಗಸ್ತಿಯರ್ ರತ್ನ ಚುರಕ್ಕಂ |
| 67 | ಥೆರಯಾರ್ ಕರಿಸಾಲ್ (300) |
| 68 | ವೀರ ಮಾಮುನಿ ನಾಸಕಂಡಂ |
| 69 | ಅಗಸ್ತಿಯಾರ್ (600) |
| 70 | ಅಗಸ್ತಿಯರ್ ಕಣ್ಮ ಸೂತ್ತಿರಂ |
| 71 | 18 ಸಿದ್ಧಾರರ ಚಿಲ್ಲರೈ ಕೋವೈ |
| 72 | ಯೋಗಿ ವಾಥ ಕಾವಿಯಂ |
| 73 | ಥೆರೆಯಾರ್ ತಾರು |
| 74 | ಅಗಸ್ತಿಯಾರ್ ವೈದ್ಯ ಕಾವಿಯಂ (1500) |
| 75 | ಬಾಲವಾಗಡಂ |
| 76 | ಚಿಮಿಟ್ಟು ರತ್ನ (ರತ್ನ) ಚುರುಕ್ಕಂ |
| 77 | ನಾಗಮುನಿ (200) |
| 78 | ಅಗಸ್ತಿಯಾರ್ ಚಿಲ್ಲರಯ ಕೋವೈ |
| 79 | ಚಿಕಿತ್ಸ ರತ್ನ ದೀಪಂ |
| 80 | ಅಗಸ್ತಿಯಾರ್ ನಯನವಿಧಿ |
| 81 | ಯುಗಿಕರಿಸಾಲ್ (151) |
| 82 | ಅಗಸ್ತಿಯರ್ ವಲ್ಲಾತ್ತಿ |
| 83 | ಥೆರೆಯಾರ್ ತೈಲವಾರ್ಕಂ |

## ಬಿ.- ಯುನಾನಿ ತಿಬ್ ಪದ್ಧತಿ

| ಕ್ರಮ ಸಂಖ್ಯೆ | ಪುಸ್ತಕದ ಹೆಸರು |
|---|---|
| 01 | ಕರಾಬದಿನ್ ಕ್ವಾದ್ರಿ |
| 02 | ಕರಾಬದಿನ್ ಕಬೀರ್ |
| 03 | ಕರಾಬದಿನ್ ಅಜಾಂ |
| 04 | ಇಲಾಜ್-ಉಲ್-ಅಮರಾಜ್ |
| 05 | ಅಲ್ ಕರಾಬದಿನ್ |
| 06 | ಬಿಯಾಜ್ ಕಬೀರ್ ಸಂಪುಟ II |
| 07 | ಕರಾಬದಿನ್ ಜದೀದ್ |

| | |
|---|---|
| 08 | ಕಿತಾಬ್-ಉಲ್-ತಿಕ್ಲೀಸ್ |
| 09 | ಸನತ್-ಉಲ್-ತಿಕ್ಲೀಸ್ |
| 10 | ಮಿಫ್ತಾ -ಉಲ್-ಖಾರ್ಥ್ಯೆನ್ |
| 11 | ಮದನ್-ಉಲ್-ಅಕಸೀರ್ |
| 12 | ಮಕರ್ಝುನ್-ಉಲ್-ಮುರಾಬತೆ |

**ಎರಡನೇ ಅನುಸೂಚಿ**

**(8 ಮತ್ತು 16ನೇ ಪ್ರಕರಣಗಳನ್ನು ನೋಡಿ)**

ಆಮದು ಮಾಡಿಕೊಂಡ ಔಷಧಗಳು ಮತ್ತು ಮಾರಾಟಕ್ಕಾಗಿ ತಯಾರಿಸಿದ, ಮಾರಾಟ ಮಾಡಿದ, ಮಾರಾಟಕ್ಕಾಗಿ ದಾಸ್ತಾನು ಮಾಡಿದ ಅಥವಾ ಪ್ರದರ್ಶಿಸಿದ ಅಥವಾ ವಿತರಣೆ ಮಾಡಿದ ಔಷಧಗಳು ಪಾಲಿಸಬೇಕಾದ ಗುಣಮಟ್ಟಗಳು

| ಔಷಧ ವರ್ಗ | ಪಾಲಿಸಬೇಕಾದ ಗುಣಮಟ್ಟ |
|---|---|
| 1. ಹೋಮಿಯೋಪತಿ ಮದ್ದುಗಳನ್ನು ಹೊರತುಪಡಿಸಿ ಪೇಟೆಂಟ್ ಅಥವಾ ಮಾಲೀಕತ್ವದ ಮದ್ದುಗಳು. | ಲೇಬಲ್ಲು ಅಥವಾ ಸಂಪುಟದ ಮೇಲೆ ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸಿದ ಸೂತ್ರ ಅಥವಾ ಘಟಕಗಳ ಪಟ್ಟಿ ಮತ್ತು ನಿಯಮಿಸ ಬಹುದಾದಂಥ ಇತರ ಗುಣಮಟ್ಟಗಳು. |
| 2.ಲಸಿಕೆಗಳು, ಸಿರಂಗಳು, ಜೀವಾಣು ವಿಷ, ಟಾಕ್ಸಾಯಿಡುಗಳು, ವಿಷ ಪರಿಹಾರಗಳು, ಮತ್ತು ವಿಷನಿರೋಧ ಜನಕಗಳು ಎಂದು ಸಾಮಾನ್ಯವಾಗಿ ತಿಳಿದುಬರುವ ಪದಾರ್ಥಗಳು ಮತ್ತು ಅಂಥದೇ ಸ್ವಭಾವದ ಜೀವಶಾಸ್ತ್ರೀಯ ಉತ್ಪನ್ನಗಳು. | ಕೋಪನ್‌ಹೇಗನ್ ಸ್ಟಾನಟಾನ್ ಸಿರಂ ಇನ್ಸ್‌ಟಿಟ್ಯೂಟ್ ಜೀವಶಾಸ್ತ್ರೀಯ ಗುಣಮಟ್ಟ ಗಳಿಗಾಗಿನ ಅಂತರರಾಷ್ಟ್ರೀಯ ಪ್ರಯೋಗಾಲಯದಲ್ಲಿ ಇಟ್ಟುಕೊಂಡು ಬಂದಿರುವ ಗುಣಮಟ್ಟಗಳು ಮತ್ತು ನಿಯಮಿಸಬಹುದಾದಂಥ ಹೆಚ್ಚಿನ ಶಕ್ತಿ, ಗುಣಮಟ್ಟ ಮತ್ತು ಪರಿಶುದ್ಧತೆಯ ಹೆಚ್ಚಿನ ಗುಣಮಟ್ಟಗಳು. |
| 3. ಜೀವಸತ್ವಗಳು, ಹಾರ್ಮೋನುಗಳು ಮತ್ತು ಸದೃಶ್ಯ ಉತ್ಪಾದಿತ ವಸ್ತುಗಳು. | ಜೀವಶಾಸ್ತ್ರೀಯ ಗುಣಮಟ್ಟಗಳಿಗಾಗಿನ ಅಂತಾರಾಷ್ಟ್ರೀಯ ಪ್ರಯೋಗಾಲಯ ಮತ್ತು ಲಂಡನ್ನಿನಲ್ಲಿರುವ ವೈದ್ಯಕೀಯ ಸಂಶೋಧನೆಗಾಗಿನ ರಾಷ್ಟ್ರೀಯ ಸಂಸ್ಥೆಯಲ್ಲಿ ಇಟ್ಟುಕೊಂಡು ಬಂದಿರುವ ಗುಣಮಟ್ಟಗಳು ಮತ್ತು ನಿಯಮಿಸಬಹುದಾದಂಥ ಶಕ್ತಿ, ಗುಣಮಟ್ಟದ ಮತ್ತು ಪರಿಶುದ್ಧತೆಯ ಹೆಚ್ಚಿನ ಗುಣಮಟ್ಟಗಳು. |

| | |
|---|---|
| 4. ಮಾನವ ಶರೀರದ ರಚನೆ ಅಥವಾ ಯಾವುದೇ ಕ್ರಿಯೆಯ ಮೇಲೆ ಪರಿಣಾಮವನ್ನುಂಟು ಮಾಡುವಂತೆ ಉದ್ದೇಶಿಸಿರುವ ಅಥವಾ ಮನುಷ್ಯರು ಅಥವಾ ಪ್ರಾಣಿಗಳಲ್ಲಿ ರೋಗಗಳನ್ನು ಉಂಟು ಮಾಡುವ ಕ್ರಿಮಿ ಅಥವಾ ಕೀಟಗಳ ನಾಶಕ್ಕಾಗಿ ಉಪಯೋಗಿಸಲು ಉದ್ದೇಶಿಸಿದ (ಆಹಾರವನ್ನು ಹೊರತುಪಡಿಸಿ) ಪದಾರ್ಥಗಳು. | ನಿಯಮಿಸಬಹುದಾದಂಥ ಗುಣಮಟ್ಟಗಳು. |
| **4ಎ. ಹೋಮಿಯೋಪತಿ ಮದ್ದುಗಳು :** | |
| (ಎ) ಭಾರತದ ಹೋಮಿಯೋಪತಿ ವೈದ್ಯ ಗ್ರಂಥದಲ್ಲಿ ಸೇರಿಸಿರುವ ಔಷಧಗಳು. | ತತ್ಕಾಲದಲ್ಲಿ ಭಾರತದ ಹೋಮಿಯೋಪತಿ ವೈದ್ಯ ಗ್ರಂಥದ ಆವೃತ್ತಿಯಲ್ಲಿ ನಿರ್ದಿಷ್ಟಪಡಿಸಿರುವ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳು ಮತ್ತು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು. |
| (ಬಿ) ಭಾರತದ ಹೋಮಿಯೋಪತಿ ವೈದ್ಯ ಗ್ರಂಥದಲ್ಲಿ ಸೇರಿಸದೆ ಇರುವ ಆದರೆ, ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಥವಾ ಯುನೈಟೆಡ್ ಕಿಂಗ್‌ಡಂನ ಹೋಮೀಯೋಪತಿ ವೈದ್ಯ ಗ್ರಂಥ ಅಥವಾ ಜರ್ಮನಿಯ ಹೋಮಿಯೋಪತಿ ವೈದ್ಯ ಗ್ರಂಥದಲ್ಲಿ ಸೇರಿಸಲಾಗಿರುವಂಥ ಔಷಧಗಳು. | ತತ್ಕಾಲದಲ್ಲಿ ಭಾರತದ ಹೋಮಿಯೋಪತಿ ವೈದ್ಯ ಗ್ರಂಥದ ಆವೃತ್ತಿಯಲ್ಲಿ ನಿರ್ದಿಷ್ಟಪಡಿಸಿರುವ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳು ಮತ್ತು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು. |
| (ಸಿ) ಭಾರತದ ಅಥವಾ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಥವಾ ಯುನೈಟೆಡ್ ಕಿಂಗ್‌ಡಂನ ಹೋಮಿಯೋಪತಿ ವೈದ್ಯ ಗ್ರಂಥ ಅಥವಾ ಜರ್ಮನಿಯ ಹೋಮಿಯೋಪತಿ ವೈದ್ಯ ಗ್ರಂಥದಲ್ಲಿ ಸೇರಿಸದಿರುವ ಔಷಧಗಳು. | ಲೇಬಲ್ಲು ಅಥವಾ ಸಂಪುಟದ ಮೇಲೆ ನಿಯಮಿಸಿದ ರೀತಿಯಲ್ಲಿ ಪ್ರದರ್ಶಿಸಿರುವ ಸೂತ್ರ ಅಥವಾ ಘಟಕಗಳ ಪಟ್ಟಿ ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು. |
| **5. ಇತರ ಔಷಧಗಳು :** | |
| (ಎ) ಭಾರತೀಯ ವೈದ್ಯ ಗ್ರಂಥದಲ್ಲಿ ಸೇರಿಸಿರುವ ಔಷಧಗಳು. | ತತ್ಕಾಲದಲ್ಲಿ ಭಾರತೀಯ ವೈದ್ಯ ಗ್ರಂಥದ ಆವೃತ್ತಿಯಲ್ಲಿ ನಿರ್ದಿಷ್ಟಪಡಿಸಿರುವ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳು |

| | |
|---|---|
| | ಮತ್ತು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು.<br><br>ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತೀಯ ವೈದ್ಯ ಗ್ರಂಥದಲ್ಲಿ ಔಷಧಗಳಿಗಾಗಿನ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳನ್ನು ನಿರ್ದಿಷ್ಟಪಡಿಸದಿರುವ ಸಂದರ್ಭದಲ್ಲಿ ಆದರೆ, ಭಾರತೀಯ ವೈದ್ಯ ಗ್ರಂಥದ ನಿಕಟಪೂರ್ವದ ಆವೃತ್ತಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಲ್ಲಿ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳು ಭಾರತೀಯ ವೈದ್ಯ ಗ್ರಂಥದ ಅಂಥ ನಿಕಟಪೂರ್ವದ ಆವೃತ್ತಿಯಲ್ಲಿ ಬರುವಂಥದೇ ಆಗಿರತಕ್ಕುದು ಮತ್ತು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು. |
| (ಬಿ) ಭಾರತೀಯ ವೈದ್ಯ ಗ್ರಂಥದಲ್ಲಿ ಸೇರಿಸದಿರುವ ಆದರೆ, ಯಾವುದೇ ಇತರ ದೇಶದ ಅಧಿಕೃತ ವೈದ್ಯ ಗ್ರಂಥದಲ್ಲಿ ಸೇರಿಸಲಾಗಿರುವ ಔಷಧಗಳು. | ತತ್ಕಾಲದಲ್ಲಿ ಜಾರಿಯಲ್ಲಿರುವುದಕ್ಕಾಗಿ ಯಾವುದೇ ಇತರ ದೇಶದ ಅಂಥ ಅಧಿಕೃತ ವೈದ್ಯ ಗ್ರಂಥದ ಆವೃತ್ತಿಯಲ್ಲಿ ಔಷಧಗಳಿಗಾಗಿ ನಿರ್ದಿಷ್ಟಪಡಿಸಿರುವ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳು ಮತ್ತು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು.<br><br>ಔಷಧಗಳಿಗಾಗಿನ ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಅಂಥ ಅಧಿಕೃತ ವೈದ್ಯ ಗ್ರಂಥದ ಆವೃತ್ತಿಯಲ್ಲಿ ನಿರ್ದಿಷ್ಟಪಡಿಸದಿರುವ ಪ್ರಕರಣದಲ್ಲಿ ಆದರೆ, ನಿಕಟಪೂರ್ವದ ಆವೃತ್ತಿಯಲ್ಲಿ ಅವುಗಳನ್ನು ನಿರ್ದಿಷ್ಟಪಡಿಸಿದ್ದರೆ, ಗುರುತು, ಪರಿಶುದ್ಧತೆ ಮತ್ತು ಶಕ್ತಿಯ ಗುಣಮಟ್ಟಗಳು ಅಂಥ ಅಧಿಕೃತ ವೈದ್ಯ ಗ್ರಂಥದ ಅಂಥ ನಿಕಟಪೂರ್ವದ ಆವೃತ್ತಿಯಲ್ಲಿ ಬರುವಂಥವೇ ಆಗಿರತಕ್ಕುದು ಮತ್ತು ನಿಯಮಿಸಬಹುದಾದಂಥ ಇತರ ಗುಣಮಟ್ಟಗಳು. |